
ಕಲ್ಯಾಣ ಕಿರಣ

ನವೆಂಬರ್ 2004 ಬೆಲೆ : 5 -00 ರೂ







ಧರ್ಮಗುರು ಬಸವಣ್ಣ

ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಹದಿನೆಂಟನೆಯ

ಶರಣ ಮೇಳ



ಗಣ ಧ್ವಜ

2005ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ, ಕೂಡಲಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988 ಜನವರಿ 14, 15 ರಿಂದ 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನೆಂಟನೆಯ ಶರಣ ಮೇಳವು 2005ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ , ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ' ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ಮುಸಲ್ಮಾನ್ ಧರ್ಮಿಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ಬೆಂಗಳೂರು ವಿಳಾಸ :
[illegible] ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು- 10'
ದೂರವಾಣಿ: 080-23325335/23322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587115, ತಾ-ಹುನಗುಂದ,
ಜಿ-ಬಾಗಲಕೋಟೆ. ದೂ : 08351-268038/268007

ಕಲ್ಯಾಣ ಕಿರಣ

ಸಂಪುಟ 35 ಬಸವ ಶಕೆ 871 ಆಜೀವ ಸದಸ್ಯತ್ವ 500 ರೂ.
ಸಂಚಿಕೆ 9 ನವೆಂಬರ್ 2004 ವಾರ್ಷಿಕ ಚಂದಾ 50/- ರೂ.

ಕಿರಣಗನ್ನಡಿ

ಮುಖ ಪುಟ : ದಿ. 15-10-2004 ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಸ್ಥಾಪನೆಯ 35ನೆಯ ವಾರ್ಷಿಕೋತ್ಸವದಂದು ಪೀಠಾರೋಹಣ ಮಾಡಿದ ಪೂಜ್ಯ ಮಾತೆ ಗಂಗಾದೇವಿಯವರು

ರಕ್ಷಾ ಪುಟ : ಎ. ಆರ್. ಎಲ್ ಪರಿವಾರದ ಮಾಲಿಕರಾದ ಆನಂದ ಸಂಕೇಶ್ವರ್ ಅವರಿಂದ ಗೋಷ್ಠಿಯ ಉದ್ಘಾಟನೆ.

KALYANA KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 3325335/3322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

WWW. Vishwakalyana mission .org

ಲಿಂಗಾಯತರ ಇತಿಹಾಸ

- ಡಾ|| ಡಿ.ಸಿ. ಪಾವಟೆ

(ಕರ್ನಾಟಕದ ಅತ್ಯಂತ ಪ್ರತಿಭಾನ್ವಿತ ವ್ಯಕ್ತಿಶ್ರೇಷ್ಠರಲ್ಲಿ ಡಾ|| ಡಿ.ಸಿ. ಪಾವಟೆ ಅವರೊಬ್ಬರು. ಸುರಿತ ಶಿಕ್ಷಣತಜ್ಞ, ಸಮರ್ಥ ಆಡಳಿತಗಾರರಾಗಿ ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಯ ತರುಣದಲ್ಲಿ ಅದರ ಕುಲಪತಿಯಾಗಿ ವಿಶ್ವವಿದ್ಯಾನಿಲಯಕ್ಕೆ ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟ ಧೀಮಂತ ವ್ಯಕ್ತಿ ಅವರು. ಪಂಜಾಬ ರಾಜ್ಯದ ರಾಜ್ಯಪಾಲರಾಗಿ ರಾಜಕೀಯ ಅನಿಶ್ಚಿತೆಯನ್ನು ಸಮರ್ಥವಾಗಿ ನಿಭಾಯಿಸಿ ಪಂಜಾಬ ರಾಜ್ಯದ ಅಭಿವೃದ್ಧಿಗೆ ನಾಂದಿ ಹಾಡಿದ ಡಾ|| ಡಿ.ಸಿ. ಪಾವಟೆಯವರು ಈಗ್ಗೆ ಮೂವತ್ತೊಂದು ವರ್ಷಗಳ ಹಿಂದೆ "ಇಂಡಿಯನ್ ಎಕ್ಸ್‌ಪ್ರೆಸ್" ದಿನ ಪತ್ರಿಕೆಯೊಂದರಲ್ಲಿ 23-12-1973 ರಂದು ಬರೆದು ಪ್ರಕಟಿಸಿದ History of Lingayat Religion ಎಂಬ ಲೇಖನದ ಕನ್ನಡ ಅನುವಾದವಿದು. ಆ ಲೇಖನ ಇಂದಿಗೂ ಪ್ರಸ್ತುತವಾಗಿರುವುದರಿಂದ ಕನ್ನಡದ ಕವಿ; ನಾಟಕಕಾರ ಶ್ರೀ ಸಿದ್ಧಲಿಂಗ ದೇಸಾಯಿ ಅವರು ಅದರ ಕನ್ನಡ ಅನುವಾದವನ್ನಿಲ್ಲಿ ನೀಡಿದ್ದಾರೆ.)

ಬೆಂಗಳೂರಿನಲ್ಲಿಂದು ದಿ. 23-12-1973ರಂದು ನಡೆಯಲಿರುವ ಹತ್ತೊಂಬತ್ತನೇ ಅಖಿಲ ಭಾರತ ವೀರಶೈವ ಮಹಾಸಭಾದ ಅಧಿವೇಶನದಲ್ಲಿ ವೀರಶೈವ ಧರ್ಮದ ಸಂಸ್ಥಾಪಕ ಬಸವೇಶ್ವರರೋ ? ಅಥವಾ ಪಂಚಾಚಾರ್ಯರೋ ? ಎನ್ನುವ ನಿರರ್ಥಕ ಹಳೆಯ ವಾದ ವಿವಾದದ ಬಗ್ಗೆಯೇ ಬಹಳಷ್ಟು ಸಮಯವನ್ನು ಹಾಳು ಮಾಡುವ ಸಾಧ್ಯತೆಗಳಿವೆ.

ನಾನು ಈ ಹಿಂದೆ ಒಂಬತ್ತು ವರ್ಷ ಮಹಾಸಭಾದ ಅಧ್ಯಕ್ಷನಾಗಿದ್ದೆ. ಆ ಕಾಲಾವಧಿಯಲ್ಲಿ ವಸ್ತುಸ್ಥಿತಿ ಕಂಡುಕೊಳ್ಳಲು ಹಲವಾರು ಗ್ರಂಥಗಳನ್ನೋದುವ ಅವಕಾಶ ನನಗೆ ಲಭ್ಯವಾಯಿತು. ಆ ಎಲ್ಲ ಗ್ರಂಥಗಳಲ್ಲೂ ಬಸವೇಶ್ವರರೇ ವೀರಶೈವ ಧರ್ಮದ ಸ್ಥಾಪಕರೆಂದು ಪ್ರಸ್ತಾಪಿತವಾಗಿದೆ. ಮದ್ರಾಸ್ ವಿಶ್ವವಿದ್ಯಾನಿಲಯದ ಇತಿಹಾಸ ಹಾಗೂ ಪುರಾತತ್ವ ವಿಭಾಗದ ನಿವೃತ್ತ ಪ್ರೊಫೆಸರ್‌ರಾದ ನೀಲಕಂಠಶಾಸ್ತ್ರಿ ಅವರು ಬರೆದ "ದಕ್ಷಿಣ ಭಾರತದ ಇತಿಹಾಸ" ಎನ್ನುವ ಗ್ರಂಥ ನನ್ನ ದೃಷ್ಟಿಯಲ್ಲಿ ಅತ್ಯಂತ ವಿಶ್ವಾಸಾರ್ಹವಾದದ್ದು.

ಅವರು ಅದರಲ್ಲಿ ಹೀಗೆ ಹೇಳುತ್ತಾರೆ : "ಕಲ್ಯಾಣದಲ್ಲಿ ರಾಜ್ಯವಾಳುತ್ತಿದ್ದ (1156) ಕಲಚೂರಿ ವಂಶದ ಅರಸು ಬಿಜ್ಜಳನ ಪ್ರಧಾನಮಂತ್ರಿ ಬಸವಣ್ಣ, ಈ ಧರ್ಮದ ಸ್ಥಾಪಕರೆಂದು ಸಾಮಾನ್ಯವಾಗಿ ಗಣಿಸಲಾಗುತ್ತದೆ. ಆದರೆ ಲಿಂಗಾಯತರಲ್ಲಿ ಸಂಪ್ರದಾಯಸ್ಥರು ಇದನ್ನು ವಿರೋಧಿಸುತ್ತಾರಲ್ಲದೇ ಈ ಧರ್ಮವು ಬಹಳ ಪ್ರಾಚೀನವಾದದ್ದೆಂದೂ, ಶಿವನ ಐದು ಮುಖಗಳಿಂದ ಉದ್ಭವಿಸಿದ ಏಕೋರಾಮ, ಪಂಡಿತಾರಾಧ್ಯ, ರೇವಣ, ಮರುಳ, ವಿಶ್ವಾರಾಧ್ಯ ಎಂಬ ಪಂಚ ಆಚಾರ್ಯರು ಈ ಧರ್ಮವನ್ನು ಸ್ಥಾಪಿಸಿರುವರೆಂದೂ, ಬಸವನು ಈ ಧರ್ಮವನ್ನು ಪುನರುಜ್ಜೀವನಗೊಳಿಸಿದನೆಂದೂ ಹೇಳುತ್ತಾರೆ. ಆದರೆ ಮೇಲೆ ಹೆಸರಿಸಿದ ಐದು ಆಚಾರ್ಯರೆಲ್ಲರೂ ಬಸವಣ್ಣನ ಸಮಕಾಲೀನರು. ಅವರಲ್ಲಿ ಕೆಲವರು ಹಿರಿಯರು ಇನ್ನು ಕೆಲವರು ಕಿರಿಯರು ಎನ್ನುವ ವಸ್ತುಸ್ಥಿತಿ ನಮಗೆ ಮನವರಿಕೆಯಾಗುತ್ತದೆ".

ಬಸವೇಶ್ವರ, ಸಾರಾಸಗಟಾಗಿ ವೇದಗಳನ್ನು ಧಿಕ್ಕರಿಸಿ, ಜಾತಿಪದ್ಧತಿಯನ್ನು ನಿರಾಕರಿಸಿದ್ದರಿಂದ ಹಾಗೂ ಸಮಾಜದ ಎಲ್ಲ ಜನರಲ್ಲೂ ಸಾಮಾಜಿಕ ಹಾಗೂ ಧಾರ್ಮಿಕ ಸಮಾನತೆಯನ್ನು ಪ್ರತಿಪಾದಿಸಿದ್ದರಿಂದ ಈ ಒಂದು ವಿವಾದ ಹುಟ್ಟಲು ಕಾರಣವಾಗಿದೆಯೆಂದು ಹೇಳಬಹುದು. ಹೆಚ್ಚೂ ಕಡಿಮೆ ಎಲ್ಲ ಲಿಂಗಾಯತರು ಅಥವಾ ವೀರಶೈವರು ಬಸವಣ್ಣನವರ ಬೋಧನೆಯನ್ನು ಅನುಸರಿಸುತ್ತಾರೆ.

ಹಣದ ಅಪವ್ಯಯ

ಆಂಧ್ರದ ಆರಾಧ್ಯ ಶೈವರು, ಪಂಚಾಚಾರ್ಯರಲ್ಲೊಬ್ಬರಾದ ಪಂಡಿತಾರಾಧ್ಯರ ಅನುಯಾಯಿಗಳಾಗಿದ್ದಾರೆ. ಅವರು ಬಸವೇಶ್ವರರ ವೇದ ಮತ್ತು ಜಾತಿಪದ್ಧತಿಯ ನಿರಾಕರಣತೆಯನ್ನು ಒಪ್ಪುವುದಿಲ್ಲ. ಕರ್ನಾಟಕದಲ್ಲಿಯೂ ಕೆಲ ಮಠಾಧೀಶರು, ಗುಟ್ಟಾಗಿ ಈ ಆಂಧ್ರದ ಆರಾಧ್ಯ ಶೈವರನ್ನು ಅನುಸರಿಸುತ್ತಾರೆ. ಸಮಾಜದ ಕಲ್ಯಾಣಕ್ಕಾಗಿದ್ದ ತಮ್ಮ ಆದಾಯದ ಬಹು ದೊಡ್ಡ ಮೊತ್ತವನ್ನವರು ಬಸವೇಶ್ವರರ ವಿರುದ್ಧದ ಅಪಪ್ರಚಾರಕ್ಕಾಗಿ ಅಪವ್ಯಯ ಮಾಡುತ್ತಾರೆ. ಬಸವಣ್ಣನ ಆಮಂತ್ರಣಕ್ಕೆ ಸ್ಪಂದಿಸಿ ಭಾರತದ ಎಲ್ಲ ಭಾಗಗಳಿಂದ ಕಲ್ಯಾಣದ ಅನುಭವ ಮಂಟಪಕ್ಕೆ ಆಗಮಿಸಿದ ವಿದ್ಯಾವಂತ ಪಂಡಿತರಿಂದ, ಈ ಮೊದಲೇ ಚಾಲ್ತಿಯಲ್ಲಿದ್ದ ಜಾತಿಪದ್ಧತಿಯಿಂದ ವಿಭಜನೆಗೊಂಡ ಹಿಂದೂಗಳಿಗೆ ಇದರಿಂದೇನೂ ಒಳ್ಳೆಯದಾಗದೆ ಇನ್ನಷ್ಟು ಕೆಟ್ಟದ್ದಾಯಿತೆಂದೇ ಹೇಳಬಹುದು. ಅಷ್ಟೊತ್ತಿಗಾಗಲೇ ಉತ್ತರ ಭಾರತದಲ್ಲಿ ನೆಲೆ ಸ್ಥಾಪಿಸಿದ್ದ ಮುಸಲ್ಮಾನರು ಕಾಲಾಂತರದಲ್ಲಿ ದಕ್ಷಿಣ ಭಾರತದ ಮೇಲೂ ಏರಿ ಬರಬಹುದೆಂಬ ಸಂಗತಿಯ ಅರಿವು ಅವರಿಗೆ ಚೆನ್ನಾಗಿ ಗೊತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಜಾತಿಭೇದವಿಲ್ಲದೆ ಎಲ್ಲ ಹಿಂದೂಗಳಿಗೂ ಮುಕ್ತವಾದ ಹೊಸ ಧರ್ಮವೊಂದು ವಿಕಾಸ ಹೊಂದಿತು. ಅದೇ ಜನಪ್ರಿಯವಾಗಿ ಕರೆಯಲ್ಪಡುವ ಲಿಂಗಾಯತ (ಲಿಂಗವಂತ) ಧರ್ಮ.

ಲಿಂಗಾಯತ ಧರ್ಮದಲ್ಲಿ ಗುರು, ಲಿಂಗ, ಜಂಗಮ ಈ ಮೂರು ಭಕ್ತನ ವಿಕಾಸದಲ್ಲಿ ಬಹು ಮಹತ್ವದ ಪಾತ್ರಗಳನ್ನಾಡುತ್ತವೆ. ಪ್ರತಿಯೊಬ್ಬ ಲಿಂಗಾಯತನೂ ತನ್ನ ಅಂಗದ ಮೇಲೆ ಲಿಂಗವನ್ನು ಧರಿಸಬೇಕು (ಪರಮ ದೈವದ ಸಂಕೇತವಾಗಿ) ಜಂಗಮನು ತನ್ನ ಗುರುವಿನ ಪರವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತಿರುಗುತ್ತ ತನ್ನ ಭಕ್ತರು ಋಜು ಮಾರ್ಗದಲ್ಲಿ ನಡೆಯುತ್ತಿದ್ದಾರೋ, ಇಲ್ಲವೋ ? ಎಂಬುದನ್ನು ನೋಡಿಕೊಳ್ಳುತ್ತಿರಬೇಕು. ಈಗಲೂ ಕೂಡ ವ್ಯಕ್ತಿಯ ವೃತ್ತಿ ಹಾಗೂ ಸಾಮಾಜಿಕ ಅಂತಸ್ತನ್ನು ಗಣಿಸದೆ ಯಾವುದೇ ಲಿಂಗಾಯತನ ಮನೆಯಲ್ಲಿ ಜಂಗಮನು ಊಟ ಮಾಡುತ್ತಾನೆ. ಹೊಸ ಧರ್ಮದ ಪರಿಣಾಮದಿಂದ ಸಮಾಜ ಸುಧಾರಣೆಯ ಉತ್ಸಾಹದ ಹೊಸ ಅಲೆಯೇ ಎದ್ದಿತು. ಅದರಂತೆ ಮಧುವರಸ ಎಂಬ ಬ್ರಾಹ್ಮಣನ ಮಗಳಿಗೂ, ಹರಳಯ್ಯನೆಂಬ ಚಮ್ಮಾರನ ಮಗನಿಗೂ ವಿವಾಹ ನಡೆಯಿತು. ಆದರೆ ಇಂಥ ತೀವ್ರ ಸುಧಾರಣಾ ಕ್ರಮಗಳನ್ನು ಸಮಭಾವದಿಂದ ಸ್ವೀಕರಿಸಲು ಸಮಾಜವು ಇನ್ನೂ ಸಿದ್ಧವಾಗಿರಲಿಲ್ಲ. ಇಂಥ ಪದ್ಧತಿಯ ಅನುಷ್ಠಾನವನ್ನು ಕೂಡಲೇ ನಿಲ್ಲಿಸಬೇಕೆಂದು ಹಲವು ಜನ ಬಿಜ್ಜಳನ ಬಳಿ ದೂರು ನೀಡಿದರು.

ಆಗ ಪ್ರಚಲಿತವಿದ್ದ ನ್ಯಾಯದಾನ ಪದ್ಧತಿಯಂತೆ ಮಧುವಯ್ಯ ಹಾಗೂ

ಹರಳಯ್ಯರಿಬ್ಬರಿಗೂ ಮರಣದಂಡನೆ ಶಿಕ್ಷೆ ವಿಧಿಸಲಾಯಿತು. ಬಸವಣ್ಣ ಹಾಗೂ ಅವನ ಅನುಯಾಯಿಗಳನ್ನು ಬಿಜ್ಜಳನ ಸೈನಿಕರು ಬೆನ್ನಟ್ಟಿದರು. ಇತ್ತೀಚೆಗೆ ಕೊಂಜಾಪುರದಲ್ಲಿ ಸಿಕ್ಕ ಶಾಸನವೊಂದರ ಪ್ರಕಾರ ಚಾಲುಕ್ಯರಿಗೆ ಅತ್ಯಂತ ನಿಷ್ಠರಾಗಿದ್ದ ಗುತ್ತರಸರ ಸಂತತಿಯ ಮಲ್ಲಿದೇವ ಹಾಗೂ ಜಗದೇವ ಎಂಬಿಬ್ಬರು ಬಿಜ್ಜಳನ ಶಿರಚ್ಛೇದ ಮಾಡಿದರು.

ಸಮಾಜದಲ್ಲಿಯ ಎಲ್ಲ ವರ್ಗದ ಜನರಿಗೂ ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿ ಸಂಪೂರ್ಣ ಸಮಾನತೆ ಹಾಗೂ ತಮ್ಮ ಸಂಪತ್ತಿನ ಬಲದಿಂದ ಯಾರು ಸಮಾಜವಿರೋಧಿಗಳಾಗಿ ವರ್ತಿಸುತ್ತಾರೋ ಅಂಥವರನ್ನು ಕೀಳಾಗಿ ಕಾಣುವದು ಈ ಎರಡು ಗುಣಲಕ್ಷಣಗಳಿಂದಾಗಿ ಹೊಸ ಧರ್ಮ ಹೆಚ್ಚು ಜನಪ್ರಿಯವಾಯಿತು. ಪಂಡಿತಾರಾಧ್ಯರ ಅನುಯಾಯಿಗಳೂ ಕೂಡ ಲಿಂಗಾಯತರೊಂದಿಗೆ ಸ್ನೇಹಭಾವದಿಂದಿದ್ದರು. ನೀಲಕಂಠ ಶಾಸ್ತ್ರಿಗಳು ಸ್ಪಷ್ಟಪಡಿಸಿದಂತೆ ''ಮುಸಲ್ಮಾನರ ದುರಾಕ್ರಮಣವನ್ನು ತಡೆಯಲು ಹಾಗೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ದಾರಿ ಸುಗಮಗೊಳಿಸಲು'' ಪ್ರತ್ಯಕ್ಷವಾಗಿ ಅವರಿಬ್ಬರೂ ಹದಿನಾಲ್ಕನೇ ಶತಮಾನದಲ್ಲಿ ಕೂಡಿಕೊಂಡರು. ಯಾವುದೇ ಧರ್ಮ ಪ್ರಸಾರವಾಗಬೇಕಾದರೆ ಎರಡು ಸಂಗತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಮೊದಲನೆಯದಾಗಿ ಪರಿಣಾಮಕಾರಿಯಾದ ಧಾರ್ಮಿಕ ವಿಷಯಗಳ ಮೇಲೆ ನಿಯಮಿತವಾಗಿ ಗೋಷ್ಠಿಗಳನ್ನು ನಡೆಸುವುದು. ಎರಡನೆಯದ್ದಾಗಿ ನೈತಿಕ ಹಾಗೂ ಧಾರ್ಮಿಕ ವಿಷಯಗಳ ಬಗ್ಗೆ ಯೋಗ್ಯ ಸಾಹಿತ್ಯ ನಿರ್ಮಾಣ ಮಾಡುವುದು. ಲಿಂಗಾಯತರು ಈ ದಿಶೆಯಲ್ಲಿ ಪ್ರತಿಯೊಂದು ಪಟ್ಟಣ ಹಾಗೂ ಹಳ್ಳಿಯಲ್ಲೂ ಮಠಗಳನ್ನು ಸ್ಥಾಪಿಸಿ ಆ ಮಠಗಳ ಉಸ್ತುವಾರಿ ನೋಡಿಕೊಳ್ಳುವ ಜಂಗಮರು ಪ್ರತಿನಿತ್ಯ ಸಾಯಂಕಾಲ ಗೋಷ್ಠಿಗಳನ್ನೇರ್ಪಡಿಸಿ ಬಸವೇಶ್ವರರ ಹಾಗೂ ಇನ್ನುಳಿದ ಶರಣರ ತತ್ವಗಳನ್ನು ಪಾಲಿಸುವಂತೆ ಜನರಲ್ಲಿ ಸ್ಫೂರ್ತಿಯನ್ನು ತುಂಬಿದರು. ಈ ಒಂದು ಸಂಪ್ರದಾಯ ಅನುಭವ ಮಂಟಪದ ಕಾಲದಿಂದಲೂ ಬಂದುದಾಗಿದೆ.

ಇದಕ್ಕೂ ಮೊದಲು ಹಿಂದೂ ಧರ್ಮದ ಸುಮಾರು ಎಲ್ಲ ಧಾರ್ಮಿಕ ಸಾಹಿತ್ಯ ಸಂಸ್ಕೃತದಲ್ಲಿತ್ತು. ಕೆಲವೇ ಜನ ಪಂಡಿತರನ್ನುಳಿದು ಇನ್ನುಳಿದ ಬ್ರಾಹ್ಮಣರಿಗೂ ಕೂಡ ಅದು ಅರ್ಥವಾಗುತ್ತಿರಲಿಲ್ಲ. ಯುರೋಪ ಖಂಡದಲ್ಲೂ ಕೂಡ ಆ ಕಾಲದಲ್ಲಿ ಇಂಥದೇ ಪರಿಸ್ಥಿತಿಯಿತ್ತು. ಬಸವೇಶ್ವರರಿಂದ ದಕ್ಷಿಣ ಭಾರತದಲ್ಲಿ ಬಹು ಬೇಗನೆ ಧಾರ್ಮಿಕ ಪುನರುಜ್ಜೀವನ ಆರಂಭವಾಗಿ ಸಾವಕಾಶವಾಗಿ ಅದು ಸಂಪೂರ್ಣ ಉತ್ತರ ಭಾರತವನ್ನು ವ್ಯಾಪಿಸಿತು. ಜನಸಾಮಾನ್ಯನೂ ಕೂಡ ಓದಿ ತನ್ನ ಧರ್ಮವು ಏನನ್ನು ಬೋಧಿಸುತ್ತದೆ ಎನ್ನುವದು ತಿಳಿಯುವಂತಾಗಬೇಕೆನ್ನುವುದೇ ಬಸವೇಶ್ವರರ ಯೋಜನೆಯಾಗಿತ್ತು. ಹೀಗಾಗಿ ಅವರು ಹಳೆಯ ಸಂಸ್ಕೃತ ಗ್ರಂಥಗಳಲ್ಲಿಯ ಮೌಲಿಕ ವಿಚಾರವನ್ನು ಸರಳ ಕನ್ನಡದಲ್ಲಿ ದೊರಕುವಂತೆ ಮಾಡಿದರು.

ನೂರು ವರ್ಷಗಳ ನಂತರ ಮಹಾರಾಷ್ಟ್ರದಲ್ಲಿಯೂ ಕೂಡ ಇಂಥದೇ ಒಂದು ಚಳುವಳಿ ಜ್ಞಾನದೇವ ಅವರ ನೇತೃತ್ವದಲ್ಲಿ ಆರಂಭವಾಯಿತು. ಜ್ಞಾನದೇವ ಅವರು ಇನ್ನುಳಿದ ಸಮಾಜ ಸುಧಾರಣಾ ಕ್ರಮಗಳೊಂದಿಗೆ ಭಗವದ್ಗೀತೆಯನ್ನು ಪ್ರಪ್ರಥಮವಾಗಿ ಮರಾಠಿಗೆ ಭಾಷಾಂತರಿಸಿದರು. ಉತ್ತರ ಭಾರತದಲ್ಲಿ ತುಳಸಿದಾಸರು ಇದೇ ಮಾದರಿಯ ಆಂದೋಲನವನ್ನು

ಹುಟ್ಟು ಹಾಕಿದರೆ ಹನ್ನೆರಡನೇ ಶತಮಾನದಲ್ಲಿ ಬಸವೇಶ್ವರರು ಲಿಂಗಾಯತ ಧರ್ಮವನ್ನು ಆರಂಭಿಸಿದಂತೆ ಹದಿನೈದನೇ ಶತಮಾನದಲ್ಲಿ ಗುರುನಾನಕರು ಸಿಖ್ ಧರ್ಮವನ್ನು ಆರಂಭಿಸಿದರು.

ಜನಸಮೂಹಕ್ಕೆ ಶಿಕ್ಷಣ ನೀಡಲು ಬಸವೇಶ್ವರರು ಸರ್ವ ಗ್ರಾಹ್ಯವಾದ ''ವಚನ'' ಎನ್ನುವ ಗದ್ಯಕಾವ್ಯ ಪ್ರಕಾರವೊಂದನ್ನು ಹುಟ್ಟು ಹಾಕಿ ಆ ಸಾಹಿತ್ಯ ಪ್ರಕಾರವನ್ನು ಶ್ರೀಮಂತಗೊಳಿಸಿದರು. ಹನ್ನೆರಡನೆಯ ಶತಮಾನದಷ್ಟೊತ್ತಿಗೆ ಹಲವು ಮಹಿಳೆಯರನ್ನೊಳಗೊಂಡು ಇಂಥ ಒಟ್ಟು ಎರಡು ನೂರು ವಚನಕಾರರಾಗಿ ಹೋಗಿದ್ದಾರೆ. ಈ ಎಲ್ಲ ಚಟುವಟಿಕೆಗಳಿಂದಾಗಿ ಹೊಸಧರ್ಮವು ಹೆಚ್ಚೆಚ್ಚು ಜನಪ್ರಿಯವಾಯಿತು. ಬಸವಣ್ಣ ಹಾಗೂ ಅವರ ಅನುಯಾಯಿಗಳು ಮಾಡಿದ ವೈಯಕ್ತಿಕ ಬಲಿದಾನ ಜನರ ಮೇಲೆ ಗಾಢವಾದ ಪರಿಣಾಮವನ್ನು ಬೀರಿತ್ತು. ಹೀಗಾಗಿ ಜಂಗಮರ ಪ್ರೇರಣೆಯಿಂದ ಎಲ್ಲ ಮತ ಪಂಥಗಳ ಜನ ಹೊಸದಾದ ಲಿಂಗಾಯತ ಧರ್ಮವನ್ನು ಅತ್ಯುತ್ಸಾಹದಿಂದ ಅಪ್ಪಿಕೊಂಡರು. ಈ ಎಲ್ಲದರಿಂದಾಗಿ ಹಿಂದೂಗಳ ರಾಜಕೀಯದ ಮೇಲೆ ಬಹಳ ಗಾಢವಾದ ಪರಿಣಾಮ ಬೀರಿತು. ಹದಿಮೂರನೇ ಶತಮಾನದ ಮಧ್ಯಾವಧಿಯಷ್ಟೊತ್ತಿಗೆ ಅಂದರೆ ಕಾಕತೀಯ ಅರಸರ ಆಳ್ವಿಕೆಯ ಅವಧಿಯಲ್ಲಿ ದಕ್ಷಿಣ ಭಾರತದ ತುಂಬೆಲ್ಲ ಲಿಂಗಾಯತರ ರಾಜಕೀಯ ಪ್ರಭಾವ ವಿಸ್ತರಿಸಿತು.

ಈ ನಡುವಣ ಅವಧಿಯಲ್ಲಿ ಮುಸಲ್ಮಾನರು ದಕ್ಷಿಣ ಭಾರತದಲ್ಲಿ ಆಕ್ರಮಣ ನಡೆಸಿಯೇ ಬಿಟ್ಟಿದ್ದರು. 1325ರಷ್ಟೊತ್ತಿಗೆ ಸಂಪೂರ್ಣ ದಕ್ಷಿಣ ಭಾರತವನ್ನೆಲ್ಲ ಕೈವಶ ಮಾಡಿಕೊಂಡು ಬಿಟ್ಟಿದ್ದರು. ಜನ ಇದರಿಂದ ಅಸಂತುಷ್ಟರಾಗಿದ್ದರಲ್ಲದೆ ಲಿಂಗಾಯತ ಧರ್ಮದ ಪ್ರೇರಣೆಯಿಂದ ಮುಸಲ್ಮಾನರಿಂದ ಮುಕ್ತರಾಗುವ ಚಳುವಳಿಯನ್ನು ಆರಂಭಿಸಿದರು. ಈ ಸಂಬಂಧವಾಗಿ ನೀಲಕಂಠ ಶಾಸ್ತ್ರಿಗಳು ಹೀಗೆ ಹೇಳುತ್ತಾರೆ: ''ಮುಸಲ್ಮಾನರ ಆಳ್ವಿಕೆಯನ್ನು ಜನ ಇಚ್ಛಾಪೂರ್ವಕವಾಗಿ ಒಪ್ಪಿರಲೇ ಇಲ್ಲ. ಆ ಕಾಲದ ಜನ ಹಾಗೂ ಜನನಾಯಕರು ಅದಾಗಲೇ ಹೊಸ ಧರ್ಮದ ಗಾಢವಾದ ಪ್ರಭಾವಕ್ಕೊಳಗಾಗಿಬಿಟ್ಟದ್ದರು ಹೀಗಾಗಿ ನಿಷ್ಕ್ರಿಯರಾಗಿ ಪಾಷಂಡತನಕ್ಕೆ ತಲೆಬಾಗುವ ಸ್ಥಿತಿಯಲ್ಲಾಗಲಿ ಅಥವಾ ತಮ್ಮ ಬಹು ದಿನಗಳ ಧಾರ್ಮಿಕ ಆಚರಣೆಗಳು ಬುಡಮೇಲಾಗುವುದನ್ನು ಸಹಿಸಿಕೊಳ್ಳುವ ಮನಸ್ಥಿತಿಯಲ್ಲವರಿರಲಿಲ್ಲ''.

ಯೋಗ್ಯ ಪ್ರತಿಸ್ಪರ್ಧಿ

ಶಿವನಲ್ಲಿ ಏಕನಿಷ್ಠ ಭಕ್ತಿಯನ್ನು ಹೊಂದಿ ಇನ್ನುಳಿದ ಪಂಥದವರು ಭವಿಗಳೆಂಬ ಕಳಂಕವನ್ನು ಆರೋಪಿಸಿ ಶಿವಭಕ್ತರೆಲ್ಲರೂ ಸಮಾನರು ಎಂಬ ಏಕತೆಯ ಆದರ್ಶವನ್ನು ಬೋಧಿಸಿದ ಈ ನೂತನ ಧರ್ಮವು ದಕ್ಷಿಣದ ಹಲವಾರು ಭಾಗಗಳಲ್ಲಿ ತನ್ನ ಅಧಿಕಾರದ ಬೇರು ಬಿಡಬೇಕೆನ್ನುವ ತೊಘಲಕನ ಪ್ರಯತ್ನ ಅಯಶಸ್ವಿಯಾಗುವಂತೆ ಮುಸಲ್ಮಾನ ಧರ್ಮಕ್ಕೆ ಯೋಗ್ಯ ಪ್ರತಿಸ್ಪರ್ಧಿಯಾಗಿ ರಾಜಕೀಯ ಚಾಲನ ಶಕ್ತಿ ನೀಡಿದ್ದು ಸಣ್ಣ ಮಾತೇನಲ್ಲ. ಪ್ರಥಮತಃ, ವಿಜಯನಗರ ಸಾಮ್ರಾಜ್ಯವು ಸಂಗಮವಂಶದ ರಾಜರುಗಳಿಂದ 1336ರಿಂದ 1485ರವರೆಗೆ ಆಳಲ್ಪಟ್ಟಿತ್ತು. ಇತ್ತೀಚೆಗೆ ಈ ರಾಜವಂಶದ ಬಗ್ಗೆ ಪುಸ್ತಕವೊಂದನ್ನು ಬರೆದ ಇತಿಹಾಸದ ಪ್ರಾಧ್ಯಾಪಕರೊಬ್ಬರು ಈ ರಾಜ್ಯವನ್ನಾಳಿದ ರಾಜರೆಲ್ಲರೂ ಲಿಂಗಾಯತರಾಗಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ. ಇನ್ನುಳಿದ

ಇತಿಹಾಸಕಾರರು ಈ ನಿಲವನ್ನು ಒಪ್ಪುತ್ತಾರೆಂದು ನನಗೇನೂ ಅನಿಸುವುದಿಲ್ಲ. ಆದರೆ ಎರಡನೇ ದೇವರಾಯನಿಂದ ಹಿಡಿದು ಎರಡನೇ ವಿರುಪಾಕ್ಷ (1422 ರಿಂದ 1485ರವರೆಗೆ) ನವರೆಗಿನ ಮೂರು ತಲೆಮಾರುಗಳ ರಾಜರುಗಳು ಲಿಂಗಾಯತ ಧರ್ಮವನ್ನು ಸ್ವೀಕರಿಸಿದ ಸಂಭಾವ್ಯತೆ ಹೆಚ್ಚಾಗಿ ಕಂಡುಬರುತ್ತದೆ. ಕೇವಲ ಸಾಹಿತ್ಯ ರಚನಾ ದೃಷ್ಟಿಯಿಂದ ನೋಡಿದರೆ ಸಂಗಮ ವಂಶದ ಆಡಳಿತಾವಧಿಯನ್ನು ಲಿಂಗಾಯತ ಸಾಹಿತ್ಯ ನಿರ್ಮಿತಿಯ ಕಾಲವೆಂದು ಕರೆಯಬಹುದು. ಹೊಸ ಧರ್ಮವು ಜನಪ್ರಿಯವಾದ ಕಾಲದಿಂದ ಅಂದರೆ ಸುಮಾರು ಎರಡು ನೂರು ವರ್ಷಗಳಿಂದಲೂ ವಚನ ಸಾಹಿತ್ಯ, ಮಹಾಕಾವ್ಯಗಳಲ್ಲದೆ ಧಾರ್ಮಿಕ ಸಾಹಿತ್ಯದ ನಿರ್ಮಿತಿ ನಡೆದಿತ್ತಾದರೂ ಈ ಸಂಗಮ ವಂಶದ ಅರಸರ ಕಾಲದಲ್ಲಿ ಮಾತ್ರ ಜನಸಾಮಾನ್ಯರಲ್ಲದೆ ಆಳರಸರೂ ಕೂಡ ಲಿಂಗಾಯತ ಸಾಹಿತ್ಯ ಹಾಗೂ ತತ್ತ್ವಜ್ಞಾನಗಳಲ್ಲಿ ಅತ್ಯಂತ ಆಸಕ್ತಿಯುಳ್ಳವರಾಗಿದ್ದರು.

ಎರಡನೆಯ ವಿರುಪಾಕ್ಷ ಅರಸನ ಕಾಲದಲ್ಲಿಯೇ ಏಳುನೂರು ವಚನಗಳ ಗದ್ಯಗ್ರಂಥ ರಚಿಸಿದ ದೊಡ್ಡ ತತ್ತ್ವಜ್ಞಾನಿ ತೋಂಟದ ಸಿದ್ದೇಶ್ವರ ಹಾಗೂ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪಾರವಾದ ಬರವಣಿಗೆ ಮಾಡಿದ ನಿಜಗುಣ ಶಿವಯೋಗಿಗಳಂಥವರು ಆಗಿ ಹೋಗಿದ್ದಾರೆ. ಎರಡನೇ ದೇವರಾಯನಲ್ಲಿ ಪ್ರಧಾನಮಂತ್ರಿಯಾಗಿದ್ದ ಜಕ್ಕಣಾರ್ಯ ಹಾಗೂ ಅವನ ಸೈನ್ಯದ ದಂಡನಾಯಕನಾಗಿದ್ದ ಲಕ್ಕಣ್ಣ ಎಂಬಿಬ್ಬರು ಉತ್ಸಾಹಿಗಳಲ್ಲಿ, ಲಕ್ಕಣ್ಣನು ಹೋರಾಟದಲ್ಲಿ ವೀರ ಕಲಿಯಾಗಿದ್ದನಲ್ಲದೆ ಬಹುದೊಡ್ಡ ಪಾಂಡಿತ್ಯವನ್ನೂ ಹೊಂದಿದ್ದ ಆತ, ವೀರಶೈವ ಧರ್ಮದ ತತ್ತ್ವ ಹಾಗೂ ಆಚರಣೆಗಳನ್ನು ಬೋಧಿಸುವ ''ಶಿವತತ್ತ್ವ ಚಿಂತಾಮಣಿ'' ಎಂಬ ಗ್ರಂಥವನ್ನು ರಚಿಸಿದ್ದಾನೆ. ಅದರಂತೆ ಜಕ್ಕಣಾರ್ಯರೂ ಕೂಡ ಬಹು ದೊಡ್ಡ ಪಂಡಿತರಾಗಿದ್ದರಲ್ಲದೆ ''ನೂರೊಂದು ಸ್ಥಲ'' ಎಂಬ ಕೃತಿಯನ್ನು ರಚಿಸಿದ್ದಾರೆ. ಆ ಕಾಲದಲ್ಲಿ ವಿಶಿಷ್ಟ ಗುರುಗಳಾಗಿದ್ದ ಗುರುಬಸವ ಎನ್ನುವವರು ಏಳು ಕೃತಿಗಳನ್ನು ರಚಿಸಿದ್ದಾರೆ.

ವಿಜಯ ನಗರ ಸಾಮ್ರಾಜ್ಯದ ಆರಂಭದಿಂದ 1920ನೇ ಇಸ್ವಿಯುವರೆಗೂ ಪಂಚಾಚಾರ್ಯರು ಬಸವೇಶ್ವರರ ಅನುಯಾಯಿಗಳೊಂದಿಗಿರುವ ವ್ಯತ್ಯಾಸವನ್ನು ಮರೆತು ಸೌಹಾರ್ದಯುತವಾಗಿಯೇ ಬಾಳುತ್ತಿದ್ದರು. ಲಿಂಗಾಯತರ್ಯಾರೂ ವೇದಾಧ್ಯಯನದ ಬಗೆಗೆ ತಲೆಕೆಡಿಸಿಕೊಂಡಿರಲಿಲ್ಲ. ಈಗಲೂ ಕೂಡ ಜರ್ಮನಿ, ಇಂಗ್ಲೆಂಡ್, ಅಮೆರಿಕಾ, ಐರ್‌ಲೆಂಡದಲ್ಲಿಯ ಕೆಲ ಪ್ರಾಧ್ಯಾಪಕರು ವೇದಗಳನ್ನು ಬಾಯಿಪಾಠ ಹೇಳಬಲ್ಲವರಾಗಿದ್ದಾರೆ ಅದರಿಂದೇನೂ ಧರ್ಮದ ಮೂಲ ಆಶಯದ ಮೇಲೆ ಪರಿಣಾಮ ಬೀರಲಾರದು. ಜಾತಿ ಪದ್ಧತಿ ನಿರ್ಮೂಲನೆ ಹಾಗೂ ಸಮಾಜ ಸುಧಾರಣೆಯ ಕಾರ್ಯಕ್ರಮವನ್ನು ಹಲವಾರು ಬೇರೆ ಸಂತರೂ ಕೂಡ ಪ್ರತಿಪಾದಿಸಿದ್ದಾರೆ. ನಾವು ಬಯಸಲಿ ಇಲ್ಲವೆ ಬಯಸದಿರಲಿ ನಮ್ಮ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಸಮಾಜವಾದಿ ಸಿದ್ಧಾಂತವನ್ನು ಅನುಷ್ಠಾನಗೊಳಿಸಿಯೇ ತೀರುತ್ತಾರೆ. ಹಾಗೆಯೇ ಕಳೆದೈವತ್ತು ವರ್ಷಗಳಿಂದ ಈ ಲಿಂಗಾಯತ ಪರಂಪರಾವಾದಿಗಳು ತೆಗೆದುಕೊಳ್ಳುತ್ತಿರುವ ನಿಲುವಿನಿಂದ ಏನಾಗಬಹುದು ? ಎಂದು ನೀವು ಕೇಳಬಹುದು. ಅದೆಲ್ಲ ಸಂಪೂರ್ಣ ನಿರರ್ಥಕವೆಂಬುದು ನನ್ನ ಅಭಿಪ್ರಾಯ.

ಇನ್ನೊಂದೆಡೆ ನಮ್ಮ ಗ್ರಾಮೀಣ ಭಾಗದಲ್ಲಿ, ಲಿಂಗಾಯತ ಸ್ವಾಮಿಗಳು ನೂರಾರು ವರ್ಷಗಳಿಂದ ಜಾತಿ ಮತ ಪಂಥಗಳೆನ್ನದೆ ಅಮೂಲ್ಯವಾದ ಸೇವೆಗೈದಿದ್ದಾರೆ. ನಮ್ಮ ಗ್ರಾಮಗಳ ನೈತಿಕಮಟ್ಟವನ್ನು ಎತ್ತರಿಸಿದ್ದಾರಲ್ಲದೆ ಆರ್ಥಿಕ ಸ್ಥಿತಿ ಸುಧಾರಿಸಲು ಸಹಾಯ ಮಾಡಿದ್ದಾರೆ. ಎಷ್ಟೋ ಮಠಾಧಿಪತಿಗಳು ಹಲವಾರು ವರ್ಷಗಳಿಂದ ಬಡವರಿಗೆ ಅನ್ನ ಹಾಕಿದ್ದಾರೆ, ಸ್ಥಳೀಯರಿಗೆ ವೈದ್ಯಕೀಯ ಸಹಾಯ ನೀಡಿದ್ದಾರೆ. ಉಚ್ಚಸ್ಥಾನದಲ್ಲಿರುವ ಲಿಂಗಾಯತ ಧರ್ಮದ ಪೀಠಾಧಿಪತಿಗಳು 1920ರಿಂದೀಚೆಗೆ ನಮ್ಮ ರಾಷ್ಟ್ರೀಯ ನೀತಿಯಾಗಿ ಅಂಗೀಕೃತವಾದ ಬಸವಾನುಯಾಯಿ ಜನಸಮೂಹದಿಂದ ಅದೇಕೆ ಪ್ರತ್ಯೇಕವಾಗುತ್ತಿದ್ದಾರೋ, ಅವರಿಗದ್ಯಾವ ಪಿಶಾಚಿ ಬಡಿದಿದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಲಿಂಗಾಯತರೊಳಗೇ ತಾವು ಬ್ರಾಹ್ಮಣರಾಗಿರುವೆವೆಂದು ಅವರೇನಾದರೂ ತಿಳಿದುಕೊಂಡಿದ್ದರೆ ಅದರಂಥ ದುಃಖಕರ ಸಂಗತಿ ಮತ್ತೊಂದಿಲ್ಲ. ಈ ದೇಶದ ಕಾನೂನಿನ ದೃಷ್ಟಿಯಲ್ಲಿ ಲಿಂಗಾಯತರು ಅಥವಾ ವೀರಶೈವರೆಂದರೆ ಒಂದೇ ಘಟಕವೆಂದು ಪರಿಗಣಿಸಲ್ಪಡುತ್ತದೆ.

ಲಿಂಗಾಯತರು ಅಥವಾ ವೀರಶೈವರು ಒಂದು ವೇಳೆ ತಾವು ಹಿಂದೂಗಳು ಎಂದು ಪರಿಭಾವಿಸಿದರೆ ಇಂದಿನ ಕಾನೂನಿನ ದೃಷ್ಟಿಯಲ್ಲಿ ಅವರು ಶೂದ್ರವರ್ಗದಲ್ಲಿ ಪರಿಗಣಿತವಾಗುತ್ತಾರೆ. ವಾಸ್ತವವಾಗಿ, ಲಿಂಗಾಯತರು ಜೈನ, ಸಿಖ್ ಹ್ಯಾಗೂ ಬೌದ್ಧ ಧರ್ಮಗಳ ಸಮಾಜದವರಂತೆ ತಮ್ಮನ್ನೂ ಕೂಡ ಹಿಂದೂಗಳಿಂದ ಪ್ರತ್ಯೇಕ ಧರ್ಮೀಯರೆಂದು ಪರಿಗಣಿಸಬೇಕೆಂದು ಈ ಶತಮಾನದ ಇಪ್ಪತ್ತರ ದಶಕದ ಮೊದಲ ಭಾಗದಲ್ಲಿ ಭಾರತ ಸರಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಸಂಬಂಧವಾಗಿ ಇನ್ನೂ ಸರಕಾರದ ಯಾವುದೇ ಆಜ್ಞೆ ಹೊರಟಿಲ್ಲವಾದರೂ, ಕೆಲವು ವರ್ಷಗಳಿಂದೀಚೆ ಸರಕಾರವು ಲಿಂಗಾಯತರನ್ನು ಅಥವಾ ವೀರಶೈವರನ್ನು ಹಿಂದೂಗಳೊಳಗೆ ಪರಿಗಣಿಸುತ್ತಿಲ್ಲ. ಇತ್ತೀಚೆಗೆ ಭಾರತೀಯ ಸಂಸತ್ತು ಹಿಂದೂ ವಿವಾಹ ಕಾಯ್ದೆ, ಹಿಂದೂ ವಾರಸಾ ಕಾಯ್ದೆ, ಹಿಂದೂ ಅಲ್ಪವಯಿ ಹಾಗೂ ಅಲ್ಪವಯಿ ಸಂರಕ್ಷಣಾಧಾರ ಕಾಯ್ದೆಗಳನ್ನು ರಚಿಸಿದ್ದು ಆ ಕಾಯ್ದೆಯಡಿಯಲ್ಲಿ ಲಿಂಗಾಯತ, ಬೌದ್ಧ, ಜೈನ, ಬ್ರಹ್ಮೋಸಮಾಜ ಧರ್ಮೀಯರನ್ನು ಸೇರಿಸದೆ ಆ ಧರ್ಮಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಅವುಗಳಿಗಾಗಿಯೇ ಬೇರೆ ಕಾನೂನುಗಳನ್ನು ಪಾಸು ಮಾಡಿದೆ.

ಇತ್ತೀಚೆಗೆ ವೀರಶೈವರಲ್ಲಿ ಪ್ರತ್ಯೇಕತಾ ಪ್ರವೃತ್ತಿ ಹೆಚ್ಚಾಗುತ್ತಿರುವುದು. ಇಡೀ ಸಮಾಜದ ಹಿತದೃಷ್ಟಿಯಿಂದ ಅತ್ಯಂತ ಹಾನಿಕಾರಕವೆಂಬ ಅನಿವಾರ್ಯ ತೀರ್ಮಾನಕ್ಕೆ ಬರಬೇಕಾಗುತ್ತದೆ. ವಿಜಯನಗರ ಸಾಮ್ರಾಜ್ಯದ ಆರಂಭಿಕ ಕಾಲದಲ್ಲಿ ಲಿಂಗಾಯತ ಹಾಗೂ ವೀರಶೈವ ಎರಡೂ ಪಂಗಡಗಳ ನಡುವಿದ್ದ ಹೊಂದಾಣಿಕೆಯ ಮನೋಭಾವವನ್ನೀಗ ಕಾಪಾಡಿಕೊಳ್ಳಲೇಬೇಕಾಗಿದೆ. ಕ್ಷುಲ್ಲಕ ವಿಷಯಗಳ ಬಗ್ಗೆ ಕೆಲವು ಬೇಜವಾಬ್ದಾರಿ ಜನರು ಆರಂಭಿಸಿದ ಜಗಳಾಟವು ಅತ್ಯಂತ ನಿಂದಾಸ್ಪದವಾಗಿದೆ ಎಂದು ಹೇಳಬಹುದು.

ಅನುವಾದಕರು : ಸಿದ್ಧಲಿಂಗ ದೇಸಾಯಿ

ವಿಳಾಸ : ಶ್ರೀ ಶರಣ ಬಸವ ಕೃಪಾ,
ಕುಮಾರೇಶ್ವರ ನಗರ, ಧಾರವಾಡ

ಜಂಗಮ ದೂರವಾಣಿ : 94481 16910

ಲಿಂಗಾಯತ ಧರ್ಮಜಾಗೃತಿ ಸಮ್ಮೇಳನ - ಉದ್ಘಾಟನಾ ಸಮಾವೇಶ

ಧಾರವಾಡ: ''ವಿಶ್ವಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಸಂಸ್ಥಾಪಕರು. ವಚನ ಸಾಹಿತ್ಯವೇ ನಮ್ಮ ಧರ್ಮ ಸಂಹಿತೆ ಎಂದು ತಿಳಿದು ಎಲ್ಲ ಜಾತಿ-ಮತ-ಪಂಥದವರನ್ನು ಇಂಬಿಟ್ಟುಕೊಳ್ಳುವ ಹೃದಯವೈಶಾಲ್ಯತೆ ಬೆಳೆಸಿಕೊಂಡಾಗ ಮಾತ್ರ ಸರ್ವಾಂಗ ಸುಂದರವಾದ ಕಲ್ಯಾಣ ರಾಜ್ಯ ನಿರ್ಮಿಸಲು ಸಾಧ್ಯ'' ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ದಿ. 16-10-2004ರಂದು ಕರೆ ಕೊಟ್ಟರು.

ಅವರು ಇಂದು ನಗರದ ಡಾ|| ಮಲ್ಲಿಕಾರ್ಜುನ ಮನ್ಸೂರ ಕಲಾಭವನದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್ (ರಿ.) ಆಶ್ರಯದಲ್ಲಿ ಏರ್ಪಡಿಸಲಾದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನದ ಸಾನ್ನಿಧ್ಯವಹಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತ ಜಾತೀಯತೆ, ಅಸ್ಪೃಶ್ಯತೆ ನಿರ್ಮೂಲನೆ ಮಾಡಿ ಸಮಾನತೆಯ ರಾಜ್ಯ-ಶರಣ ಸಮಾಜವನ್ನು ನಿರ್ಮಿಸುವುದು ಬಸವಣ್ಣನವರ ಧ್ಯೇಯವಾಗಿತ್ತು. ಲಿಂಗ ಎಂಬ ಪದವು ಭಾಷೆ ಹುಟ್ಟಿದ ದಿನವೇ ಹುಟ್ಟಿದೆ. ಅಂದ ಮಾತ್ರಕ್ಕೆ ಇಷ್ಟಲಿಂಗ-ಸ್ಥಾವರಲಿಂಗ ಎರಡೂ ಒಂದೇ ಎಂದು ಹೇಳಲು ಸಾಧ್ಯವಿಲ್ಲ. ದೇವಾಲಯಗಳು ಅಸ್ಪೃಶ್ಯರನ್ನು ಬಹಿಷ್ಕರಿಸಿದರೆ ಗುರು ಬಸವಣ್ಣನವರು ದೇವಾಲಯವನ್ನೇ ಬಹಿಷ್ಕರಿಸಿ ದೇಹವನ್ನೇ ದೇವಾಲಯ ಮಾಡಿಕೊಳ್ಳುವ ತತ್ತ್ವವನ್ನು ಕಲಿಸಿದರು ಎಂದರು.

''ಸ್ಥಾವರಲಿಂಗವು ಯೋಗಿರಾಜ ಶಿವನ ಕುರುಹು. ಆದರೆ ಇಷ್ಟಲಿಂಗವು ನಿರಾಕಾರ, ನಿರವಯ, ನಿರ್ಗುಣ, ನಿರಂಜನನಾಗಿರುವ ಸೃಷ್ಟಿಕರ್ತ ಪರಮಾತ್ಮನ ಕುರುಹು ; ಜಾತಿಯ ಕುರುಹಲ್ಲ - ಜ್ಯೋತಿಯ ಕುರುಹು. ಕಪ್ಪು ಕಂತೆಯನ್ನು ಹೊಂದಿ ಗೋಲಾಕಾರವಾಗಿರುವ ಇಷ್ಟಲಿಂಗ ತ್ರಾಟಕಯೋಗ ಸಾಧನೆಗೆ ಪೂರಕವಾಗಿದೆ. ಇದು ಬಸವಣ್ಣನವರ ಕಲ್ಪನೆಯ ಶಿಶು ಎಂದು ಮಾತಾಜಿ ಸ್ಪಷ್ಟಪಡಿಸಿದರು. ಲಿಂಗಾಯತ - ವೀರಶೈವ ಸ್ಪಷ್ಟವಾಗಿ ಬೇರೆ ಬೇರೆ ಎಂದು ನುಡಿದ ಮಾತಾಜಿ ಲಿಂಗಾಯತವು ಬಸವೇಶ್ವರರು ನೀಡಿದ ಸ್ವತಂತ್ರ ಧರ್ಮವಾದರೆ 'ವೀರಶೈವ' ಇದು ಸಪ್ತ ಶೈವಗಳಲ್ಲಿ ಒಂದು ಶಾಖೆಯಾಗಿದೆ.

'' ಬಸವಣ್ಣನವರೇ ತಂದೆ, ವಚನ ಸಾಹಿತ್ಯವೇ ತಾಯಿ - ಶರಣ ಪರಂಪರೆಯೇ ಸಂತಾನವಾಗಿರುವ ನಮ್ಮದು ಲಿಂಗಾಯತ ಧರ್ಮ. ಇದನ್ನು ಒಪ್ಪುವವರೆಲ್ಲ ಬನ್ನಿರಿ ಒಂದಾಗಿ ಸೋದರ-ಸೋದರಿಯರಂತೆ ಬಾಳೋಣ. ಇಲ್ಲದಿದ್ದರೆ ಪಕ್ಕದ ಮನೆಯವರಂತೆ ಇರಿ ಸಾಕು ವಿನಾಕಾರಣ ನಮ್ಮ ಧರ್ಮದ ವಿಚಾರಗಳೊಂದಿಗೆ ನಿಮ್ಮದನ್ನು ಥಳಕು ಹಾಕಬೇಡಿರಿ ಎಂದು ಕುಟುಕಿದರು. ಸಂಪ್ರದಾಯದ ಹೆಸರಿನಲ್ಲಿ ಶೋಷಣೆ ಮುಡಿಗಟ್ಟಿ - ಮಡುಗಟ್ಟಿದಾಗ ಅದಕ್ಕೆ ಪ್ರತಿದ್ವಂದ್ವಿಯಾಗಿ ವೈಚಾರಿಕ ತಳಹದಿಯ ಮೇಲೆ ಲಿಂಗಾಯತ ಧರ್ಮ ಉಗಮವಾಗಿದೆ. ಅಂದು ಕಲ್ಯಾಣದಲ್ಲಿ ನಡೆದ ಕ್ರಾಂತಿ ಹೆಣ್ಣು-ಹೊನ್ನು-ಮಣ್ಣಿಗಾಗಿ ನಡೆದಿಲ್ಲ ಬದಲಾಗಿ ಶತಶತಮಾನಗಳಿಂದ ಅಸಮಾನತೆ ತುಂಬಿದ ಈ ದೇಶದಲ್ಲಿ ಸಮಾನತೆಯ ಧ್ವಜ ಹಾರಲೇಬೇಕು ಎಂದು ನಡೆದ ಕ್ರಾಂತಿಯಾಗಿದೆ. ಶರಣರ ಈ ತ್ಯಾಗ-ಬಲಿದಾನಗಳನ್ನು ಅರ್ಥೈಸಿಕೊಂಡು ಸಮಾಜ ಜಾಗೃತವಾಗಿ ಮುನ್ನಡೆಯಬೇಕು.'' ಎಂದು ಮಾತಾಜಿ ಹೇಳಿದರು.

ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಮನಸೂರಿನ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಮಹಾಮಠದ ಪೂಜ್ಯ ಶ್ರೀ ಬಸವರಾಜ ದೇವರು ಮಾತನಾಡಿ ಲಿಂಗಾಯತ ಧರ್ಮದ ಆದ್ಯ ಪುರುಷ ಬಸವಣ್ಣನವರು. ಶ್ರಮಿಕ ವರ್ಗದ ಪ್ರತಿನಿಧಿಗಳಾದ ಕಕ್ಕಯ್ಯ- ಹರಳಯ್ಯ ಅಂಬಿಗರ ಚೌಡಯ್ಯ, ಕುರುಬರ ಗೊಲ್ಲಾಳ, ಮೇದಾರ ಕೇತಯ್ಯ, ಹಡಪದ ಅಪ್ಪಣ್ಣ ಇವರೆಲ್ಲರ ತ್ಯಾಗದ ಫಲವಾಗಿ ಬೆಳೆದ ಧರ್ಮವೇ ಲಿಂಗಾಯತ ಧರ್ಮ. ಇತ್ತೀಚೆಗೆ ಕೆಲವು ಜಾತಿ ಜಂಗಮರು ಮಠಗಳನ್ನು ಆಕ್ರಮಿಸಿ ಪುರೋಹಿತಶಾಹಿ ವ್ಯವಸ್ಥೆಯನ್ನು ಪ್ರತಿಷ್ಠಾಪಿಸಿದ್ದಾರೆ. ಅಲ್ಲದೇ ತಮ್ಮ ಸ್ವಾರ್ಥ ಸಾಧನೆಯಲ್ಲಿ ನಿರತರಾಗಿದ್ದಾರೆ ಎಂದು ಶ್ರೀಗಳು ನುಡಿದರು.

ಬಸವ ಪರಂಪರೆಯ ವಿರಕ್ತ ಪೀಠಗಳು ಅಥವಾ ರೇವಣಸಿದ್ಧ ಪರಂಪರೆಯ ಪೀಠಗಳೇ ಇರಬಹುದು ಅವೆಲ್ಲವುಗಳಿಗೆ ಸರ್ವಸಮುದಾಯದ ಅರ್ಹ ವಟುಗಳನ್ನು ಉತ್ತರಾಧಿಕಾರಿಯಾಗಿ ನೇಮಿಸಿಕೊಳ್ಳುವುದರ ಮೂಲಕ ತಮ್ಮ ಶ್ರೇಷ್ಠತೆ ಮೆರೆಯಬೇಕೆಂದು ನುಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಉಪನ್ಯಾಸ ನೀಡಿದ ಸಾಹಿತಿ ಮೋಹನ ನಾಗಮ್ಮನವರ - ಬಸವೇಶ್ವರರ ವಿಚಾರಧಾರೆಯ ಲಿಂಗಾಯತ ಧರ್ಮ ಜನ ಧರ್ಮವಾಗಬೇಕಾಗಿದೆ. ಅದಕ್ಕೆ ಯುಗ ಧರ್ಮವಾಗುವ ಎಲ್ಲ ಸಕಲ ಸಲಕ್ಷಣಗಳಿವೆ ಎಂದರಲ್ಲದೇ ವೀರಶೈವ ಪದ ಶರಣ ಚಳುವಳಿಯ ನಂತರ ಸಾಹಿತ್ಯದಲ್ಲಿ ಬಂದು ಸೇರಿದ್ದು ಎಂದು ಪ್ರತಿಪಾದಿಸಿದರು.

ಸಮಾರಂಭದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಮಾತೆ ಅಕ್ಕಮಹಾದೇವಿ ಉಪಸ್ಥಿತರಿದ್ದರು. ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ವೀರಣ ಕೊರ್ಲಳ್ಳಿ, ಲಿಂಗಾಯತ ಧರ್ಮ ಮಹಾಸಭಾ ಜಿಲ್ಲಾಧ್ಯಕ್ಷ ಎಸ್.ಎಲ್.ಗೌಡರು, ಲಿಂಗರಾಜ ಇಂಗಳಳ್ಳಿ, ಬೆಸಗರಹಳ್ಳಿ ಪುಟ್ಟಸ್ವಾಮಿ, ಅಣ್ಣಪ್ಪ ವಾಲಿ ಮುಂತಾದವರು ಉಪಸ್ಥಿತರಿದ್ದರು.

ಬಸವಣ್ಣನವರೇ ಲಿಂಗಾಯತ ಧರ್ಮ ಸಂಸ್ಥಾಪಕರು

ಬಹಿರಂಗ ಚರ್ಚೆಗೆ ಮಾತಾಜಿ ಪಂಥಾಹ್ವಾನ

ಧಾರವಾಡ : ''ವೀರಶೈವ ಮತ್ತು ಲಿಂಗಾಯತ ಸಮಾನಾರ್ಥ ಪದಗಳಲ್ಲ ಸ್ಪಷ್ಟವಾಗಿ ಬೇರೆಬೇರೆಯಾಗಿವೆ ಮತ್ತು ಅರ್ಥರಹಿತ ಪದವನ್ನು ತೆಗೆದು ಅಖಿಲಭಾರತ ವೀರಶೈವ ಮಹಾಸಭೆಯು ಅಖಿಲ ಭಾರತ ಲಿಂಗಾಯತ ಮಹಾಸಭೆಯೆಂದು ಬದಲಾವಣೆ ಮಾಡಬೇಕು'' ಎಂದು ಕೂಡಲಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಕರೆ ನೀಡಿದರು.

ಅವರು ದಿ. 17 ರಂದು ಬೆಳಿಗ್ಗೆ 11-00 ಘಂಟೆಗೆ ನಗರದ ಮಲ್ಲಿಕಾರ್ಜುನ ಮನಸೂರ ಕಲಾಭವನದಲ್ಲಿ ಏರ್ಪಡಿಸಿದ್ದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನದ 2ನೇದಿನದ ವಚನ ವಾಙ್ಮಯದ ಜೀವನ ಸಿದ್ಧಾಂತ ಚಿಂತನಗೋಷ್ಠಿಯ ದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡುತ್ತಿದ್ದರು. ಮುಂದುವರೆದು ಮಾತನಾಡಿದ ಅವರು ವಿಶ್ವಗುರು ಬಸವಣ್ಣನವರು ಜಗ

ಬದುಕಲೆಂದು - ಜನ ಬದುಕಲೆಂದು ಪ್ರಗತಿಪರ, ವೈಚಾರಿಕ, ಲಿಂಗಾಯತ ಧರ್ಮವನ್ನು ಸಂಸ್ಥಾಪಿಸಿ ಕೊಟ್ಟಿದ್ದಾರೆ. ಇಂಥ ಧರ್ಮಕ್ಕೆ ಬಸವ ಪೂರ್ವದ ಸಪ್ತ ಶೈವಗಳಲ್ಲಿ ಒಂದು ಪಂಥವಾದ ''ವೀರಶೈವ''ದ ಅನುಯಾಯಿಗಳು ಪ್ರವೇಶಿಸಿ ಲಿಂಗಾಯತ ಧರ್ಮವನ್ನು ವಿಕೃತಗೊಳಿಸಿದ್ದೇ ಅಲ್ಲದೇ ವೀರಶೈವವೆಂದು ಕರೆಯುತ್ತಾ ಜನರನ್ನು ತಪ್ಪುದಾರಿಗೆ ಎಳೆಯುವುದನ್ನು ಪ್ರಾರಂಭಿಸಿದರು. ಇವತ್ತಿಗೂ ಜನಸಾಮಾನ್ಯರಲ್ಲಿ ''ಲಿಂಗಾಯತ'' ಪದವು ಬಳಕೆಯಲ್ಲಿದೆಯೇ ವಿನಾ ವೀರಶೈವವಲ್ಲ. ಬಾಳೇಹೊನ್ನೂರಿನ ಮಠವನ್ನು ಕಟ್ಟಿದವರು ವೀರಮಾತೆ ಅಕ್ಕನಾಗಲಾಂಬಿಕೆ. ಈ ಮೂಲವನ್ನು ಅರಿತು ಪಂಚಪೀಠಾಧೀಶರು ಬಸವಣ್ಣನವರನ್ನು ಧರ್ಮಗುರುವೆಂದು ಒಪ್ಪಿ ಲಿಂಗಾಯತ ಸಮಾಜವನ್ನು ಒಂದುಗೂಡಿಸುವ ಪ್ರಯತ್ನ ಮಾಡಬೇಕು ಅಂದಾಗ ಮಾತ್ರ ಸಮಾಜವು ಒಂದಾಗಲು ಸಾಧ್ಯ'' ಎಂದು ಮಾತಾಜಿ ಅಭಿಪ್ರಾಯಪಟ್ಟರು.

ಬಸವಣ್ಣನವರಿಗೂ ಪೂರ್ವದಲ್ಲಿ ಇಷ್ಟಲಿಂಗವು ಅಸ್ತಿತ್ವದಲ್ಲಿ ಇರಲಿಲ್ಲ. ನಿರಾಕಾರ ದೇವರನ್ನು ವಿಶ್ವದ ಆಕಾರದಲ್ಲಿ ಸಾಕಾರಗೊಳಿಸಿ ಪೂಜಿಸುವ ಈ ಪರಿಕಲ್ಪನೆಯನ್ನು ಕೊಟ್ಟವರೇ ಬಸವಣ್ಣನವರು. ಇಷ್ಟಲಿಂಗವನ್ನೇ ಕೇಂದ್ರ ಬಿಂದುವನ್ನಾಗಿ ಹೊಂದಿದ ಲಿಂಗಾಯತ ಧರ್ಮದ ಸ್ಥಾಪಕರೇ ಬಸವಣ್ಣನವರು. ಅವರು ವೀರಶೈವ ಮತವನ್ನು ಸ್ವೀಕರಿಸಿದ ಬಗ್ಗೆ ಎಲ್ಲಿಯೂ ದಾಖಲೆ ಇಲ್ಲ. ಜಾತವೇದ ಮುನಿಗಳು ವಿದ್ಯಾಗುರುಗಳೇ ವಿನಾ ದೀಕ್ಷಾ ಗುರುಗಳಲ್ಲ. ಈ ಬಗ್ಗೆ ಯಾವುದೇ ವೇದಿಕೆಯ ಮೇಲೆ ಚರ್ಚಿಸಲು ನಾನು ಸಿದ್ಧಳಿದ್ದೇನೆ. ಪಂಚ ಪೀಠಾಧೀಶರು ಬಸವಣ್ಣನವರನ್ನು ಧರ್ಮಗುರುವೆಂದು, ಲಿಂಗಾಯತ ಧರ್ಮ ಸ್ಥಾಪಕರೆಂದು, ವಚನ ಸಾಹಿತ್ಯವನ್ನು ಧಾರ್ಮಿಕ ಸಂವಿಧಾನವೆಂದು ಒಪ್ಪಿಕೊಂಡು ಬಿಟ್ಟರೆ ಎಲ್ಲಾ ಗೊಂದಲಗಳು ನಿವಾರಣೆಯಾಗಿ ಸಮಾಜವು ಸರಿಯಾದ ದಾರಿಯಲ್ಲಿ ಸಾಗಲು ಅನುಕೂಲವಾಗುವುದು.'' ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಸಮಾರಂಭವನ್ನು ಉದ್ಘಾಟಿಸಿದ ಆನಂದ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್‌ನ ಉಪಾಧ್ಯಕ್ಷರಾದ ಯುವ ಉದ್ಯಮಿ ಆನಂದ ಸಂಕೇಶ್ವರ ಮಾತನಾಡಿ ''ಲಿಂಗಾಯತ ಸಮಾಜದ ಯುವಕರು ಕೇವಲ ಸರ್ಕಾರಿ ನೌಕರಿಯನ್ನು ನಂಬಿ ನಿರುದ್ಯೋಗಿಗಳಾಗಿ ತಮ್ಮ ಯೌವನದ ಅತ್ಯಮೂಲ್ಯ ಸಮಯವನ್ನು ಹಾಳು ಮಾಡಿಕೊಳ್ಳಬಾರದು. ಬದುಕಲು ಬೇಕಾದಷ್ಟು ದಾರಿಗಳಿವೆ, ಜಗತ್ತು ವಿಶಾಲವಾಗಿದೆ. ಬಸವಣ್ಣನವರು ನುಡಿಯುವಂತೆ ಸದಾ ಕಾಯಕದಲ್ಲಿ ನಿರತರಾಗಬೇಕು. ಸ್ವಯಂ ಉದ್ಯೋಗಿಗಳಾಗಿ ಮತ್ತೆ ಉಳಿದವರಿಗೂ ಉದ್ಯೋಗ ಸೃಷ್ಟಿಸಬೇಕು. ಈ ದಿಶೆಯಲ್ಲಿ ಸರ್ಕಾರದ ಹಲವಾರು ಕಲ್ಯಾಣಕಾರಿ ಯೋಜನೆಗಳನ್ನು ಸದುಪಯೋಗ ಮಾಡಿಕೊಳ್ಳಬೇಕು. ಕಡಿಮೆ ಬಡ್ಡಿದರದಲ್ಲಿ ಬ್ಯಾಂಕುಗಳು ನೀಡುವ ಸಾಲಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಉದ್ಯೋಗ ಆರಂಭಿಸಿ ಮನೆತನಕ್ಕೆ, ಸಮಾಜಕ್ಕೆ ಹೊಸ ಶಕ್ತಿಯಾಗಬೇಕು. ಸ್ವಾಭಿಮಾನದಿಂದ ಬದುಕಿ ಎಲ್ಲರಿಗೂ ಮಾದರಿಯಾಗಬೇಕು'' ಎಂದು ಅಭಿಪ್ರಾಯಪಟ್ಟರು.

ಇನ್ನೋರ್ವ ಅತಿಥಿ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕ ಶಂಕರಣ್ಣ ಮುನವಳ್ಳಿ ಮಾತನಾಡಿ ಗುರು ಬಸವೇಶ್ವರರ ತತ್ವಗಳು ಸಮಸ್ತ ಮನುಕುಲಕ್ಕೆ ಮಾರ್ಗದರ್ಶಕವಾಗಿವೆ. ಅವರಿಂದ

ರೂಪುಗೊಂಡ ವಚನ ಸಾಹಿತ್ಯ ಅಳವಡಿಸಿಕೊಂಡರೆ ಬದುಕು ಬಂಗಾರವಾಗುತ್ತದೆ. ಅವರು ನೀಡಿದ ಕಾಯಕ ತತ್ವದ ಪರಿಪಾಲನೆಯಿಂದ ನಮ್ಮೆಲ್ಲರ ಬದುಕು ಸುಖಮಯವಾಗುತ್ತದೆ ಎಂದರಲ್ಲದೆ ಸಮಾಜದ ಹೆಮ್ಮೆಯ ಶಿಕ್ಷಣ ಸಂಸ್ಥೆಯಾದ ಕೆ.ಎಲ್.ಇ ಸಂಸ್ಥೆಯನ್ನು ತಮ್ಮ ಅಧಿಕಾರಾವಧಿಯಲ್ಲಿ ಉತ್ತರೋತ್ತರವಾಗಿ ಪ್ರಗತಿಪಥದತ್ತ ಕೊಂಡೊಯ್ಯುವುದಾಗಿ ವಚನ ನೀಡಿದರು.

ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಧಾರವಾಡದ ಆಕಾಶವಾಣಿ ಕೇಂದ್ರದ ನಿರ್ದೇಶಕ ಚೇತನಕುಮಾರ್‌ರವರು "ಕಾಯಕದ ಮಹತಿಯನ್ನು ಜಗತ್ತಿಗೆ ಸಾರಿದ ಅಪ್ರತಿಮ ವ್ಯಕ್ತಿ ವಿಶ್ವಗುರು ಬಸವಣ್ಣನವರು. ಅವರನ್ನು ನೆನೆಯದಿರುವುದೇ ಪಾಪವಾಗಿದೆ. ನಾಳೆಯದು ಇಂದು, ಇಂದಿನದು ಈಗಲೇ ಮಾಡಿರಿ ಎಂಬುದೇ ಬಸವ ತತ್ವವಾಗಿದೆ. ಬಸವ ಧರ್ಮ ಒಂದು ಜಾತಿಯಲ್ಲ, ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ತಾವೆಲ್ಲ ರಾಷ್ಟ್ರ ಕಟ್ಟುವ ಕಾರ್ಯ ಮಾಡುತ್ತಿದ್ದೀರಿ" ಎಂದು ಹೇಳಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಖ್ಯಾತ ಸಾಹಿತಿ ಡಾ|| ಸೋಮಶೇಖರ ಇಮ್ರಾಪುರ ಮಾತನಾಡಿ "ಬಸವ ಧರ್ಮವು ಜಾಗತಿಕ ಧರ್ಮ; ಅದನ್ನು ಪ್ರಸಾರ ಮಾಡುವ ಧೈರ್ಯ ನಮ್ಮಂಥವರಿಗಿಲ್ಲ ಅದು ಪೂಜ್ಯ ಮಾತಾಜಿಯವರಿಂದ ಮಾತ್ರ ಸಾಧ್ಯ." ಎಂದು ಅಭಿಪ್ರಾಯಪಟ್ಟರು. ರಾಜಕೀಯ ಧುರೀಣ ಅಜ್ಜಪ್ಪ ಹೊರಕೇರಿ ಮಾತನಾಡಿ "ಪೂಜ್ಯ ಮಾತಾಜಿಯವರಿಂದ ಮಾತ್ರ ಬಸವ ಧರ್ಮ ವಿಶ್ವಧರ್ಮವಾಗಿ ಬೆಳೆಯಲು ಸಾಧ್ಯವಿದೆ. ಅವರ ಸೃಜನಶೀಲ ವ್ಯಕ್ತಿತ್ವ ನಿಜಕ್ಕೂ ಬೆರಗುಗೊಳಿಸುವಂತದ್ದು" ಎಂದರು.

ಧಾರವಾಡದ ಗಣ್ಯ ಉದ್ಯಮಿ ನಾಗಪ್ಪ ಬಿದರಿ, ಹುಬ್ಬಳ್ಳಿಯ ಗಣ್ಯ ಉದ್ಯಮಿ ಗಂಗಣ್ಣ ಬತ್ಲಿ, ಮಹಾನಗರ ಪಾಲಿಕೆ ಸದಸ್ಯೆ ದ್ರಾಕ್ಷಾಯಿಣಿ ದೊಡ್ಡೂರು, ಈಚಲಕರಂಜಿಯ ಮಾಲೂತಾಯಿ ಚಂದ್ರಕಾಂತ ಸ್ವಾಮಿ, ಬೈಲಹೊಂಗಲದ ಅಣ್ಣಪ್ಪ ವಾಲಿ ವೇದಿಕೆಯಲ್ಲಿದ್ದರು. ಪ್ರಾರಂಭದಲ್ಲಿ ಆಂಧ್ರಪ್ರದೇಶ ರಾಷ್ಟ್ರೀಯ ಬಸವ ದಳ ಅಧ್ಯಕ್ಷ ಸುಭಾಷ್ ಪಾಟೀಲ್ ಧ್ವಜಾರೋಹಣ ಮಾಡಿದರು. ಜಗದ್ಗುರು ಮಾತೆ ಗಂಗಾದೇವಿ, ಮನಸೂರಿನ ರೇವಣಸಿದ್ದೇಶ್ವರ ಮಠದ ಪೂಜ್ಯ ಶ್ರೀ ಬಸವರಾಜ ದೇವರು ಪಾಲ್ಗೊಂಡ ಸಮಾರಂಭದಲ್ಲಿ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ನ್ಯಾಯವಾದಿ ಕೆ.ಎಸ್.ಕೋರಿಶೆಟ್ಟರ ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ರಾಷ್ಟ್ರೀಯ ಬಸವ ದಳದ ವೀರಣ್ಣ ಕೊರ್ಲಹಳ್ಳಿ, ಶಿವಣ್ಣ ಶಿರೂರು, ಬಿ.ಜಿ. ಹೊಸಗೌಡರು, ಲಿಂಗರಾಜ ಇಂಗಳಳ್ಳಿ, ಎಸ್.ಎಲ್.ಗೌಡರು, ಸುಬ್ಬಣ್ಣ ಮೈಸೂರು, ಎಂ.ವಿ. ಕುಸುಗಲ್, ಮಂಜುನಾಥ ಅಂಗಡಿ, ಸಿ.ಜಿ. ಕಗ್ಗಣ್ಣವರ, ಎಸ್.ಎಲ್. ಎಮ್ಮಿ, ಚನ್ನಬಸಪ್ಪ ಅವರಾದಿ, ಚನ್ನಪ್ಪ ಗೌಡರ, ನೀಲಾಂಬಿಕಾ ಇಂಗಳಳ್ಳಿ ಮುಂತಾದವರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ

ದಿ. 16ರಂದು ಸಂಜೆ 6-30ಕ್ಕೆ ಮಕ್ಕಳ ಗೋಷ್ಠಿ ನಂತರ ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ನೃತ್ಯ ರೂಪಕಗಳು ಜನರನ್ನು ಮುದಗೊಳಿಸಿದವು.

ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನದ ಸಮಾರೋಪ

ವಚನ ಸಾಹಿತ್ಯ ಸಂವಿಧಾನ ಅನುಸರಿಸಲು ಪಂಚಪೀಠಾಧೀಶರಿಗೆ ಕರೆ

"ವೈಜ್ಞಾನಿಕ ಮತ್ತು ವೈಚಾರಿಕ ಚಿಂತನೆಯುಳ್ಳ ವಚನ ಸಾಹಿತ್ಯ ಸಂವಿಧಾನಕ್ಕೆ ಬದ್ಧರಾಗಿ ನಡೆದುಕೊಳ್ಳಲು ಪಂಚಪೀಠಾಧೀಶರಿಗೆ ಲಿಂಗಾಯತ ಧರ್ಮಜಾಗೃತಿ ಸಮ್ಮೇಳನವು ಇಂದಿಲ್ಲಿ ಕರೆ ನೀಡಿತು. ವಚನ ವಾಙ್ಮಯವು ಜಗ ಬದುಕುವ, ಜನ ಬದುಕುವ ಮಾರ್ಗವನ್ನು ತೋರುವ ಕೈ ದೀವಿಗೆ. ಆದ್ದರಿಂದ ಪಂಚಪೀಠಾಧೀಶರು ವಚನ ಸಾಹಿತ್ಯ ಬೋಧಿಸುವ ಮೌಲ್ಯ ಮತ್ತು ಆಚರಣೆಗಳನ್ನು ಅನುಷ್ಠಾನಕ್ಕೆ ತಂದರೆ ಸಮಾಜವನ್ನು ಕಾಡುತ್ತಿರುವ ಜಾತೀಯತೆ, ಮೂಢನಂಬಿಕೆ, ಶೋಷಣೆ ತನ್ನಿಂದ ತಾನೇ ತೊಲಗುತ್ತವೆ." ಎಂದು ಪ್ರಾಸ್ತಾವಿಕ ಭಾಷಣ ಮಾಡಿದ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಕರೆ ನೀಡಿದರು. ಎರಡು ದಿವಸಗಳ ಕಾಲ ನಡೆದ ಲಿಂಗಾಯತ ಧರ್ಮಜಾಗೃತಿ ಸಮ್ಮೇಳನದ ವಿವಿಧ ಅಧಿವೇಶನಗಳಲ್ಲಿ ಚರ್ಚಿಸಿದ ವಿಷಯಗಳನ್ನು ಕ್ರೋಢೀಕರಿಸಿ ಕೆಲವೊಂದು ನಿರ್ಣಯಗಳನ್ನು ಘೋಷಿಸಲಾಯಿತು.

1. 12ನೆಯ ಶತಮಾನದಲ್ಲಿ ಸಮತಾವಾದಿ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಲಿಂಗಾಯತ ಧರ್ಮವು ಒಂದು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮವು. ಯಾವ ಆಧಾರದ ಮೇಲೆ ಜೈನ, ಬೌದ್ಧ, ಸಿಖ್ ಧರ್ಮಗಳಿಗೆ ಸ್ವತಂತ್ರ ಧರ್ಮಗಳೆಂದು ಕೇಂದ್ರ ಸರ್ಕಾರವು ಮಾನ್ಯತೆ ನೀಡಿ, ಜನಗಣತಿಯಲ್ಲಿ ಪ್ರತ್ಯೇಕ ಕಾಲಂ ನೀಡಲಾಗಿದೆಯೋ ಅದೇ ಆಧಾರದ ಮೇಲೆ ಲಿಂಗಾಯತ ಧರ್ಮಕ್ಕೂ ಸಂವಿಧಾನಾತ್ಮಕ ಮಾನ್ಯತೆ ನೀಡಬೇಕೆಂದು, ಈ ದಿಶೆಯಲ್ಲಿ ಬಸವ ತತ್ತ್ವಾಭಿಮಾನಿ ಸಂಘಟನೆಗಳು ಒಗ್ಗಟ್ಟಿನಿಂದ ಪ್ರಯತ್ನಿಸಬೇಕೆಂದು ನಿರ್ಣಯಿಸಲಾಯಿತು.

2. ವೀರಶೈವ ಪದವು ಯಾವುದೇ ರೀತಿ ಲಿಂಗಾಯತ ಧರ್ಮ ಮತ್ತು ಸಮಾಜಕ್ಕೆ ಸಂಬಂಧಿಸದ್ದರಿಂದ ಅದರ ಬಳಕೆಯನ್ನು ನಿಷೇಧಿಸಬೇಕೆಂದು ನಿರ್ಣಯಿಸಲಾಯಿತು. ವಿಶ್ವದಾಕಾರವನ್ನು ಹೋಲುವ ಇಷ್ಟಲಿಂಗವನ್ನು ಆಯತ ಮಾಡಿಕೊಳ್ಳುವುದರಿಂದ ಈ ಧರ್ಮದ ಅನುಯಾಯಿತ್ವ ಬರುವುದರಿಂದಲೂ ಜನ ಸಾಮಾನ್ಯರಲ್ಲಿ, ಅವಿದ್ಯಾವಂತರಲ್ಲಿ ಸಹ ಲಿಂಗಾಯತ ಪದವೇ ಪ್ರಚಲಿತವಿರುವುದರಿಂದ ಅದೊಂದನ್ನೇ ಬಳಸಬೇಕೆಂದು ನಿರ್ಣಯಿಸಲಾಯಿತು. ಈ ಚಿಂತನೆಯ ಹಿನ್ನೆಲೆಯಲ್ಲಿ ವೀರಶೈವ ಮಹಾಸಭೆಯು ಲಿಂಗಾಯತ ಮಹಾಸಭೆಯೆಂದು ಹೆಸರನ್ನು ತಿದ್ದುಪಡಿ ಮಾಡಿಕೊಳ್ಳಲು ಆಗ್ರಹಿಸಬೇಕೆಂದು ನಿರ್ಣಯಿಸಲಾಯಿತು. ಪ್ರಸ್ತುತ ತಿದ್ದುಪಡಿ ಮಾಡಿಕೊಳ್ಳದಿದ್ದರೆ ಬಸವ ತತ್ತ್ವಾಭಿಮಾನಿಗಳು ವೀರಶೈವ ಮಹಾಸಭೆಯ ಸಂಪರ್ಕ ಕಡಿದುಕೊಳ್ಳಬೇಕೆಂದು ನಿರ್ಣಯಿಸಲಾಯಿತು.

3. ಲಿಂಗಾಯತ ಸಮಾಜವು ಆಂತರಿಕ ಭಿನ್ನಾಭಿಪ್ರಾಯ, ಉಪಜಾತಿ ಪ್ರಜ್ಞೆ ಕಳೆದುಕೊಂಡು ಸಶಕ್ತವಾಗಬೇಕಾದರೆ ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪಿಕೊಳ್ಳಲೇಬೇಕು. ಬಸವಣ್ಣನವರ ವಿಚಾರಧಾರೆ ಸರಳತೆ, ಸಮಾನತೆ, ವೈಚಾರಿಕತೆಗಳ ಮೇಲೆ ನಿಂತಿದ್ದರೆ ಪಂಚಪೀಠಾಧೀಶರ ಆಚಾರ-ವಿಚಾರಗಳು ಆಡಂಬರ, ಅಸಮಾನತೆ, ಮೂಢ ಶ್ರದ್ಧೆಯ ಮೇಲೆ ನಿಂತಿದೆ. ಇಂದಿನ ಜನಜೀವನಕ್ಕೆ ಬೇಕಾದ ಪ್ರಗತಿಪರ ವಿಚಾರಧಾರೆಯ ಬಸವಣ್ಣನವರ

ಆಲೋಚನೆಗಳನ್ನು ಬಲಿಗೊಟ್ಟು ಪಂಚಪೀಠಾಧೀಶರನ್ನು ಅನುಸರಿಸಲು ಸಾಧ್ಯವಿಲ್ಲ. ಆದ್ದರಿಂದ
ಜನತೆ ಮತ್ತು ಸಮಾಜದ ಹಿತದೃಷ್ಟಿಯಿಂದ ಪಂಚಪೀಠಾಧೀಶರು ಬಸವ ಪಥಕ್ಕೆ ಬರುವುದು
ವಿವೇಕಯುಕ್ತ ಎಂದು ನಿರ್ಣಯಿಸಲಾಯಿತು.

ಕೇವಲ 20 ವರ್ಷಗಳಿಂದೀಚೆಗೆ ಪಂಚಮಸಾಲೆ ಪಂಗಡದವರು ಪಂಚಪೀಠಾಧೀಶರಿಗೆ
4. ಕೇವಲ 20 ವರ್ಷಗಳಿಂದೀಚೆಗೆ ಪಂಚಮಸಾಲೆ ಪಂಗಡದವರು ಪಂಚಪೀಠಾಧೀಶರಿಗೆ ಸೂತ್ರವನ್ನು ಹುಟ್ಟು ಹಾಕಲಾಯಿತು. ಇದನ್ನು ಮುಗ್ಧ
ಮಾತ್ರ ನಡೆದುಕೊಳ್ಳಬೇಕೆಂಬ ವಿಲಕ್ಷಣ ಸೂತ್ರವನ್ನು ಹುಟ್ಟು ಹಾಕಲಾಯಿತು. ಇದನ್ನು ಮುಗ್ಧ ಭಕ್ತಿಯವರು ನಂಬಿಯೂ ಬಿಟ್ಟರು. ಒಂದು ವೇಳೆ ಕೇವಲ ಅಡ್ಡಪಲ್ಲಕ್ಕಿ ಉತ್ಸವ ಮಾಡಿಸುವ
ಪರಿಶ್ರಮವಲ್ಲದೆ ಹೆಚ್ಚಿನ ಗುರು-ಭಕ್ತ ಬಾಂಧವ್ಯ ಉಭಯತರಲ್ಲಿ ಇದ್ದರೆ ಪಂಚಮಸಾಲೆ
ಮುಖಂಡರು ತಮ್ಮ ಜಾತಿಯ ಅರ್ಹವ್ಯಕ್ತಿಯನ್ನು ಪಂಚಪೀಠಗಳ ಮಠಗಳ ಗದ್ದುಗೆಗೆ
ಪಂಚಪೀಠಾಧೀಶರು ಏರಿಸಬಲ್ಲರೇ ಎಂಬ ಬಗ್ಗೆ ಆಲೋಚಿಸುವುದಕ್ಕೆ ಕಾಲವು ಪರಿಪಕ್ವವಾಗಿದೆ.
ಈ ದಿಶೆಯಲ್ಲಿ ಪಂಚಮಸಾಲೆ ಜನಾಂಗದವರು ಪಂಚಪೀಠಾಧೀಶರಿಂದ ಉತ್ತರಪಡೆಯಲು
ಆಗ್ರಹಿಸಬೇಕೆಂದು ನಿರ್ಣಯಿಸಲಾಯಿತು.

5. 2002ನೆಯ ಇಸವಿಯಲ್ಲಿ (ದಿ. 9-7-2002) ಪ್ರಧಾನ ಮಂತ್ರಿಗಳಿಗೆ ಒಂದು
ಮನವಿಯನ್ನು ಸಲ್ಲಿಸಿ ಬೇಡ ಜಂಗಮರೆಂದು ಜಂಗಮ ಜಾತಿಯವರನ್ನು ಪರಿಗಣಿಸಿ ಬೇಡುವ
ಕಾಯಕದಿಂದಾಗಿ ಆರ್ಥಿಕವಾಗಿ ಹಿಂದುಳಿದಿರುವ ಇವರನ್ನು ಪರಿಶಿಷ್ಟಜಾತಿಗೆ ಸೇರಿ ಸವಲತ್ತುಗಳನ್ನು
ನೀಡಬೇಕೆಂದು ಕೋರಿ ಪಂಚಪೀಠಾಧೀಶರು ಶ್ರೀ ಜಗದ್ಗುರು ಪಂಚಾಚಾರ್ಯ ಮಾನವ ಧರ್ಮ
ಸಂಸ್ಥೆಯ ಮೂಲಕ ವಿನಂತಿಸಿದ್ದಾರೆ. ಇದು ಲಿಂಗಾಯತ ಧರ್ಮಕ್ಕೆ ಮಾಡಿರುವ ಅಪಚಾರ
ಮಾತ್ರವಲ್ಲದೆ ಜಂಗಮ ವರ್ಗವನ್ನು ಲಿಂಗಾಯತ ಸಮಾಜದಿಂದ ಬೇರ್ಪಡಿಸುವ ಸಂಚನ್ನು
ಹೊಂದಿದೆ. ಅತ್ಯಂತ ದಯನೀಯ ಸ್ಥಿತಿಯಲ್ಲಿರುವ ಬುಡುಗ, ಬೇಡ, ಮಾಲ ಜಂಗಮರೆಂಬ ದಲಿತ
ಜನಾಂಗದ ಸವಲತ್ತುಗಳನ್ನು ಕಬಳಿಸುವ ಅಮಾನವೀಯತೆ ಇಂಥ ಪ್ರಯತ್ನದಲ್ಲಿರುವುದರಿಂದ
ಇದು ಖಂಡನಾರ್ಹ. 'ಜಂಗಮ' ಎಂದರೆ ಸಂಚರಿಸುವವ ಎಂಬ ಶಬ್ದಾರ್ಥದಂತೆ ಬುಡುಗ, ಬೇಡ,
ಮಾಲ ಜಂಗಮರು ಅಲೆಮಾರಿಗಳು. ಹಂದಿ ಸಾಕಾಣಿಕೆ ಮಾಡುವ ಜನರು. ಕೇವಲ ಆರ್ಥಿಕ
ಸವಲತ್ತಿಗಾಗಿ ಇಷ್ಟು ದಿನ ತಾವು ಲಿಂಗಾಯತರಲ್ಲೇ ಅತ್ಯಂತ ಶ್ರೇಷ್ಠರು ಎಂದು ಹೇಳಿಕೊಳ್ಳುತ್ತ
ಇತರ ವರ್ಗಗಳವರನ್ನು ಭಕ್ತರೆಂದು ಕರೆದು ಅವರಿಂದ ಗುರುತ್ವ ಮಠಾಧಿಕಾರ, ಪೀಠಾಧಿಕಾರಗಳ
ಹಕ್ಕನ್ನು ಕಿತ್ತುಕೊಂಡವರು ಈಗ ಅತ್ಯಂತ ಕೆಳಗಿನ ಸ್ತರದವರಾಗಿ ಶೋಷಣೆಗೆ ಒಳಗಾದ ಜನ
ಸಮೂಹದ ಸವಲತ್ತುಗಳಲ್ಲಿ ಪಾಲುಕೇಳುವ ಸ್ವಾರ್ಥಿ ಮುಖಂಡರ ಆಲೋಚನೆಯನ್ನು
ಪ್ರಜ್ಞಾವಂತರೇ ಆಗಿದ್ದರೆ ಪಂಚಪೀಠಾಧೀಶರು ಖಂಡಿಸಿ, ತಿಳಿ ಹೇಳಬೇಕಿತ್ತು. ಸಮಾಜವನ್ನು
ಒಂದುಗೂಡಿಸುವ ಬದಲು ಜಂಗಮರನ್ನು ಪ್ರತ್ಯೇಕಿಸುವುದೇ ಅಲ್ಲದೆ ತಾವು ಎಲ್ಲರ ಹಿತಾಸಕ್ತಿ
ಕಾಯುವವರಲ್ಲ ಎಂಬುದನ್ನು ತೋರಿಸಿಕೊಂಡಿದ್ದಾರೆಂದು ಖಂಡಿಸಲಾಯಿತಲ್ಲದೆ, ಜಂಗಮರು
ಇಂಥ ಸಂಕುಚಿತ ಚಿಂತನೆಯನ್ನು ಬಿಡಬೇಕೆಂದು ಆಗ್ರಹಿಸುವ ನಿರ್ಣಯ ಸ್ವೀಕರಿಸಲಾಯಿತು.
ಬಡವರು ಎಲ್ಲ ಉಪಜಾತಿಗಳಲ್ಲೂ ಇರುವ ಕಾರಣ ಆರ್ಥಿಕವಾಗಿ ಹಿಂದುಳಿದವರಿಗೆ ಸವಲತ್ತು
ಪಡೆಯುವ ಪ್ರಯತ್ನವನ್ನು ಒಗ್ಗಟ್ಟಿನಿಂದ ಮಾಡಬೇಕೆಂಬ ನಿರ್ಣಯ ಸ್ವೀಕರಿಸಲಾಯಿತು.

6. ವಚನ ಸಾಹಿತ್ಯದ ದುರ್ಬಳಕೆ ಬೇಡ - ವಚನ ಸಾಹಿತ್ಯವು ಜನ ಸಾಮಾನ್ಯರಿಗೆ ಅತ್ಯಂತ ಪ್ರಿಯವಾದ ಸಾಹಿತ್ಯವಾಗಿರುವುದರಿಂದ ವಚನಗಳನ್ನು ಸಮಯಕ್ಕೆ ತಕ್ಕಂತೆ ಅರ್ಥಂಬರ್ಥ ಬಳಸಿಕೊಂಡು ಜನ ಸಾಮಾನ್ಯರನ್ನು ದಾರಿತಪ್ಪಿಸುವ ಕೆಲಸ ಹಲವಾರು ಪಂಥಗಳಿಂದ ನಡೆಯುತ್ತಿರುವ ಬಗ್ಗೆ ಸಭೆಯಲ್ಲಿ ಕಳವಳವನ್ನು ವ್ಯಕ್ತಪಡಿಸಲಾಯಿತು. ಕುರುಡರು ಆನೆಯನ್ನು ಮುಟ್ಟಿನೋಡಿ ವರ್ಣಿಸಿದಂತೆ ವಚನಗಳನ್ನು ವೀರಶೈವವಾದಿಗಳು ಅರ್ಥಂಬರ್ಥ ಉಲ್ಲೇಖಿಸಿ ವೀರಶೈವ ಪಂಥದ ಆಚರಣೆಗಳನ್ನು ಖಂಡಿಸಿರುವ ವಚನಗಳನ್ನು ಮಂಡನಾತ್ಮಕವಾಗಿ ಬಳಸಿಕೊಂಡು ಜನರನ್ನು ದಾರಿತಪ್ಪಿಸುತ್ತಿದ್ದಾರೆ. ಬ್ರಹ್ಮಕುಮಾರಿ ಪಂಥದವರು ''ಶರಣರು ಕಂಡ ಶಿವ'' ಎಂಬ ಶೀರ್ಷಿಕೆಯಡಿಯಲ್ಲಿ ಜನರನ್ನು ಆಕರ್ಷಿಸಿ ವಚನಗಳನ್ನು ಹೇಳಿ ಅವರನ್ನು ಮರುಳುಗೊಳಿಸಿ ನಂತರ ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗ ಮುಂತಾದ ಲಾಂಛನಗಳನ್ನು ಬಿಡಿಸಿ ಲಿಂಗಾಯತ ಧರ್ಮ-ಸಂಸ್ಕೃತಿಗಳಿಗೆ ಬಹುದೊಡ್ಡಪೆಟ್ಟನ್ನು ಕೊಡುತ್ತಿದ್ದಾರೆ. ಮುಸ್ಲಿಂ ಬಂಧುಗಳು ಕುರಾನ್ ಅನ್ನು, ಕ್ರೈಸ್ತ ಬಂಧುಗಳು ಬೈಬಲನ್ನು ಇಟ್ಟುಕೊಂಡು ತಮ್ಮ ವಿಚಾರಗಳನ್ನು ಪ್ರತಿಪಾದಿಸುವಂತೆ ಬ್ರಹ್ಮಕುಮಾರಿ ಪಂಥದವರು ತಮ್ಮ ಸಂಸ್ಥಾಪಕರ ಸಾಹಿತ್ಯವನ್ನು ಹೇಳಿ ಪ್ರಚಾರ ಮಾಡಲಿ; ವಚನ ಸಾಹಿತ್ಯದ ಬಳಕೆ ಮಾಡಿಕೊಂಡು ವಂಚನೆ ಮಾಡುವುದು ಬೇಡ'' ಎಂದು ಖಂಡಿಸಲಾಯಿತಲ್ಲದೆ, ಇದೇ ರೀತಿ ಬ್ರಹ್ಮಕುಮಾರಿ ಪಂಥದವರು ತಮಗೆ ಸಂಬಂಧಿಸಿರದ ವಚನ ಸಾಹಿತ್ಯದ ದುರ್ಬಳಕೆ ಮಾಡಿದರೆ ಅವರ ಸಂಚಿನ ವಿರುದ್ಧ ಜನಜಾಗೃತಿಯ ಕಾರ್ಯವನ್ನು, ಅಹಿಂಸಾತ್ಮಕ ಪ್ರತಿಭಟನೆಯನ್ನು ಕೈಗೊಳ್ಳುವ ನಿರ್ಣಯ ತೆಗೆದುಕೊಳ್ಳಲಾಯಿತು. ಅತ್ಯಂತ ಸಂಪದ್ಭರಿತವಾದ ಸಿದ್ಧಾಂತ, ಸಾಧನೆ, ದರ್ಶನ, ಸಮಾನತೆಗಳಿಂದ ಕೂಡಿದ ಲಿಂಗಾಯತ ಧರ್ಮವು ಪರಿಪೂರ್ಣ ಸಮಾಜ ರಚನೆಗೆ ಬೇಕಾದ ಮಾರ್ಗದರ್ಶನ ಮಾಡುವುದರಿಂದ ಲಿಂಗಾಯತ ಧರ್ಮಾನುಯಾಯಿಗಳಿಗೆ ಬ್ರಹ್ಮಕುಮಾರಿ ಪಂಥದವರ ಅವಲಂಬನೆ ಬೇಕಾಗಿಲ್ಲ. ಆದ್ದರಿಂದ ಅವರು ವಚನ ಸಾಹಿತ್ಯದ ದುರ್ಬಳಕೆ ನಿಲ್ಲಿಸಬೇಕೆಂದು ಸಮ್ಮೇಳನದಲ್ಲಿ ಕರೆ ನೀಡಲಾಯಿತು. ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದಲ್ಲಿ ನಡೆದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನದ ಸಮಾರೋಪ ಸಮಾರಂಭವನ್ನು ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಉದ್ಘಾಟಿಸಿದರು. ಹಿರಿಯ ನ್ಯಾಯವಾದಿಗಳಾದ ಎ.ಸಿ. ಚಾಕಲಬ್ಬಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಗಣ್ಯ ವ್ಯಾಪಾರಸ್ಥರಾದ ಜಿ.ಜಿ. ದೊಡ್ಡವಾಡರವರು ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ನಿರ್ಣಯಗಳನ್ನು ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಘೋಷಿಸಿದರು. ಕರಿಬಸಪ್ಪ ಕೋರಿಶೆಟ್ಟರು ಎಲ್ಲರನ್ನೂ ಸ್ವಾಗತಿಸಿದರು. ಕುಮಾರಿ ಪ್ರತಿಭಾ ಗರಗ ಮತ್ತು ಮಮತಾ ಮುಮ್ಮಿಗಟ್ಟಿ ಪ್ರದರ್ಶಿಸಿದ ನೃತ್ಯ ರೂಪಕಗಳು ಜನತೆಯನ್ನು ಸಂತೋಷಗೊಳಿಸಿದವು. ಜಗನ್ಮಾತಾ ಅಕ್ಕಮಹಾದೇವಿ ಪೀಠಾಧಿಕಾರಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಮತ್ತು ಪೂಜ್ಯ ಮಾತೆ ಅಕ್ಕಮಹಾದೇವಿಯವರು ದಿವ್ಯಸನ್ನಿಧಿ ವಹಿಸಿದ್ದರು. ಸಮ್ಮೇಳನದ ಯಶಸ್ಸಿಗೆ ಶ್ರಮಿಸಿದ ಬಿ.ಜಿ. ಹೊಸಗೌಡರು ಮತ್ತು ಲಿಂಗರಾಜ ಇಂಗಳಳ್ಳಿ ಅವರನ್ನು ಸತ್ಕರಿಸಲಾಯಿತು.

ಲಿಂಗಾಯತರಿಗೆ ವೀರಶೈವ ಪದ ಅನ್ವಯಿಸುವುದಿಲ್ಲ

ಡಾ॥ ಪರಡ್ಡಿಯವರಿಗೆ ಉತ್ತರ

- ಮಾತಾಜಿ

"ಸೃಷ್ಟಿಕರ್ತನ ಕುರುಹಾದ ಗೋಳಾಕಾರದ ಇಷ್ಟಲಿಂಗವನ್ನು ಧರಿಸುವವರೆಲ್ಲ ಲಿಂಗಾಯತರೇ ವಿನಾ ವೀರಶೈವರಲ್ಲ. ಆದ್ದರಿಂದ ತಮ್ಮ ಧರ್ಮ-ಸಂಸ್ಕೃತಿಗೆ ಸಂಬಂಧಿಸಿರದ ವೀರಶೈವ ಪದದಿಂದ ಲಿಂಗಾಯತರು ತಮ್ಮನ್ನು ಕರೆದುಕೊಳ್ಳುವುದು ಅಸಂಬದ್ಧ. ವೀರಶೈವವು ಬಸವ ಪೂರ್ವದಲ್ಲಿದ್ದ ಒಂದು ಶೈವ ಪಂಥ. ಅದರ ನಂಬಿಕೆ ಆಚರಣೆಗಳೇ ಬೇರೆ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನನ್ನು ವೀರತ್ವಸಹಿತ ಭಕ್ತಿಯಿಂದ ಆರಾಧಿಸುವವರು ವೀರಶೈವರು. ಲಿಂಗಾಯತ ಧರ್ಮವು ತ್ರಿಮೂರ್ತಿಗಳನ್ನೂ ಮೀರಿದ ಸೃಷ್ಟಿಕರ್ತನಾದ ಲಿಂಗದೇವನನ್ನು ಏಕ ನಿಷ್ಠೆಯಿಂದ ಪೂಜಿಸಲು ಹೇಳುತ್ತದೆ.

ಬಸವ ಪೂರ್ವದಲ್ಲಿ ಪ್ರಚಲಿತವಿದ್ದ ವೀರಶೈವರು ಇಂದಿಗೂ ಆಂಧ್ರ, ತಮಿಳುನಾಡು, ಕೇರಳಗಳಲ್ಲಿ ನೆಲೆಸಿದ್ದಾರೆ. ಅವರಲ್ಲಿ ಇಂದಿಗೂ ಬ್ರಾಹ್ಮಣ ವೀರಶೈವರು, ಕ್ಷತ್ರಿಯ ವೀರಶೈವರು, ವೈಶ್ಯ ವೀರಶೈವರು, ಶೂದ್ರ ವೀರಶೈವರು ಎಂಬ ವರ್ಗೀಕರಣವಿದೆ. ವಚನ ಸಾಹಿತ್ಯದಲ್ಲಿ ಪ್ರತಿಪಾದಿಸಲ್ಪಟ್ಟ ಲಿಂಗಾಯತವು ಅರಿದೊಡೆ ಶರಣ ಮರೆದೊಡೆ ಮಾನವ ಎಂಬ ಎರಡೇ ವರ್ಗಗಳನ್ನು ಹೇಳುವುದಲ್ಲದೆ ಸಂಸ್ಕಾರ ನೀಡುವುದರಿಂದ ಮರೆವಿನ ಮಾನವ ಅರಿವಿನ ಶರಣನಾಗಲು ಬರುತ್ತದೆ ಎಂದು ಹೇಳುತ್ತದೆ." ಎಂದು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಡಾ॥ ಮಲ್ಲಿಕಾರ್ಜುನ ಪರಡ್ಡಿಯವರ (ದಿ. 21ರ ವಿಜಯ ಕರ್ನಾಟಕ) ವಿಚಾರಕ್ಕೆ ಪ್ರತಿಕ್ರಯಿಸಿದ್ದಾರೆ.

ಲಿಂಗಾಯತ ಸಮಾಜದ ಮುಖ್ಯ ಲಾಂಛನವಾದ ಇಷ್ಟಲಿಂಗವು 12ನೆಯ ಶತಮಾನದ ವಿಶ್ವಗುರು ಬಸವಣ್ಣನವರ ಕೊಡುಗೆ. ಕನ್ನಡವೇ ಲಿಂಗಾಯತದ ಧರ್ಮಭಾಷೆ. ಅದಕ್ಕಾಗಿಯೇ ಈ ಧರ್ಮವು ಕನ್ನಡ ನಾಡಿನಲ್ಲಿ ಮತ್ತು ಬಸವಣ್ಣನವರು, ಅವರ ಪರಂಪರೆಯ ಶರಣರು ನೆಲೆಸಿದ ಪ್ರದೇಶಗಳಲ್ಲೇ ಬೆಳೆದಿರುವುದು. ವೀರಶೈವವು ಆಗಮಗಳಲ್ಲಿ ಪ್ರತಿಪಾದಿತವಾದ ಶೈವದ ಒಂದು ಪಂಥ. ಇದು ಬಸವ ಪೂರ್ವದಲ್ಲೇ ಇದ್ದಿತಾದರೂ ಪಂಚಾಚಾರ್ಯರು ಯಾವುದೇ ರೀತಿ ಆ ವೀರಶೈವದ ಸ್ಥಾಪಕರು ಅಲ್ಲ. ಆಂಧ್ರ, ತಮಿಳು ನಾಡುಗಳಲ್ಲಿದ್ದ ವೀರಶೈವರು ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮದ ದೀಕ್ಷೆ ಪಡೆದಾಗ ಕರ್ನಾಟಕದಲ್ಲಿ ವೀರಶೈವ ಪದವು ಚಲಾವಣೆಗೆ ಬಂದಿತು. ಹಲವಾರು ಜಾತಿ ವರ್ಣ ಉದ್ಯೋಗಗಳ ಜನರು ಲಿಂಗಾಯತ ದೀಕ್ಷೆಯ ಮೂಲಕ ಸಮಾಜದೊಳಕ್ಕೆ ಬಂದರು. "ನೀವು ಯಾವ ಲಿಂಗಾಯತರು ?" ಎಂದು ಪರಸ್ಪರ ಪ್ರಶ್ನಿಸುವಾಗ ಮಡಿವಾಳ ಲಿಂಗಾಯತರು, ಬಣಜಿಗ ಲಿಂಗಾಯತರು, ರೆಡ್ಡಿ ಲಿಂಗಾಯತರು ಎಂದು ಹೇಳಿಕೊಳ್ಳುವಾಗ ವೀರಶೈವ ಮೂಲದಿಂದ ಬಂದವರು ನಾವು "ವೀರಶೈವ ಲಿಂಗಾಯತರು" ಎಂದು ಹೇಳಿಕೊಂಡಿದ್ದರಿಂದ ವೀರಶೈವ ಪದ ಒಳಗೆ

ತೂರಲು ಅವಕಾಶ ಸಿಕ್ಕಿತು. ಆದರೆ ಇಂದಿಗೂ ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವುದು ಲಿಂಗಾಯತವೇ ವಿನಾ ವೀರಶೈವವಲ್ಲ. ವಿಶ್ವವಿದ್ಯಾಲಯದ ಬರಹಗಾರರು ಮತ್ತು ವೀರಶೈವ ಮಹಾಸಭೆಯವರಿಂದ ಸಮಾಜದಲ್ಲಿ ತೀರಾ ಇತ್ತೀಚೆಗೆ ವೀರಶೈವ ಪದವು ಪ್ರಚಲಿತವಾಗುತ್ತ ಬಂದಿತು.

"ವಿರಕ್ತ ಮಠಾಧೀಶರಾಗಲಿ, ಶರಣ ಸಂಪ್ರದಾಯದ ಮಠಗಳವರಾಗಲಿ. ಪಂಚಪೀಠಗಳಿಗೆ ಸಂಬಂಧಿಸಿಲ್ಲವಾದರೂ ಅವರು ಐತಿಹಾಸಿಕ ಸತ್ಯವನ್ನು ತಿರುಚುವ ದುಸ್ಸಾಹಸ ಮಾಡಿಲ್ಲ." ಎಂದು ಡಾ॥ ಮಲ್ಲಿಕಾರ್ಜುನ ಪರಡ್ಡಿಯವರು ಹೇಳಿದ್ದಾರೆ. ಮಠಾಧೀಶರಲ್ಲಿ ಬಹುಪಾಲು ಜನರು ಗಂಭೀರ ಮೌನವಹಿಸಿದ ಮಾತ್ರಕ್ಕೆ ಅವರು ಪಂಚಾಚಾರ್ಯವಾದವನ್ನು ಒಪ್ಪಿಕೊಂಡಿದ್ದಾರೆಂದಲ್ಲ. ಒಂದನೆಯದಾಗಿ ಅವರು ಅಧ್ಯಯನ ಮಾಡುವ ಶ್ರಮ ತೆಗೆದುಕೊಳ್ಳದಿರುವುದಾದರೆ ಎರಡನೆಯ ಕಾರಣ ಪ್ರಭಾವಶಾಲಿ ಶ್ರೀಮಂತ ಮೂಢಭಕ್ತರು ಮತ್ತು ರಾಜಕಾರಣಿಗಳು ಹಾಕುವ ಲಕ್ಷ್ಮಣ ರೇಖೆ ದಾಟದಿರುವುದು. ಆದ್ದರಿಂದ ಅವರ ಮೌನವು ಡಾ॥ ಪರಡ್ಡಿಯವರಿಗೆ ಸಮ್ಮತಿ ಸೂಚಕವಾಗಿ ಕಂಡರೆ ನಮಗೆ ಆದಿ ಪಂಚಾಚಾರ್ಯರ ನಿರಾಕರಣೆಯ ಸಂಕೇತವಾಗಿ ತೋರುತ್ತದೆ. ವಿರಕ್ತ ಮಠಾಧೀಶರಲ್ಲೂ ಕೆಲವರು ಧರ್ಮಗುರು ಬಸವಣ್ಣನ ಮಹತ್ವವನ್ನು ಕಡಿಮೆ ಮಾಡಬೇಕೆನ್ನುವವರು ವೀರಶೈವ ಪದಕ್ಕೆ ಜೋತು ಬೀಳುತ್ತಾರೆ. ಇದೇ ಉದ್ದೇಶದಿಂದಲೇ ಶಿವೈಕ್ಯ ಶ್ರೀ ಹಾನಗಲ್ ಕುಮಾರ ಸ್ವಾಮಿಗಳು ವೀರಶೈವ ಮಹಾಸಭೆಯನ್ನು ಹುಟ್ಟುಹಾಕಿದ್ದು ಮತ್ತು ಜಂಗಮದಂತಹ ಕ್ರಾಂತಿಕಾರಿ ಬಸವ ಪರಿಕಲ್ಪನೆಯನ್ನು ಜಾತಿ ಮಟ್ಟಕ್ಕೆ ಇಳಿಸಿದ ಶಿವಯೋಗ ಮಂದಿರವನ್ನು ಪ್ರಾರಂಭಿಸಿದುದು.

ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಬರೆದು, 1977ರಲ್ಲಿ ಎರಡನೆಯ ಮುದ್ರಣವನ್ನು ಕಂಡ ವಚನಾಮೃತ ಎಂಬ ಪುಸ್ತಕದಲ್ಲಿ ವೀರಶೈವ ಪದ ಬಳಸಿರುವುದನ್ನು ಅದಕ್ಕೆ ನಾನು ಮುನ್ನುಡಿ ಬರೆದಿರುವುದನ್ನು ಡಾ॥ ಪರಡ್ಡಿ ಉಲ್ಲೇಖಿಸಿದ್ದಾರೆ. ನಿಜ, ಪೂಜ್ಯ ಗುರುಗಳಾಗಲಿ, ನಾನಾಗಲಿ ಬೇರೆಯವರ ಸಾಹಿತ್ಯ ಓದಿ ಲಿಂಗಾಯತ - ವೀರಶೈವ ಒಂದೇ ಎಂದು ತಿಳಿದುದರಿಂದ ಸಾಹಿತ್ಯದಲ್ಲಿ ವಿಪುಲವಾಗಿ ಬಳಸುತ್ತಿದ್ದೆವು. 1978ರಲ್ಲಿ ತಮಿಳು ನಾಡಿನಲ್ಲಿ ಪ್ರವಾಸ ಮಾಡಿದಾಗ ಮೈಲಾಮ್ ಎಂಬಲ್ಲಿ ವೀರಶೈವ ಮಠ, ಲಿಂಗಾಯತ ಮಠ ಎರಡೂ ನೋಡಲು ಸಿಕ್ಕಾಗ ಉಭಯ ಸ್ವಾಮಿಗಳೊಡನೆ ಚರ್ಚಿಸಿದಾಗ ನಮಗೆ ದಿಗ್ಭ್ರಾಂತಿಯಾಯಿತಾದರೂ ಒಂದು ಅದ್ಭುತ ಐತಿಹಾಸಿಕ ಸತ್ಯವು ಸಿಕ್ಕಿ ಪರಮಾನಂದವಾಗಿ ಆಗ ಜಾಡು ಎರಡೂ ಪ್ರತ್ಯೇಕವಾಗಿ ಸಾಗಿಬಂದಿರುವುದು ಸ್ಪಷ್ಟವಾಯಿತು. ಆ ನಂತರ ಬರೆದ ಎಲ್ಲ ಲೇಖನ ಮತ್ತು ಗ್ರಂಥಗಳಲ್ಲಿ ಲಿಂಗಾಯತ ಪದವನ್ನೇ ಬಳಸಿಕೊಂಡು ಬರುವುದೇ ಅಲ್ಲದೆ ವೀರಶೈವವು ಒಂದು ಪಂಥ ಮಾತ್ರ. ಲಿಂಗಾಯತವು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ ಎಂದು ಪ್ರಚಾರ ಮಾಡುತ್ತಿದ್ದೇವೆ.

ಅನೇಕ ವಚನಗಳಲ್ಲಿ ಶಿವಾಗಮಗಳ ಶ್ಲೋಕಗಳು ಉಲ್ಲೇಖಿಸಲ್ಪಟ್ಟಿವೆ ಎಂಬ ಹಳಸಲು

ಸುಳ್ಳನ್ನು ಡಾ॥ಪರಡ್ಡಿ ಹೇಳಿದ್ದಾರೆ. ವೇದ, ಆಗಮ, ಉಪನಿಷತ್, ಶೃತಿ ಮುಂತಾದುವು ಸಾವಿರಾರು ವರ್ಷಗಳಷ್ಟು ಹಿಂದಿನವು. ಅವುಗಳಲ್ಲಿನ ಕೆಲವು ಶ್ಲೋಕಗಳನ್ನು ಸ್ವತಂತ್ರ ವಿಚಾರವಾದಿಗಳಾದ ಬಸವಾದಿ ಪ್ರಮಥರು ತಮಗೆ ಸರಿ ಕಂಡರೆ ಉದಾಹರಿಸಿದ್ದಾರೆ. ತಪ್ಪಾಗಿ ಕಂಡಾಗಲೂ ಉದಾಹರಿಸಿ, ಟೀಕಿಸಿದ್ದಾರೆ. ವೀರಶೈವ ಮೂಲದಿಂದ ಬಂದವರು ತಾವು ಹುಟ್ಟಿನಿಂದ, ವಂಶದಿಂದಲೇ ಶ್ರೇಷ್ಠರು ಎಂದು ಬೀಗಿ ಇನ್ನಿತರ ಅನುಯಾಯಿಗಳನ್ನು ತಿರಸ್ಕಾರದಿಂದ ಕಂಡಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಹೀಗೆ ತಿಳಿಹೇಳಿದ್ದಾರೆ:

"ವೀರಶೈವನಾದರೆ ಪರಧನವ, ಪರಸತಿಯರ ಮುಟ್ಟದಿರಬೇಕು. ಎಂತೂ ಪರಹಿಂಸೆಯ ಎಸಗದಿರಬೇಕು. ಒಡಲಳಿದಡೆಯೂ ಹಿಡಿದ ಆಚಾರವ ಬಿಡದಿರಬೇಕು. ಇಂತೀ ವೀರಾಚಾರವು ನೆಲೆಗೊಳ್ಳದೆ ವೀರವಂಶದಲ್ಲಿ ಹುಟ್ಟಿದ ಮಾತ್ರಕ್ಕೆ ವೀರಶೈವನೆಂತಪ್ಪನಯ್ಯ ಕೂಡಲಚನ್ನಸಂಗಮದೇವ". ಹುಟ್ಟಿನಿಂದಲೇ ಶ್ರೇಷ್ಠತ್ವ ಆರೋಪಿಸಿಕೊಳ್ಳುವುದು ವೀರಶೈವ ಆಚರಣೆಯೇ ವಿನಾ ಲಿಂಗಾಯತ ಧರ್ಮದ ಆಚರಣೆಯಲ್ಲ. "ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನದಲ್ಲಿ ಬಸವಾಯತ, ಬಸವ ಧರ್ಮ ಎಂಬ ಆಘಾತಕಾರಿ, ಆತ್ಮಘಾತುಕ ನಿರ್ಣಯ ತೆಗೆದುಕೊಂಡಿಲ್ಲ; ಶರಣರಿಗೆ ಮಾಂಸಾಹಾರ ನಿಷಿದ್ಧವಲ್ಲ ಎಂದು ನಿರ್ಣಯ ತೆಗೆದುಕೊಂಡಿಲ್ಲ" ಎಂದು ವ್ಯಂಗ್ಯವಾಡಿ ಡಾ॥ ಪರಡ್ಡಿ ಸಮಾಧಾನ ವ್ಯಕ್ತಪಡಿಸಿದ್ದಾರೆ. ಬಸವ ಧರ್ಮ ಪೀಠ ಮತ್ತು ರಾಷ್ಟ್ರೀಯ ಬಸವ ದಳ ಚಿತ್ರದುರ್ಗ ಶ್ರೀಗಳ ಅಂಥ ಬಸವ ವಿರೋಧಿ ಹೇಳಿಕೆಯನ್ನು ಎಂದೋ ತೀವ್ರವಾಗಿ ಖಂಡಿಸಿದೆ. ಲಿಂಗಾಯತ ಧರ್ಮವು ಬಸವಣ್ಣನವರಿಂದ ಕೊಡಲ್ಪಟ್ಟುದರಿಂದ ಅದು ಬಸವ ಧರ್ಮವೂ ಅಹುದು, ವಚನ ಸಾಹಿತ್ಯದ ಮೂಲಕ ಪ್ರತಿಪಾದಿಸಲ್ಪಟ್ಟುದರಿಂದ ವಚನ ಧರ್ಮವೂ ಅಹುದು. ಬಸವ ಪರಂಪರೆಯ ಶರಣರಿಂದ ಪೋಷಿಸಲ್ಪಟ್ಟ ಕಾರಣ ಅದು ಶರಣ ಧರ್ಮವೂ ಅಹುದು. ಇಷ್ಟಲಿಂಗವನ್ನು ಧರಿಸಿದ ಲಿಂಗಾಯತರಿಂದ ಕೂಡಿದ ಒಂದು ಸಮಾಜ ಇರುವುದರಿಂದ ಈ ಎಲ್ಲ ಪದಗಳನ್ನು ಬರವಣಿಗೆ, ಭಾಷಣ, ಪ್ರವಚನಗಳಲ್ಲಿ ಬಳಸಿದರೂ ಸಾಮಾಜಿಕವಾಗಿ ರೂಢಿಗೊಂಡಿರುವ ಲಿಂಗಾಯತ ಧರ್ಮದ ಸ್ಪಷ್ಟಕಲ್ಪನೆ ಜನರಿಗೆ ದೊರೆಯಬೇಕೆಂದು ವೀರಶೈವ ಪದ ಕೈಬಿಟ್ಟು ಲಿಂಗಾಯತಕ್ಕೆ ಒತ್ತುಕೊಡಲಾಗಿದೆ. ವಚನ ಸಾಹಿತ್ಯದಲ್ಲಿ 12ನೆಯ ಶತಮಾನದ ಶರಣರು "ಲಿಂಗ" ಪದವನ್ನೇ ಪ್ರಧಾನವಾಗಿಟ್ಟುಕೊಟ್ಟು ಆಯತ, ಸ್ವಾಯತ, ಸನ್ನಿಹಿತ ಎಂಬ ಕ್ರಿಯೆಗಳನ್ನು ಒತ್ತಿ ಒತ್ತಿ ಬಳಸುತ್ತಾರೆ. ಲಭ್ಯವಾಗಿರುವ 1393 ವಚನಗಳಲ್ಲಿ (ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ, 1968) ಬಸವಣ್ಣನವರು ಕೇವಲ ಒಂದು ವಚನ 1174ರಲ್ಲಿ ವೀರಶೈವ ಪದ ಬಳಸಿ, ವೀರಶೈವದಿಂದ ಬಂದು ಲಿಂಗವಂತನಾದ ಬಳಿಕ ಏಕ (ಇಷ್ಟ)ಲಿಂಗ ನಿಷ್ಠೆ ಬೆಳೆಯಬೇಕು ಹಲವು ದೈವ, ಕ್ಷೇತ್ರ, ತೀರ್ಥಂಗಳಿಗೆ ಹೋಗಬಾರದು ಎಂದು ಕಟುವಾಗಿ ಖಂಡಿಸಿದ್ದಾರೆ.

ಲಿಂಗಾಯತ ಧರ್ಮ ಸಂಸ್ಥಾಪಕರಾದ ಬಸವಣ್ಣನವರು ಶೈವ ಬ್ರಾಹ್ಮಣ ದಂಪತಿಗಳಾದ ಮಾದರಸ-ಮಾದಲಾಂಬಿಕೆಯರ ಮಗನಾಗಿ ಹುಟ್ಟಿ, ಪಾಶುಪತ ಶೈವ

ಸಂಪ್ರದಾಯದ ಕೂಡಲ ಸಂಗಮದ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಿ ತಮ್ಮ 21ನೆಯ ವಯಸ್ಸಿನಲ್ಲಿ ಇಷ್ಟಲಿಂಗದ ಪರಿಕಲ್ಪನೆ ಹೊಂದಿದರು. ಈ ಸತ್ಯವನ್ನು ಹರಿಹರ ಮಹಾಕವಿ "ತನ್ನ ಹೃತ್ಕಮಳದೊಳು ಬೆಳೆದ ಲಿಂಗಕ್ಕೆ ಕರಕಮಳವನಾಂತು" ಎನ್ನುವ ಮೂಲಕ ದೃಢೀಕರಿಸುತ್ತಾನೆ. ಬಸವಣ್ಣನವರು ಯಾವ ವ್ಯಕ್ತಿಯಿಂದಲೂ ದೀಕ್ಷೆ ಪಡೆದಿಲ್ಲ. ಸೃಷ್ಟಿಕರ್ತನೇ ಅವರ ಜ್ಞಾನಗುರು, ಒಂದು ವೇಳೆ ವ್ಯಕ್ತಿಗುರು ಅವರಿಗೆ ಇದ್ದಿದ್ದರೆ ಬೇಡರ ಕಣ್ಣಪ್ಪ, ಓಹಿಲಯ್ಯ, ಶಿರಿಯಾಳನಂತಹ ಶಿವಭಕ್ತರನ್ನು ಸ್ಮರಿಸಿದ ಅವರು ತಮ್ಮ ದೀಕ್ಷಾಗುರುವನ್ನು ಸ್ಮರಿಸುತ್ತಿರಲಿಲ್ಲವೆ ? ಶಿವಾಗಮಗಳ ಧರ್ಮವನ್ನು ಅವರು ಸ್ವೀಕರಿಸಿದ್ದರೆ "ಆಗಮದ ಮೂಗ ಕೊಯ್ಯುವೆ" ಎನ್ನುತ್ತಿದ್ದರೆ ?

"ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪಿಸಿದರೆಂದು ನಾವು ಹೇಳುವ ಮಾತಿಗೆ ಬೆಲೆ ಬರುವುದು ಹೇಗೆ ?" ಎಂದು ಡಾ॥ ಪರಡ್ಡಿ ಸಂದೇಹ ವ್ಯಕ್ತಪಡಿಸಿದ್ದಾರೆ. 19ನೆಯ ಶತಮಾನದ ಅಂತ್ಯದವರೆಗೂ ಲಿಂಗಾಯತರು ಮತ್ತು ಲಿಂಗಾಯತೇತರರು ನಂಬಿದ್ದೇ ಹಾಗೆ. ಇದ್ದಕ್ಕಿದ್ದ ಹಾಗೆಯೇ ಪಂಚಾಚಾರ್ಯವಾದವನ್ನು ಮೈಸೂರಿನ ದಿ॥ ಕಾಶೀನಾಥ ಶಾಸ್ತ್ರಿಗಳು ಕೃತ್ರಿಮವಾಗಿ ಹುಟ್ಟುಹಾಕಿದಾಗ ಸಮಾಜದಲ್ಲಿ ಗೊಂದಲ ಶುರುವಾಯಿತು. ಸಮಾಜದಲ್ಲಿ ಅಂತರ್ಗತವಾಗಿರುವ ಬಸವ ಭಕ್ತಿ, ವಿಪುಲವಾಗಿ ಸಿಕ್ಕಿ ಎಲ್ಲರ ಕಣ್ತೆರೆಸುತ್ತಿರುವ ವಚನ ಸಾಹಿತ್ಯ ತ್ವರಿತ ವೇಗದಿಂದ ಗೊಂದಲವನ್ನು ಪರಿಹರಿಸಿ ನಿಜ ಸಂಗತಿ ತಿಳಿಸುತ್ತಿವೆ. ಆದ್ದರಿಂದ ಡಾ॥ ಪರಡ್ಡಿಯವರು ಪೂರ್ವನಿರ್ಧಾರಿತ ತಮ್ಮ ಗೊಂದಲವನ್ನು ಬೇಗನೆ ನಿವಾರಣೆ ಮಾಡಿಕೊಳ್ಳುವುದು ಸೂಕ್ತ.

ವೀರಶೈವವಾಗಿರುವ ಉಸಿರಾಡಿಸಲು ಬಸವಣ್ಣ ಆಕ್ಸಿಜನ್ ಸಿಲಿಂಡರ್ ಆಗಬೇಕೆ ? ವೀರಶೈವ ಎಂಬ ಒಂದು ಧರ್ಮ ನಿಜಕ್ಕೂ ಇದ್ದರೆ ಪಂಚಪೀಠಾಧೀಶರಿಗೆ ಮತ್ತು ಡಾ॥ ಮಲ್ಲಿಕಾರ್ಜುನ ಪರಡ್ಡಿಯಂಥವರಿಗೆ ಬಸವಣ್ಣನವರೆಂಬ ಆಕ್ಸಿಜನ್ ಸಿಲಿಂಡರ್ ಉಸಿರಾಡಿಸಲು ಏಕೆ ಬೇಕು ? ಅವರುಗಳು ಪ್ರಾಮಾಣಿಕರಾಗಿದ್ದರೆ ಬಸವಣ್ಣನವರು ಮತ್ತು ಅವರ ಸಮಕಾಲಿನ ಶರಣರು ರಚಿಸಿದ ವಚನ ಸಾಹಿತ್ಯವನ್ನು ಅವಲಂಬಿಸಬೇಕಾಗಿಲ್ಲ. ಎರಡನೆಯದಾಗಿ ಬಸವಣ್ಣನವರು ಒಬ್ಬ ಮಹಾಪುರುಷರು, ಅವರ ಬೋಧನೆ-ಆಚರಣೆ ಅನುಕರಣೀಯ ಎಂದಾದರೆ ಬಸವಣ್ಣನವರು ಬೋಧಿಸಿದ ಸಮಾನತೆ, ಸರಳತೆ, ವೈಚಾರಿಕತೆ, ಜಾತ್ಯತೀತತೆ ಅಳವಡಿಸಿಕೊಳ್ಳಲಿ. ಇಂದಿನ ಕಾಲಕ್ಕೆ ಹೊಂದದ ಆಡಂಬರದ ಪೂಜೆ, ವೈಭವದ ವೇಷಭೂಷಣ, ಮೂಢ ಆಚರಣೆಯ ಪ್ರತೀಕವಾದ ಅಡ್ಡಪಲ್ಲಕ್ಕಿ, ರಾಜರು ನಡೆಸಬೇಕಾದ ದರ್ಬಾರ್‌ಗಳನ್ನು ಕೈಬಿಟ್ಟು ಅನುಭವ ಮಂಟಪದ ಸಂಸ್ಕೃತಿ ಬೆಳೆಸಲಿ." ಎಂದು ಜಗದ್ಗುರು ಮಾತೆ ಮಹಾದೇವಿಯವರು ಆಶಿಸಿದ್ದಾರೆ.

★★★

ಗುರುವಾರ ದಿ. 28-10-2004, ವಿಜಯ ಕರ್ನಾಟಕ

"ಮಾತೆ ಮಹಾದೇವಿ ಟೀಕೆಯೇ ನನ್ನ ಗುರಿ"

ಲಿಂ. ಕುಮಾರಸ್ವಾಮಿಗಳ ಬಗ್ಗೆ ಲಘು ಮಾತು ಸಲ್ಲ

ಅಕ್ಕಿ ಆಲೂರ, ಅ. 27 - ಲಿಂ. ಹಾನಗಲ್ ಕುಮಾರ ಮಹಾಸ್ವಾಮಿಗಳ ಬಗ್ಗೆ ಹಾಗೂ ಶಿವಯೋಗ ಮಂದಿರದ ಬಗ್ಗೆ ಲಘುವಾಗಿ ಮಾತನಾಡಿರುವ ಮಾತೆ ಮಹಾದೇವಿಯವರ ನಿಲುವನ್ನು ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ. ಸಮೀಪದ ಶಾಡಗುಪ್ಪಿ ಗ್ರಾಮದಲ್ಲಿ ಸೋಮವಾರ ಜರುಗಿದ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳ 812ನೆಯ ತುಲಾಭಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಲಿಂ. ಕುಮಾರ ಮಹಾಸ್ವಾಮಿಗಳ ಯೋಗ್ಯತೆ ಅಳೆಯುವುದು ಸಲ್ಲದು. ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀಗಳ ಬಗ್ಗೆ ಲಘುವಾಗಿ ಮಾತನಾಡುವ ನೈತಿಕ ಹಕ್ಕು ಮಾತೆ ಮಹಾದೇವಿ ಅವರಿಗೆ ಇಲ್ಲ. ಬಸವಣ್ಣನವರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಮಾತೆ ಮಹಾದೇವಿ ಹಣಗಳಿಸುವುರದಲ್ಲೇ ಕಾಲಹರಣ ಮಾಡುತ್ತಿದ್ದಾರೆಯೇ ವಿನಾ ಭಕ್ತರಲ್ಲಿ ಧರ್ಮದ ಬಗ್ಗೆ ಜಾಗೃತಿಮೂಡಿಸುವ ಕಾರ್ಯ ಇವರಿಂದ ಆಗಿಲ್ಲ. ಬದಲಾಗಿ ಧರ್ಮದಲ್ಲಿ ವಿಷ ಬೀಜ ಬಿತ್ತಿ ಲಿಂಗಾಯತ, ವೀರಶೈವರ ನಡುವೆ ವೈಮನಸ್ಸು ಸೃಷ್ಟಿಸುತ್ತಿರುವ ಇವರ ನಿಲುವಿಗೆ ಸಾರ್ವಜನಿಕರೇ ತಕ್ಕಪಾಠ ಕಲಿಸುತ್ತಾರೆ ಎಂದರು. ಲಿಂ. ಕುಮಾರ ಸ್ವಾಮಿಗಳು ಕೇವಲ ಹಾನಗಲ್ಲ ಮಠಕ್ಕೆ ಮಾತ್ರ ತಮ್ಮ ಗಮನ ನೀಡಿದ್ದರೆ ಇಂದು ಈ ಮಠ ಇಡೀ ಉತ್ತರ ಕರ್ನಾಟಕ ಭಾಗದಲ್ಲಿ ಅತೀ ಶ್ರೀಮಂತ ಮಠವಾಗುತ್ತಿತ್ತು. ಆದರೆ ಕಳಕಳಿಯಿಂದ ಸಮಾಜಕ್ಕಾಗಿ ಶ್ರಮಿಸಿದ ಶ್ರೀಗಳ ಬಗ್ಗೆ ಹಾಗೂ ಶಿವಯೋಗ ಮಂದಿರದ ಬಗ್ಗೆ ಲಘುವಾಗಿ ಮಾತನಾಡಿರುವ ಮಾತೆ ಮಹಾದೇವಿಯವರ ಧೋರಣೆ ಖಂಡನಾರ್ಹ. ಇಂತಹ ಸಂದರ್ಭದಲ್ಲಿ ಮಾತೆ ಮಹಾದೇವಿಯವರ ನಿಲುವಿನ ವಿರುದ್ಧ ಒಬ್ಬ ಮಠಾಧೀಶರೂ ಚಕಾರ ಎತ್ತದಿರುವುದು ತಮಗೆ ಅತೀವ ನೋವನ್ನುಂಟು ಮಾಡಿದೆ ಎಂದರು.

ಮಾತೆ ಮಹಾದೇವಿಯವರಿಗೂ ಇಂತಹ ಸ್ವಾಮಿಗಳಿಗೂ ವ್ಯತ್ಯಾಸವಿಲ್ಲ. ಪ್ರತಿನಿತ್ಯ ಕೂಡಲ ಸಂಗಮದಲ್ಲಿ ಭಕ್ತರಿಂದ ಹಣಕೊಳ್ಳೆ ಹೊಡೆಯುತ್ತಾ ಕಾಲಹರಣ ಮಾಡುತ್ತಿರುವ ಅವರ ವಿರುದ್ಧ ಟೀಕೆ ಮಾಡುವುದೇ ಇನ್ನು ಮುಂದೆ ತಮ್ಮ ಒಂದಂಶದ ಕಾರ್ಯಕ್ರಮ ಎಂದು ಅವರು ಘೋಷಿಸಿದರು. ದೇಶದ ರಾಜಕೀಯ ವಲಯ ಇಂದು ಭ್ರಷ್ಟರಿಂದ ತುಂಬಿ ತುಳುಕುತ್ತಿದೆ. ಭ್ರಷ್ಟರ ಸಂಹಾರವಾಗುವವರೆಗೂ ಈ ದೇಶದ ಉದ್ಧಾರ ಕನಸಿನ ಮಾತು ಎಂದರು. ತುಲಾಭಾರ ಸ್ವೀಕರಿಸಿದ ಗದುಗಿನ ಡಾ. ಪಂಡಿತ ಪುಟ್ಟರಾಜಕವಿ ಗವಾಯಿಗಳು ಮಾತನಾಡಿ, ಶಿವಯೋಗ ಮಂದಿರದ ಸಂಸ್ಥಾಪಕರಾದ ಲಿಂ. ಕುಮಾರ ಮಹಾಸ್ವಾಮಿಗಳ ಪವಾಡ ಅಪಾರ. ಇಂತಹ ಪವಾಡ ಪುರುಷರು ಸಾರ್ವಕಾಲಿಕರಾಗಿದ್ದು ಇವರ ವಿರುದ್ಧ ಮಾತನಾಡುತ್ತಿರುವುದು ತಮಗೆ ಬೇಸರವನ್ನುಂಟು ಮಾಡಿದೆ ಎಂದು ಭಾವಪರವಶರಾದ ಅವರು, ಅಂಧ ಅನಾಥರ ಉದ್ಧಾರಕ್ಕಾಗಿ ಸರ್ಕಾರ ಹೆಚ್ಚುಗಮನ ಹರಿಸಬೇಕಿದೆ ಎಂದರು.

ಲಿಂಗಾಯತ ಸಮಾಜವನ್ನು ದಾರಿತಪ್ಪಿಸಿದವರೇ ಲಿಂ|| ಹಾನಗಲ್ ಕುಮಾರ ಸ್ವಾಮಿಗಳು

- ಜಗದ್ಗುರು ಮಾತೆ ಮಹಾದೇವಿ

ಮೂರು ಸಾವಿರ ಶ್ರೀಗಳಿಗೆ ಪ್ರತ್ಯುತ್ತರ

" ಜಾತಿವರ್ಣವರ್ಗ ಲಿಂಗ ಭೇದಗಳನ್ನು ನಿರಾಕರಿಸಿ, ಎಲ್ಲರ ಹಕ್ಕುಬಾಧ್ಯತೆಗಳನ್ನು ಎತ್ತಿಹಿಡಿಯಲೆಂದೇ 12ನೆಯ ಶತಮಾನದ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಗುರಿ ಶರಣ ಸಮಾಜ ರಚನೆ. ಇಲ್ಲಿ ಭಕ್ತತ್ವ ಗುರುತ್ವ ಜಂಗಮತ್ವಗಳು ಜನನ ಮತ್ತು ವಂಶಾಧಾರಿತವಲ್ಲ ಗುಣ ಪ್ರಧಾನ. ಅರ್ಹತೆಯ ಆಧಾರದ ಮೇಲೆ ಯಾರು ಬೇಕಾದರೂ "ಆಚಾರದಿಂದ ಭಕ್ತ, ಅರಿವಿನಿಂದ ಗುರು, ಅನುಭಾವದಿಂದ ಜಂಗಮ" ಆಗಬಲ್ಲರು. ಹೀಗಾಗಿಯೇ 12ನೆಯ ಶತಮಾನದಿಂದ ಇಂದಿನವರೆಗೆ ಬಸವಣ್ಣನವರೇ ಆದಿ ಪ್ರಮಥರಾಗಿ ಹರಿದು ಬಂದಿರುವ ಶರಣ ಪರಂಪರೆಯಲ್ಲಿ ಎಲ್ಲ ಜಾತಿ ಮತಗಳವರೂ ಗುರು, ಜಂಗಮರು ಮಾತ್ರವಲ್ಲ ಮಠಾಧೀಶರು ಆಗುತ್ತ ಬಂದಿದ್ದಾರೆ. ಹಳೆಯ ಮೈಸೂರು ಭಾಗದಲ್ಲಿ ಇಂದಿಗೂ ಸಹ ಲಿಂಗಾಯತರೊಳಗಣ ಭಕ್ತ ವರ್ಗದವರು ಮಠಾಧೀಶರಾಗುತ್ತಿದ್ದಾರೆ.

ಜಂಗಮವನ್ನು ಒಂದು ಜಾತಿಯಾಗಿ ಸಂಕುಚಿತಗೊಳಿಸಿದ್ದಲ್ಲದೆ ಜಾತಿಯಿಂದ ಜಂಗಮತ್ವ ನಿರ್ಧರಿಸುವ ಮನೋಭಾವ ಬೆಳೆಸಿ ಮಠಪೀಠಾಧಿಕಾರವನ್ನು ಜಾತಿ ಜಂಗಮರಿಗೆ ಸೀಮಿತಗೊಳಿಸಿ ಲಿಂಗಾಯತ ಧರ್ಮದ ಮೂಲಭೂತ ವಿಚಾರವನ್ನೇ ವಿಕೃತಗೊಳಿಸಿದ ಶಿವಯೋಗ ಮಂದಿರವನ್ನು ಹುಟ್ಟುಹಾಕಿದ ಶ್ರೀ ಹಾನಗಲ್ ಕುಮಾರ ಸ್ವಾಮಿಗಳ ಪ್ರಯತ್ನವನ್ನು ಅಪಕಾರ ಎನ್ನದೆ ಉಪಕಾರ ಎಂದು ಕೊಂಡಾಡಬೇಕೆ?" ಎಂದು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮೂರು ಸಾವಿರ ಮಠಾಧೀಶರನ್ನು ಪ್ರಶ್ನಿಸಿ, ಮಾರುತ್ತರ ನೀಡಿದ್ದಾರೆ.

"ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ ಧಾರ್ಮಿಕ ಸಂವಿಧಾನವಿರುತ್ತದೆ. ಜ್ಞಾನದ ದೃಷ್ಟಿಯಿಂದ ಇನ್ನಿತರ ಧರ್ಮಶಾಸ್ತ್ರಗಳನ್ನು ಅಧ್ಯಯನ ಮಾಡುವುದು ಕಡ್ಡಾಯವಲ್ಲ, ಐಚ್ಛಿಕ, ವಚನ ಸಾಹಿತ್ಯವು ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನ. ಇದನ್ನು ಕಲಿಸುವುದನ್ನು ಬಿಟ್ಟು ವೇದಾಗಮ ಪುರಾಣ ರುದ್ರಾಭಿಷೇಕ ಮುಂತಾಗಿ ಕಲಿಸುವುದನ್ನು ಶಿವಯೋಗ ಮಂದಿರದಲ್ಲಿ ಮಾಡಿದ್ದರಿಂದಲೇ ಲಿಂಗಾಯತರು ಗೊಂದಲಕ್ಕೊಳಗಾಗಿ ದಾರಿ ತಪ್ಪಿದ್ದು" ಎಂದು ನೇರವಾಗಿ ಮಾತೆಯವರು ಆರೋಪಿಸಿದ್ದಾರೆ. ಶ್ರೀ ಹಾನಗಲ್ ಸ್ವಾಮಿಗಳು ವೈಯಕ್ತಿಕವಾಗಿ ಹೇಗಿದ್ದರು, ಏನು ಸಾಧನೆ ಮಾಡಿದರು ಎಂಬ ಬಗ್ಗೆ ನಾವು ಪ್ರಸ್ತಾಪಿಸುತ್ತಿಲ್ಲ.

ಪುರೋಹಿತಶಾಹಿಯನ್ನು ಶಿವಯೋಗ ಮಂದಿರದ ಮೂಲಕ ಸಮಾಜದೊಳಗೆ ತೂರಿಸಿದ್ದರಿಂದಲೇ ನಮಗೆ ಆಕ್ರೋಶ ಉಂಟಾಗಿರುವುದು. ಇಷ್ಟಲಿಂಗ ಧಾರಣೆಯೇ ಪ್ರಮುಖ ಆಚರಣೆಯಾಗಿರುವ ಲಿಂಗಾಯತ ಧರ್ಮ-ಸಮಾಜಗಳಿಗೆ ಏನೇನೂ ಸಂಬಂಧಿಸಿರದ ವೀರಶೈವ ಪದವನ್ನು ತಂದು, ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಸ್ಥಾಪಿಸಿ ಲಿಂಗಾಯತರಲ್ಲಿ

ಗೊಂದಲ ಹುಟ್ಟುಹಾಕಿದವರೇ ಲಿಂ॥ ಹಾನಗಲ್ ಕುಮಾರ ಸ್ವಾಮಿಗಳು. ಒಗ್ಗಟ್ಟಿನಿಂದ ತತ್ತ್ವಕ್ಕೆ ಬದ್ಧರಾಗಿ ಬಸವಣ್ಣನವರೇ ತಮ್ಮ ಧರ್ಮಗುರು ಎಂದು ನಿಷ್ಠೆಯಿಂದ ಬಾಳುತ್ತಿದ್ದ ಲಿಂಗಾಯತ ಸಮಾಜವು ಗೊಂದಲಕ್ಕೆ ಒಳಗಾಗಲು ಮತ್ತು ಒಡೆಯಲು ಶಿವಯೋಗ ಮಂದಿರ ಮತ್ತು ವೀರಶೈವ ಮಹಾಸಭೆಯೇ ಕಾರಣ. ಎಂದೆಂದೂ ಸರಿ ಪಡಿಸಲಾರದ ಪ್ರಮಾದವನ್ನು ಮಾಡಿದ ಹಾನಗಲ್ ಕುಮಾರ ಸ್ವಾಮಿಗಳನ್ನು ಜಾಗೃತಗೊಂಡ ಲಿಂಗಾಯತ ಸಮಾಜವು ಎಂದೂ ಕ್ಷಮಿಸಲಾರದು'' ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ'' ಎಂದೂ ಮಾತೆ ಮಹಾದೇವಿ ಕಟುವಾಗಿ ತಮ್ಮ ಹೇಳಿಕೆಯಲ್ಲಿ ಬರೆದಿದ್ದಾರೆ.

ಮೂರು ಸಾವಿರ ಶ್ರೀಗಳು, ''ನಮ್ಮನ್ನು ಟೀಕೆ ಮಾಡುವುದೇ ಅವರ ಗುರಿ'' ಎಂದು ತಾವೇ ಹೇಳಿಕೊಂಡಿದ್ದಾರೆ. ತಾತ್ತ್ವಿಕ ಮತ್ತು ಸಾಮಾಜಿಕ ಚರ್ಚೆಯನ್ನು ಮಾಡುವಾಗ ಅವರು ವಸ್ತು ನಿಷ್ಠವಾಗಿ ಉತ್ತರಿಸಬೇಕೇ ವಿನಾ ವೈಯಕ್ತಿಕವಾಗಿ ನಿಂದಿಸಬಾರದು. ಹಾಗೆ ಮಾಡಿದರೆ ಅದು ಅವರ ಅಪಕ್ವತೆಗೆ ಕನ್ನಡಿ ಹಿಡಿಯುತ್ತದೆ. ತಾವು ಹಾನಗಲ್ ಮಠದ ಅಧಿಕಾರಿಯಾಗಿರುವುದರಿಂದ ಶ್ರೀ ಕುಮಾರ ಸ್ವಾಮಿಗಳನ್ನು ಗೌರವಿಸುವುದು ಅವರ ಕರ್ತವ್ಯ ಎಂದು ಭಾವಿಸಿರಬಹುದು. ಅಂಥ ಮಮಕಾರವನ್ನು ಬದಿಗಿಟ್ಟು ಪ್ರಾಮಾಣಿಕವಾಗಿ ಚಿಂತನೆ ಮಾಡಲಿ, ಆಗ ಅವರಿಗೆ ಅರ್ಥವಾಗುತ್ತದೆ ಶಿವಯೋಗ ಮಂದಿರ ಮತ್ತು ವೀರಶೈವ ಮಹಾಸಭೆ ಲಿಂಗಾಯತ ಸಮಾಜಕ್ಕೆ ಎರಗಿದ ಎರಡು ಶಾಪಗಳೆಂದು'' ಎಂಬುದಾಗಿ ಜಗದ್ಗುರು ಮಾತೆ ಮಹಾದೇವಿಯವರು ನುಡಿದಿದ್ದಾರೆ.

★★★

ಉಳವಿ ಸಂದರ್ಶನ

- ವರದಿ : ಕರಿಬಸಪ್ಪ ಕೋರಿಶೆಟ್ಟರು, ನ್ಯಾಯವಾದಿ

'' ಪರಮ ಪೂಜ್ಯ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಲಿಂಗೈಕ್ಯರಾಗಿರುವ ಉಳವಿ ಕ್ಷೇತ್ರವು ಐತಿಹಾಸಿಕವಾಗಿ ಅತ್ಯಂತ ಮಹತ್ವದ ತಾಣವಾಗಿದ್ದು ಜಂಗಮ ಕ್ಷೇತ್ರವಾಗಿದೆ. ಇದರ ಅಭಿವೃದ್ಧಿಯ ದಿಶೆಯಲ್ಲಿ ಶ್ರೀ ಚನ್ನಬಸವೇಶ್ವರ ದೇವಸ್ಥಾನ ಟ್ರಸ್ಟಕಮಿಟಿಯವರು ಹಮ್ಮಿಕೊಂಡಿರುವ ಕಾರ್ಯಗಳು ನಿಜಕ್ಕೂ ಅಭಿನಂದನೀಯವಾದವುಗಳು.'' ಎಂದು ಕೂಡಲ ಸಂಗಮದ ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷೆ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ನುಡಿದರು.

ಅವರು ಇತ್ತೀಚೆಗೆ 200ಕ್ಕೂ ಅಧಿಕ ಭಕ್ತ ಸಮೂಹದೊಂದಿಗೆ ಉಳವಿ ಕ್ಷೇತ್ರಕ್ಕೆ ಸಂದರ್ಶನ ನೀಡಿ ಶ್ರೀ ಚನ್ನಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದ್ದ ಸಾಮೂಹಿಕ ಇಷ್ಟಲಿಂಗ ಪೂಜಾ ಹಾಗೂ ಅನುಭಾವ ಗೋಷ್ಠಿಯ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

''ವಚನ ಸಾಹಿತ್ಯವನ್ನು ಸಂರಕ್ಷಿಸುವುದರ ಮೂಲಕ ಬಸವ ಧರ್ಮವನ್ನು ಉಳಿಸಬೇಕೆಂಬ ದೃಢ ಸಂಕಲ್ಪದೊಂದಿಗೆ ಮಳೆ, ಗಾಳಿ, ಚಳಿ, ಘೋರ ಅರಣ್ಯ ಇವಾವುಗಳನ್ನು ಲೆಕ್ಕಿಸದೇ ಶರಣ ಸಮೂಹದೊಂದಿಗೆ ಬಂದ ಶರಣರ ತ್ಯಾಗ ನಿಜಕ್ಕೂ ಅದ್ಭುತ. ಇದನ್ನು ಸಮಾಜ ಅರ್ಥ ಮಾಡಿಕೊಳ್ಳಬೇಕು'' ಎಂದು ಮಾತೆ ಮಹಾದೇವಿ ನುಡಿದರು. ಚನ್ನಬಸವೇಶ್ವರರು ''ನಾನಿಲ್ಲಿಯೇ ಉಳಿಯುವೆ'' ಎಂದು ಉಳಿದ ಕಾರಣ ಈ ಕ್ಷೇತ್ರಕ್ಕೆ 'ಉಳಿವೆ' ಎಂದು ಹೆಸರಾಗಿದೆ ಅದಕ್ಕಿಂತ ಪೂರ್ವದಲ್ಲಿ

ಇಲ್ಲಿ ಯಾವುದೇ ಊರು ಇರಲಿಲ್ಲ ಎಂದು ಸ್ಪಷ್ಟ ಪಡಿಸಿದರು.

ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಧಾರವಾಡದ ಯುವ ನ್ಯಾಯವಾದಿ ಕೆ.ಎಸ್. ಕೋರಿಶೆಟ್ಟರ ಅವರು ಚಿನ್ಮಯಜ್ಞಾನಿ ಚೆನ್ನಬಸವೇಶ್ವರರು 800 ವರ್ಷಗಳ ಹಿಂದೆ ವಚನ ಸಾಹಿತ್ಯ ಸಂರಕ್ಷಿಸಬೇಕೆಂಬ ಉದ್ದೇಶದಿಂದ ಇಂಥ ದುರ್ಗಮ ಅರಣ್ಯಕ್ಕೆ ಬಂದರು. ಈಗಲೂ ಇಷ್ಟೊಂದು ಭಯಾನಕವಾಗಿರುವ ಅರಣ್ಯ ಅಂದು ಹೇಗಿತ್ತೆಂದು ಒಂದು ಕ್ಷಣ ಕಲ್ಪಿಸಿಕೊಂಡರೆ ಮೈ ರೋಮಾಂಚನವಾಗುತ್ತದೆ. ಲಿಂಗಾಯತ ಧರ್ಮದ ಸಂವಿಧಾನವಾದ ವಚನ ವಾಙ್ಮಯ ಉಳಿದರೆ ಸಮಾಜ ಬೆಳೆಯುವುದೆಂಬ ಕಲ್ಪನೆ ಶರಣರಿಗಿದ್ದುದರಿಂದಲೇ ಅದರ ರಕ್ಷಣೆಗೆ ಅವರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದರು. ಅರಣ್ಯದಲ್ಲಿ, ಗುಹೆಗಳಲ್ಲಿ ರಕ್ಷಣೆ ಪಡೆದು ಅಲ್ಲಿಯೇ ಆಧ್ಯಾತ್ಮಿಕ ಕಾರ್ಯ ಮುಂದುವರೆಸಿದರು.

ಇಂಥ ಉಳವಿಕ್ಷೇತ್ರ ಅಂತಾರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಬೇಕು. ಇಲ್ಲಿನ ಆಕಳಗವಿ, ಮಹಾಮನೆ, ಅಕ್ಕನಾಗಮ್ಮನ ಗವಿ, ವಿಭೂತಿ ಕಣಜ, ರುದ್ರಾಕ್ಷಿ ಮಂಟಪ ಇವೆಲ್ಲ ಅಜಂತಾ ಎಲ್ಲೋರಾ ಗುಹೆಗಳ ಮಾದರಿಯಲ್ಲಿ ಅಭಿವೃದ್ಧಿಯಾಗಬೇಕಾಗಿದೆ '' ಎಂದು ನುಡಿದರು. ಸಮಾರಂಭದಲ್ಲಿ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಜಗದ್ಗುರು ಮಾತೆ ಗಂಗಾದೇವಿ ಕೂಡಲ ಸಂಗಮದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ವೇದಿಕೆಯಲ್ಲಿದ್ದರು. ದೇವಸ್ಥಾನದ ಟ್ರಸ್ಟ್ ಕಮಿಟಿ ಅಧ್ಯಕ್ಷ ಬಸವರಾಜ ಕಿತ್ತೂರ ಮಾತನಾಡಿ ಪೂಜ್ಯ ಮಾತಾಜಿಯವರು ದೇವಸ್ಥಾನ ಸಮಿತಿಗೆ ನೀಡಿದ ಸಲಹೆಗಳನ್ನು ಗೌರವದಿಂದ ಸ್ವಾಗತಿಸುವುದಲ್ಲದೇ ಅವುಗಳನ್ನು ಅನುಷ್ಠಾನಗೊಳಿಸುವುದಾಗಿ ನುಡಿದರು. ದೇವಸ್ಥಾನದ ವ್ಯವಸ್ಥಾಪಕ ರುದ್ರಯ್ಯ ಹೊಸಮಠ, ಉಪಸ್ಥಿತರಿದ್ದರು. ಟ್ರಸ್ಟ್ ಕಮಿಟಿ ಪರವಾಗಿ ಬಸವರಾಜ ಕಿತ್ತೂರ ಪೂಜ್ಯ ಮಾತಾಜಿಯವರನ್ನು ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ವೀರಣ್ಣ ಕೊರ್ಲಹಳ್ಳಿ, ಧಾರವಾಡ ರಾಷ್ಟ್ರೀಯ ಬಸವ ದಳದ ಎಂ.ವಿ. ಕುಸುಗಲ್, ಗಿರಿಜಾ ಮೈಸೂರು, ಭದ್ರಾವತಿಯ ಗಂಗಾಂಬಿಕಾ ಬಸವರಾಜ್, ಆಂಧ್ರಪ್ರದೇಶದ ಕೊಂಡಾ ಬಸವರಾಜ್ ಮಾಲಾರ್ಪಣೆ ಮಾಡಿದರು.

★★★

ಪ್ರವಾಸ ಕಥನ ....

ವನ ಸಿರಿಯ ಮಡಿಲ ಜಂಗಮ ಕ್ಷೇತ್ರ ಚನ್ನಬಸವಣ್ಣನವರ ಉಳವಿ

- ಪೂಜ್ಯ ಮಾತಾಜಿ

ಉತ್ತರ ಕನ್ನಡ ಜಿಲ್ಲೆ ಪ್ರಕೃತಿಯ ಸಂಪತ್ತನ್ನು ಬಂಧಿಸಿಟ್ಟಿರುವ ರಮಣೀಯ ಪ್ರದೇಶ. ಈ ಜಿಲ್ಲೆಯ ಜೊಯಡಾ ತಾಲ್ಲೋಕಿನ ಸುಂದರ ಜಂಗಮ ಕ್ಷೇತ್ರ ಉಳವಿ. ಐತಿಹಾಸಿಕ ದೃಷ್ಟಿಯಿಂದ ಇದು ಅತ್ಯಂತ ಮಹತ್ವಪೂರ್ಣ ಸ್ಥಾನ. ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ 12ನೆಯ ಶತಮಾನದಲ್ಲಿ ರಚನೆಯಾದ ವಚನ ಸಾಹಿತ್ಯವು ಜಾತಿವಾದಿಗಳ ದ್ವೇಷದ ಬೆಂಕಿಯಲ್ಲಿ ದಹನವಾಗುವುದನ್ನು ತಪ್ಪಿಸಿ ಜಗ ಬದುಕಿಸುವ, ಜನ ಬದುಕಿಸುವ ಧ್ಯೇಯದೊಡನೆ ಸೃಷ್ಟಿಯಾದ ಅಮೂಲ್ಯ ವಾಙ್ಮಯವನ್ನು ರಕ್ಷಿಸಲು ಶರಣರು ಪಣ ತೊಟ್ಟರು. ತಮ್ಮ ತನುಮನಪ್ರಾಣಗಳನ್ನು ತೊರೆದಾದರೂ ವಚನ ವಾಙ್ಮಯವನ್ನು ಉಳಿಸಲು ಸಹ್ಯಾದ್ರಿಯತ್ತ ಸಾಗಿದರು. ಅಂಥ

ಸಂದರ್ಭದಲ್ಲಿ ಶರಣರಿಗೆ ಮತ್ತು ವಚನ ವಾಙ್ಮಯಕ್ಕೆ ಆಶ್ರಯ ನೀಡಿದುದು ಪಶ್ಚಿಮಘಟ್ಟದ ದಟ್ಟಾರಣ್ಯದ ಗರ್ಭದಲ್ಲಿ ಹುದುಗಿದ್ದ ಪ್ರಶಾಂತ ಬಯಲು. ಗಟ್ಟಿಯಾದ ತೆಂಗಿನ ಚಿಪ್ಪಿನ ಒಳಗೆ ಮೃದುವಾದ ತಿರುಳು, ಅದರೊಳಗೆ ಸಿಹಿಯಾದ ನೀರು ಇರುವಂತೆ, ದುರ್ಗಮವಾದ ಮುಗಿಲನ್ನು ಚುಂಬಿಸುವ ಬೆಟ್ಟಗುಡ್ಡಗಳ ಸಾಲು, ಎತ್ತರಕ್ಕೆ ಬೆಳೆದ ವೃಕ್ಷರಾಶಿ, ಮಧ್ಯೆ ಮಧ್ಯೆ ಜುಳುಜುಳು ನಾದದೊಡನೆ ಹರಿಯುವ ಝರಿಗಳು. ಹೀಗೆ ಕಣ್ಣಿಗೆ ಹಬ್ಬವನ್ನು ಉಂಟುಮಾಡಿ, ಮನಕ್ಕೆ ಶಾಂತಿಯ ತಂಪನ್ನೆರೆಯುವಂತೆ ಇರುವ ಪರಿಸರದಲ್ಲಿ ನೆಲೆಸಿದೆ ಚನ್ನಬಸವಣ್ಣನವರ ಚೇತನ.

ಧಾರವಾಡದ ಉಳವಿ ರಸ್ತೆಯಲ್ಲಿ ರೇಲ್ವೇಗೇಟ್ ಬಳಿ ಇರುವ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಟೋಬರ್ 3 ರಿಂದ 15ರವರೆಗೆ ತರಬೇತಿ ಕಮ್ಮಟ ನಡೆಯಿತು.

ಕಡೆಯಲ್ಲಿ 16 ಮತ್ತು 17ರಂದು ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದಲ್ಲಿ ಲಿಂಗಾಯತ ಧರ್ಮಜಾಗೃತಿ ಸಮ್ಮೇಳನವೂ ಯಶಸ್ವಿಯಾಗಿ ಜರುಗಿತು. ಸಾಮಾನ್ಯವಾಗಿ ಬಸವ ತತ್ತ್ವ ತರಬೇತಿ ಕಮ್ಮಟದ ನಂತರ ಹತ್ತಿರದಲ್ಲಿ ಇರುವ ಶರಣರ ಸ್ಥಾನಗಳನ್ನು ಸಂದರ್ಶಿಸುವ ನಮ್ಮ ಪರಿಪಾಠದಂತೆ ದಿ. 18 ರಂದು ಸುಕ್ಷೇತ್ರ ಉಳವಿಯ ಸಂದರ್ಶನವನ್ನು ಎರಡು ನೂರು ಜನ ಶಿಬಿರಾರ್ಥಿಗಳೊಡನೆ ಕೈಗೊಂಡೆವು. ಮಲೆನಾಡಿನ ಗಡಿಯಂತಿರುವ ಧಾರವಾಡ ದಾಟಿ ಸಾಗುತ್ತಿರುವಂತೆಯೇ ಪ್ರಕೃತಿಯ ಸೌಂದರ್ಯ ಗರಿ ಬಿಚ್ಚತೊಡಗುತ್ತದೆ. ದಾಂಡೇಲಿ ದಾಟಿ ಮುಂದೆ ಸಾಗುತ್ತ ಹೋದಂತೆ ಕಾನನವು ದಟ್ಟವಾಗುತ್ತದೆ. ನಿಸರ್ಗವು ಸಾಕಿ ಬೆಳೆಸುತ್ತಿರುವ ಅರಣ್ಯದ ಹೆಮ್ಮರಗಳ ಚೆಲುವಿನ ಜೊತೆಗೆ ಗುಡ್ಡ-ಬೆಟ್ಟಗಳ ನಡುವಿನ ಬಯಲಿನಲ್ಲಿ ಒಯ್ಯಾರದಿಂದ ಸುಳಿಗಾಳಿಗೆ ಬಳುಕುವ, ಅಲೆ ಅಲೆಯಾಗಿ ಬಾಗುವ ಬತ್ತದ ಗದ್ದೆಗಳ ಮಾನವ ನಿರ್ಮಿತ ಸೌಂದರ್ಯವೂ ಸೇರಿ ನಾವು ಯಾವುದೋ ಕಿನ್ನರಲೋಕವನ್ನು ಪ್ರವೇಶಿಸುವ ಅನುಭವವಾಗುತ್ತದೆ. ಶುಭ್ರ ನೀಲಾಕಾಶ, ಅದರಲ್ಲಿ ಹಂಸೆಯಂತೆ ವಿಹರಿಸುವ ಬಿಳಿಯ ಮೋಡಗಳು ಒಂದಕ್ಕಿಂತ ಒಂದು ಸೊಗಸು. ಅರಣ್ಯ ಇಲಾಖೆಯವರು ವೀಕ್ಷಣಾ ಗೋಪುರಗಳನ್ನು ಅಲ್ಲಲ್ಲೇ ನಿರ್ಮಿಸಿದ್ದಾರೆ. ಉಳವಿಗೆ ಹೋಗುವ ದಾರಿಯಲ್ಲಿ ಸಿಗುವ ಅಂಥ ಒಂದು ವೀಕ್ಷಣಾ ಗೋಪುರದ ಮೇಲೆ ನಿಂತಾಗ ಕಾಣುವ ದೃಶ್ಯ ಅಪೂರ್ವ. ಸಾಲು ಸಾಲು ಬೆಟ್ಟಗುಡ್ಡಗಳು, ಆಳವಾದ ಕಣಿವೆಗಳು ಹಸಿರಿನ ಸಮುದ್ರವನ್ನು ಕಣ್ಣಿನ ಮುಂದಿಡುತ್ತವೆ.

ಅಂಥಾ ದುರ್ಗಮ ಕಾನನದ ಕೋಟೆಯ ಮಧ್ಯೆ ಇರುವ, ಇದ್ದುದರಲ್ಲೇ ವಿಶಾಲವಾಗಿರುವ ಬಯಲನ್ನು ಕಂಡೇ ಹನ್ನೆರಡು ಸಾವಿರ ಶರಣರೊಡನೆ ಬಂದ ಚನ್ನಬಸವಣ್ಣನವರು, ''ನಾನು ಇಲ್ಲಿ ಉಳಿವೆ'' ಎಂದುದೇ ಬಿಡಾರ (ಉಳಿವೆ, camp) ಆಯಿತು. ಏಕೆಂದರೆ ಇಂದಿನ ಚನ್ನಬಸವೇಶ್ವರ ಶರಣಾಲಯ ಅದರ ಸಮೀಪ, ಸುತ್ತಮುತ್ತ ಇರುವ ಬಯಲ ಪ್ರದೇಶ ಬಿಟ್ಟರೆ ಅಂಥ ಸಮತಟ್ಟಾದ ಜಾಗ ಹತ್ತಿರ, ಸುತ್ತಮುತ್ತ ಎಲ್ಲೂ ಇಲ್ಲ. ಹೀಗಾಗಿ ಚನ್ನಬಸವಣ್ಣನವರು, ಅವರೊಡನೆ ಬಂದ ಶರಣ ಸಮೂಹ ಪ್ರಸ್ತುತ ಜಾಗವನ್ನು ತಮ್ಮ ಉಳಿಯುವಿಕೆಗಾಗಿ ಆಯ್ಕೆ ಮಾಡಿಕೊಂಡಿರುವುದು ಅತ್ಯಂತ ಸಹಜ. ವಾಹನದಿಂದ ಇಳಿಯುತ್ತಲೇ ದ್ವಾರಮಂಟಪ ಮನಸ್ಸನ್ನು ಮುದಗೊಳಿಸುತ್ತದೆ. ಅದನ್ನು ದಾಟುತ್ತಲೇ ಚನ್ನಬಸವ ಶರಣಾಲಯದ ಗೋಪುರ ಬಸವ ಧರ್ಮದ ಶರಣ ಸಂಪತ್ತನ್ನು

ತೆರೆದಿಡುತ್ತದೆ. ವಿವಿಧ ಕಾಯಕಗಳ ಶರಣರ ಮೂರ್ತಿಗಳನ್ನು ಗೋಪುರ ಹೊಂದಿದೆ. ದೇವಾಲಯದ ಪರಿಸರವನ್ನು ಸ್ವಚ್ಛವಾಗಿ ಅಚ್ಚುಕಟ್ಟಾಗಿ ಇಡಲಾಗಿದೆ. ಮುಂದೆ ಒಳಗೆ ಪ್ರವೇಶಿಸಿದಾಗ ಅಮೃತ ಶಿಲೆಯ ನೆಲ ಹಾಸನ್ನು ಹೊಂದಿದ ಚನ್ನಬಸವಾಲಯ (ಗರ್ಭಗುಡಿ), ಮುಂದಿನ ಜ್ಞಾನ ಮಂಟಪ ಮನಸ್ಸಿಗೆ ತಂಪೆರೆಯುತ್ತವೆ.

ಚನ್ನಬಸವೇಶ್ವರರ ಗದ್ದುಗೆಯ ಮೇಲೆ ಎರಡು ಮೂರ್ತಿ, ಎರಡು ನಂದಿ ಮುಖಗಳಿವೆ. ಚನ್ನಬಸವಣ್ಣನವರ ಸಮಾಧಿಯ ಹಿಂದೆ ಕಾವಿ ವಸ್ತ್ರಧಾರಿಯಾದ ಚನ್ನಬಸವಣ್ಣನವರ ಅಮೃತ ಶಿಲಾ ಮೂರ್ತಿಯನ್ನು ಗಾಜಿನ ಪೆಟ್ಟಿಗೆಯಲ್ಲಿ ಇಡಲಾಗಿದೆ. ಅದನ್ನು ನೋಡಿ ಮನಸ್ಸು ಸಹರ್ಷದಿಂದ ಪುಳಕಿತವಾಯಿತು. ಬಹಳ ಹಿಂದೆ ಒಮ್ಮೆ ಹೋದಾಗ ಬಸವಣ್ಣ, ಚನ್ನಬಸವಣ್ಣರಂತಹ ಕ್ರಾಂತಿಪುರುಷರನ್ನು ಇಲ್ಲಿಯೂ ಸೇರಿ ಎಲ್ಲ ಗುಡಿಗಳಲ್ಲಿ ನಂದಿಯನ್ನಾಗಿ ಮಾಡಿ ಜಡಗಟ್ಟಿಸಿರುವುದನ್ನು ಕಂಡು ಬಹಳ ನೋವಾಗಿತ್ತು. ನಾವು ಹೋದಾಗಲೇ ದರ್ಶನಕ್ಕೆ ಬಂದ ಶ್ರೀ ಮಠದ ಎಂಬ ಸದ್ಭಕ್ತರಿಗೆ, ''ಚನ್ನಬಸವಣ್ಣನವರ ಮಾನವಾಕಾರದ ಮೂರ್ತಿಯನ್ನು ಇಟ್ಟರೆ ಜನರಿಗೆ ಅವರು ನಂದಿಯಲ್ಲ ಓರ್ವ ಕ್ರಾಂತಿಕಾರಿ ಮಹಾತ್ಮ, ಯೋಗಿ, ವಿರಕ್ತ ಎಂಬ ತಿಳುವಳಿಕೆ ಉಂಟಾಗುವುದು.'' ಎಂದು ಸೂಚಿಸಿದ್ದೆವು. ಇಂದು ಚನ್ನಬಸವಣ್ಣನವರ ದಿವ್ಯ ಮೂರ್ತಿಯನ್ನು ಕಂಡಾಗ ಸಂತೋಷವೆನಿಸಿತು. ಶ್ರದ್ಧೆಯಿಂದ ಪೂಜೆ ಸಲ್ಲಿಸಿ, ಆರತಿ ಮಾಡಿದೆವು. ಚನ್ನಬಸವಣ್ಣನವರ ಸಮಾಧಿಯ ಜೊತೆಗೆ ಇರುವ ಮಾನವಾಕಾರದ ಬೆಳ್ಳಿಯ ಮುಖವಾಡಗಳು ಅಡಿಕೇಶ್ವರ, ಮಡಿಕೇಶ್ವರ ಮತ್ತು ಬ್ಯಾಳಿ ಬಸವೇಶ್ವರ ಎಂಬ ಮೂವರು ಪರಮಾಪ್ತ ಶರಣರನ್ನು ಸಂಕೇತಿಸುತ್ತವೆ. ಆ ಮೂವರು ಚನ್ನಬಸವಣ್ಣನವರ ಆತ್ಮೀಯ ಸೇವಕ ಶರಣರು.

ಚನ್ನಬಸವಾಲಯದ ಸುತ್ತಲೂ ಯಾತ್ರಿಕರು ಉಳಿದುಕೊಳ್ಳಲು ಕೊಠಡಿಗಳು, ಕುಟೀರಗಳು ಇವೆ. ಚೈತನ್ಯ ಎಂಬ ಆಧುನಿಕ ಅನುಕೂಲತೆಯುಳ್ಳ ಅತಿಥಿ ಗೃಹವನ್ನೂ ದೇವಸ್ಥಾನ ಸಮಿತಿಯವರು ನಿರ್ಮಿಸಿದ್ದಾರೆ. ಉಳವಿ ಕ್ಷೇತ್ರದ ಮಹಿಮೆಯನ್ನು ಮತ್ತಷ್ಟು ವಿಸ್ತರಿಸಲು ಸಹಾಯಕವಾಗಿದೆ. ದೇವಸ್ಥಾನದ ಟ್ರಸ್ಟ್ ಕಮಿಟಿಯವರು ವ್ಯವಸ್ಥೆ ಮಾಡಿರುವ ದಾಸೋಹ. ಅಚ್ಚುಕಟ್ಟಾದ ಪ್ರಸಾದ ದಾಸೋಹ ಬೆಳಿಗ್ಗೆ ಮತ್ತು ರಾತ್ರಿ ಲಭ್ಯವಾಗುತ್ತದೆ. ದೇವಾಲಯದ ಮಗ್ಗುಲಲ್ಲಿ ಒಂದು ಹೊನ್ನರಳಿಯ ಮರವಿದೆ. ಅದಕ್ಕೆ ಕಟ್ಟೆ ಕಟ್ಟಿ ಸಂರಕ್ಷಿಸಿಕೊಂಡು ಬರಲಾಗಿದೆ. ಒಂದು ಪರಂಪರಾಗತ ಹೇಳಿಕೆ ''ಶರಣರು ಹೊನ್ನರಳಿಯ ಮರಕ್ಕೆ ಉಯ್ಯಾಲೆ ಕಟ್ಟಿಕೊಂಡು ತೂಗಿ ತೂಗಿ ಕೈಲಾಸಕ್ಕೆ ಹೋದರು'' ಎಂಬುದಾಗಿ ಪ್ರಚಾರದಲ್ಲಿದೆ. ಈ ಮಾತುಗಳ ಬಗ್ಗೆ ಮನನ ಮಾಡಿದಾಗ ನಮ್ಮ ಹೃದಯವನ್ನು ಹಿಂಡಿದಂತಾಗುತ್ತದೆ, ಕರುಳು ಮಿಡಿಯುತ್ತದೆ, ಕಣ್ಣುಗಳು ನೀರಿನ ಕೊಳಗಳಾಗುತ್ತವೆ. ದಟ್ಟ ಕಾನನ, ಎತ್ತರವಾಗಿ ಭೂಮಿಯ ಮೇಲೆ ಬೆಳೆಯುವ ಹುಲ್ಲು; ನೆಲದ ಮೇಲೆ ಹರಿಯುವ ಜಿಗಳೆಗಳ ಕಾಟ, ದಪ್ಪ ಸೊಳ್ಳೆಗಳು, ನೊಣಗಳು, ಹಲವಾರು ಬಗೆಯ ಕ್ರಿಮಿಕೀಟಗಳು, ಧಾರಾಕಾರವಾಗಿ ಸುರಿಯುವ ಮಳೆ - ಇಂಥ ಪರಿಸರದಿಂದಾಗಿ ಶರಣರು ಗಿಡಗಳ ಕೊಂಬೆಗಳಿಗೆ ತೊಟ್ಟಿಲು ಕಟ್ಟಿಕೊಂಡು ಮಲಗುತ್ತಿದ್ದರೆಂದು ಊಹಿಸಬಹುದು.

ಅದರ ಪರಿಣಾಮವಾಗಿಯೇ ಅನೇಕರು ಹೆಚ್ಚುಕಾಲ ಅಲ್ಲಿ ಇರಲಾಗದೆ ಚದುರಿಹೋದರು.

ಅನೇಕರು ಆ ವಿಷಮ ವಾತಾವರಣದಿಂದ ರೋಗರುಜಿನಗಳಿಗೆ ಈಡಾಗಿ ದೇಹಾವಸಾನ ಹೊಂದಿರಲೂಬಹುದು.

ಸುಪ್ರಭಾತದಲ್ಲಿ ಎದ್ದು ಶಿಬಿರಾರ್ಥಿಗಳು ಸ್ನಾನಪೂರೈಸಿ ಬಂದು ದೇವಾಲಯದ ಪ್ರಾಂಗಣದಲ್ಲಿ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿ, ಮಂತ್ರ ಪಠಣ ಮಾಡಿದಾಗ ಆನಂದದ ಹೊನಲು ಹರಿಯಿತು. ಚನ್ನಬಸವಾಲಯದ ಸಂದರ್ಶನಕ್ಕೆಂದು ನಾವು ಬಂದಾಗ ಉಳವಿ ಚನ್ನಬಸವೇಶ್ವರ ದೇವಾಲಯ ಟ್ರಸ್ಟ್ ಕಮಿಟಿ ಅಧ್ಯಕ್ಷರಾದ ಶರಣ ಬಸವರಾಜಪ್ಪ ಕಿತ್ತೂರು ಮತ್ತು ವ್ಯವಸ್ಥಾಪಕರಾದ ರುದ್ರಯ್ಯ ಹೊಸಮಠ ಅವರು ಸ್ವಾಗತಿಸಿದರು. ಅನುಭಾವ ಗೋಷ್ಠಿಯನ್ನು ನಡೆಸಿ ಶಿಬಿರಾರ್ಥಿಗಳಿಗೆ ಮತ್ತು ದೇವಾಲಯ ಸಂದರ್ಶನಕ್ಕೆ ಬಂದ ಪ್ರವಾಸಿಕರಿಗೆ ಸ್ಥಳದ ಮಹತ್ವ ಚನ್ನಬಸವಣ್ಣ, ಅಕ್ಕನಾಗಮ್ಮ, ಮಡಿವಾಳ ಮಾಚಿದೇವರ ತ್ಯಾಗ, ಬಲಿದಾನ ಕುರಿತು ವಿವರಿಸಿದೆ. ಆದಿ ಶರಣರ ತ್ಯಾಗ ಬಿಂಬಿಸುವ ಒಂದು ನೃತ್ಯ ರೂಪಕವನ್ನು ಧಾರವಾಡದ ಪ್ರತಿಭಾ ಗರಗ್ ಮತ್ತು ಮಮತಾ ಮುಮ್ಮೀಗಟ್ಟ ಅಭಿನಯಿಸಿದಾಗ ಕಲ್ಯಾಣಕ್ರಾಂತಿ ಬಸವಣ್ಣನವರ ಗಡಿಪಾರು, ಹರಳಯ್ಯ-ಮಧುವರಸರ ಎಳೆಹೂಟೆ, ವಚನ ಸಾಹಿತ್ಯ ರಕ್ಷಣೆಗಾಗಿ ನಡೆದ ಹೋರಾಟ ಕಣ್ಣ ಮುಂದೆ ಕಟ್ಟಿದಂತಾಗಿ ಪ್ರೇಕ್ಷಕರ ಕಣ್ಣಲ್ಲಿ ನೀರಿನ ಹನಿಗಳು ಧಾರಾಕಾರವಾಗಿ ಸುರಿಯುತ್ತಿದ್ದವು.

ಸಂದರ್ಶನೀಯ ಸ್ಥಳಗಳು

ಉಳವಿ ಕ್ಷೇತ್ರದ ಮಹತ್ವವಿರುವುದು ಕೇವಲ ನಿಸರ್ಗದ ಶ್ರೀಮಂತಿಕೆಯನ್ನು ಹೊಂದಿರುವುದರಲ್ಲಿ ಮಾತ್ರವಲ್ಲ, ಬಸವ ಕಲ್ಯಾಣದಲ್ಲಿ ನಡೆದ ಹಲವಾರು ಕಾರ್ಯಕ್ರಮಗಳನ್ನು ಅಷ್ಟು ಪ್ರಮಾಣದಲ್ಲಿ ಅಲ್ಲದಿದ್ದರೂ ಸ್ವಲ್ಪ ಪ್ರಮಾಣದಲ್ಲಿಯಾದರೂ ಮುಂದುವರಿಸಲು ಕಾರ್ಯಕ್ಷೇತ್ರವಾದುದರಲ್ಲಿದೆ. ಚನ್ನಬಸವಣ್ಣನವರ ಗದ್ದುಗೆಯ ಸಂದರ್ಶನದ ನಂತರ ಆಕಳ ಗವಿಯ ಸಂದರ್ಶನವನ್ನು ಗುರಿಯಾಗಿಟ್ಟುಕೊಂಡು ಸಾಗೋಣ. ಮೊದಲೆಲ್ಲ ಕಾಡುದಾರಿ, ಕಾಲು ದಾರಿಗಳನ್ನು ಆಶ್ರಯಿಸಿ ಸಾಗಬೇಕಿತ್ತು. ಇತ್ತೀಚೆಗೆ ಆಗಿರುವ ಜಲ್ಲಿ ಕಲ್ಲಿನ ರಸ್ತೆಯಲ್ಲಿ ಒಂದೂವರೆ ಕಿಲೋಮೀಟರ್ ವಾಹನದಲ್ಲಿ ಸಾಗಿದರೆ ಸಮಯ ಮತ್ತು ದೈಹಿಕ ಶಕ್ತಿಯನ್ನು ಉಳಿಸಬಹುದು. ಇನ್ನು ವಾಹನ ಇಳಿಸುವುದು ಅಪಾಯ ಎನಿಸುವಲ್ಲಿಗೆ ಬಂದು ನಿಂತಾಗ ಒಂದು ವೀಕ್ಷಣಾಗೋಪುರ ಸಿಗುತ್ತದೆ. ಅಲ್ಲಿ ನಿಂತು ನೇರಕ್ಕೆ ಕಣ್ಣು ಹಾಯಿಸಿದರೆ ಮಲಗಿದ ಆಕಳೊಂದು ಅಲ್ಲಲ್ಲ ಆಕಳಿನಂತಹ ಶಿಲಾಕಾರ ಕಾಣಬರುತ್ತದೆ. ಉತ್ಸಾಹ ಉಕ್ಕಿ ಅಲ್ಲಿಂದಲೇ ಆಕಳಗವಿಗೆ ಹಾರಬಹುದು ಎನ್ನಿಸಿದರೂ ಅದು ಅಸಾಧ್ಯದ ಹಾದಿ. ಮುಂದೆಲ್ಲ ಕೊಳ್ಳ, ಹೆಮ್ಮರಗಳು. ಹೀಗಾಗಿ ಸುತ್ತಿಕೊಂಡೇ ಹೋಗಬೇಕು. ಅಯ್ಯೋ, ಕಣ್ಣಿಗೆ ಹತ್ತಿರವಾದಷ್ಟು ಕಾಲಿಗೆ ಹತ್ತಿರವಾಗಲಿಲ್ಲ! ''ಹರಳಯ್ಯನ ಚಿಲುಮೆ'' ಎಂಬ ನಾಮಫಲಕ ಕಾಣುತ್ತಲೇ ಮೈಯಲ್ಲಿ ಪುಳಕ. ಎಲ್ಲರ ಮನಗೆದ್ದ ಅಮರ ತ್ಯಾಗಿ ಹರಳಯ್ಯ. ಹಿಂದೊಮ್ಮೆ ಹೋದಾಗ ಮಾರ್ಗದರ್ಶಿಗೆ ಇದೇನು ಎಂದರೆ ಹರಳಯ್ಯನ ಚಿಲುಮೆ ಎಂದಿದ್ದ. ಏಕೆ ಈ ಹೆಸರು ಎಂಬ ಪ್ರಶ್ನೆಗೆ ''ಇಲ್ಲಿ ಕುಳಿತು ಹರಳಯ್ಯನವರು ಚಿಲುಮೆ ಸೇದಿದ್ದರು'' ಎಂದಾಗ ನಾವೆಲ್ಲ ತಣ್ಣಗಾಗಿದ್ದೆವು. ''ಅಯ್ಯಾ, ಪುಣ್ಯಾತ್ಮಾ, ಹರಳಯ್ಯನವರು ಎಳೆಹೂಟೆ ಶಿಕ್ಷೆಗೆ ಈಡಾಗಿ ಕಲ್ಯಾಣದಲ್ಲೇ ದೇಹಾವಸಾನ ಹೊಂದಿದರು. ಅವರು ಚಿಲುಮೆ ಅರ್ಥಾತ್ ಭಂಗಿ, ಅಫೀಮು ಇತ್ಯಾದಿ ಸೇದುವವರಲ್ಲ. ಇನ್ನು ಮುಂದೆ ಹೀಗೆಲ್ಲ ಹೇಳಬೇಡ'' ಎಂದು ತಾಕೀತು ಮಾಡಿದ್ದೆವು.

ಚನ್ನಬಸವಣ್ಣನವರು ಸಹಸ್ರಾರು ಶರಣರೊಡನೆ ಬಂದು ನೆಲೆಸಿದಾಗ ಮಳೆಗಾಲದಲ್ಲಿ ನೀರು ಅಲ್ಲಲ್ಲೇ ಝರಿಯಾಗಿ ಹರಿದರೂ ಬೇಸಿಗೆಯಲ್ಲಿ ನೀರಿಗಾಗಿ ಪ್ರಯಾಸ ಪಡಬೇಕಾದಾಗ ಶಾಶ್ವತವಾದ ಜಲಮೂಲವನ್ನು ಅರಸಬೇಕಾಯಿತು. ಆಗ ಲಭ್ಯವಾದ ಈ ಜಲಧಾರೆಗೆ ಹುತಾತ್ಮ ಚೇತನ ಹರಳಯ್ಯನವರ ಹೆಸರನ್ನು ಚನ್ನಬಸವಣ್ಣನವರು ಇಟ್ಟರು. ವರ್ಷವಿಡೀ ಉಕ್ಕಿ ಹರಿಯುವ ಈ ಚಿಲುಮೆಯ ನೀರಿನ ಪ್ರಮಾಣ ಅಪಾರ. 10 ಅಶ್ವಶಕ್ತಿಯ ಮೋಟಾರ್ ಹಚ್ಚಿ ಆರು ಅಂಗುಲ ಗಾತ್ರದ ಪೈಪ್ ಹಚ್ಚಿದರೂ ನೀರು ಕೊರತೆಯಾಗದು. ಮೊದಲು ನೈಸರ್ಗಿಕವಾಗಿ ಒಂದು ತಗ್ಗಿದ್ದು ಜೋರಾಗಿ ಕೂಗಿದರೆ, ಚಪ್ಪಾಳೆ ತಟ್ಟಿದರೆ ನೀರು ಬುಗ್ಗೆಬುಗ್ಗೆಯಾಗಿ ಉಕ್ಕುತ್ತಿತ್ತು. ಈಗ ಆ ಕುಂಡಕ್ಕೆ ಸಿಮೆಂಟ್ ಕಟ್ಟೆ ಮಾಡಿರುವುದರಿಂದ ಏಕೋ ಸೊಗಸು ಕಳೆದುಕೊಂಡಂತೆ ತೋರಿತು. ಇಳಿಯುವ ದಾರಿಯಂತೂ ತೀರಾ ಇಳಿಜಾರು. ಒಬ್ಬರು ಮಾತ್ರ ಹತ್ತಲು, ಇಳಿಯಲು ಸಾಧ್ಯ.

ದೇವಸ್ಥಾನ ಸಮಿತಿಯವರಿಗೆ ನಮ್ಮ ಆತ್ಮೀಯ ಮತ್ತು ಕಳಕಳಿಯ ಸಲಹೆ ಎಂದರೆ ಹರಳಯ್ಯನ ಚಿಲುಮೆ ಇದೆ ಎಂಬುದು ತಿಳಿಯಲು ದೊಡ್ಡ ಫಲಕ ಹಾಕಬೇಕು ಮತ್ತು ದಾರಿಯುದ್ದಕ್ಕೂ ಅಲ್ಲಲ್ಲೇ ಆ ದಾರಿಯಲ್ಲಿ ಸಿಗಲಿರುವ ಇನ್ನಿತರ ಗವಿಗಳ ಹೆಸರನ್ನೂ ಬರೆಸಬೇಕು. ಹರಳಯ್ಯನವರ ಕುಂಡವನ್ನು ಹೀಗೆ ಬಹಿರಂಗವಾಗಿ ಬಿಟ್ಟಿರುವುದರಿಂದ ನಾಗರಿಕ ಪ್ರಜ್ಞೆ ಇಲ್ಲದ ಜನರು ಅದರೊಳಕ್ಕೆ ಚುರುಮುರಿ, ಪ್ಲಾಸ್ಟಿಕ್ ಲೋಟ ಮುಂತಾಗಿ ಎಸೆದಿದ್ದರು. ಅದರ ಸುತ್ತಲೂ ಒಂದು ಸುಂದರವಾದ ಗುಮ್ಮಟವನ್ನು ಕಟ್ಟಿ, ಅಮೃತ ಶಿಲಾ ಕಲ್ಲು ಹೊಂದಿಸಿ, ಒಂದು ಬಾಗಿಲು ಮಾಡಿಬಿಟ್ಟರೆ ಆ ಸ್ಥಳಕ್ಕೆ ಒಂದು ಪೂಜ್ಯತೆ ಬರುತ್ತದೆ. ಹರಳಯ್ಯನ ಚಿಲುಮೆಯ ನೀರು ಸ್ಫಟಿಕದಷ್ಟು ಶುಭ್ರ, ಇದನ್ನು ಒಂದು ಕೊಳವೆ ಮುಖಾಂತರ ಹೊರಗೆ ಬಿಡಲಾಗಿದೆ. ಅದಕ್ಕೆ ಬೆನ್ನು ಒಡ್ಡಿ ನಿಂತರೆ ಮೈಯೊಳಗಿನ ನೋವು ಮತ್ತು ಸ್ನಾಯು ಸೆಳೆತ ಮಾಯ. ಸಾಮಾನ್ಯವಾಗಿ ಎಲ್ಲ ಗವಿಗಳನ್ನು ಸಂದರ್ಶಿಸಿ ಮೈಹಣ್ಣು ಮಾಡಿಕೊಂಡು, ಬಟ್ಟೆ ಕೊಳೆ ಮಾಡಿಕೊಂಡು ಬಂದವರು ಈ ನೀರಿನ ತಾಡನಕ್ಕೆ ಮೈಯೊಡ್ಡಿ ಮೈಹಗುರ ಮಾಡಿಕೊಳ್ಳುವರು.

ನಂತರ ಸಿಗುವುದು ಅಕ್ಕನಾಗಲಾಂಬಿಕಾ ಗವಿ. ನಿಸರ್ಗ ನಿರ್ಮಿತವಾದ ಈ ಗವಿಯಲ್ಲಿ ಒಂದು ಶಿಲೆ ವ್ಯಕ್ತಿಯೋರ್ವಳು ಮಲಗಿರುವ ಕಲ್ಪನೆ ಮೂಡಿಸುವುದು. ವಚನ ಸಾಹಿತ್ಯ ಸಂರಕ್ಷಣೆಯ ನೇತೃತ್ವವಹಿಸಿದ ನಾಗಲಾಂಬಿಕೆ ಈ ಗವಿಯನ್ನೇ ವಾಸಸ್ಥಾನವಾಗಿ ಮಾಡಿಕೊಂಡಿರಬಹುದು. ಮುಂದೆ ಸಿಗುವುದು ವಿಭೂತಿ ಕಣಜ. ವಿಶಾಲವಾದ ಗವಿಯಲ್ಲಿ ಮಧ್ಯದಲ್ಲಿ ಒಂದು ಅಖಂಡ, ಗೋಳಾಕಾರದ ಶಿಲಾರಸದ ಗಟ್ಟಿ ಕಾಣಬರುತ್ತದೆ. ಇದು ವಿಭೂತಿಗಟ್ಟಿಯನ್ನು ಹೋಲುತ್ತದೆ. ಹೀಗಾಗಿ ಈ ಗವಿಗೆ ವಿಭೂತಿ ಗವಿ ಎಂದು ಹೆಸರನ್ನು ಇರಿಸಿರಬಹುದು. ಶರಣರು ಧರಿಸುವ ಬಹಿರಂಗದ ಲಾಂಛನಗಳಲ್ಲಿ ವಿಭೂತಿ ಬಹಳ ಪ್ರಮುಖ ಸ್ಥಾನ ಪಡೆದಿದೆ. ಅವುಗಳನ್ನು ರಕ್ಷಿಸಿಡಲು ಈ ಗವಿಯನ್ನು ಬಳಸಿಕೊಂಡಿರಬಹುದು. ಹೀಗಾಗಿ ಈ ಗವಿಯನ್ನು ವಿಭೂತಿ ಕಣಜ ಎಂದಿರಬಹುದು. ಮುಂದೆ ಸಿಗುವುದೇ ಆಕಳಗವಿ. ಇದು ಚನ್ನಬಸವಣ್ಣನವರ ವಾಸಸ್ಥಾನ ಮತ್ತು ಯೋಗಾನುಸಂಧಾನಕ್ಕೆ ಅನುಕೂಲಕರ ಏಕಾಂತ ಸ್ಥಳ. ಹದಿನೈದರಿಂದ ಇಪ್ಪತ್ತು ಅಡಿ ಎತ್ತರದ

ನೇರ ಬಂಡೆಯ ಅಡಿಪಾಯದ ಮೇಲೆ ಈ ಗವಿ ಇದೆ. ಆಗಿನ ಕಾಲದಲ್ಲಿ ನೂಲಿನಿಂದ ಅಥವಾ ಬೇರಿನಿಂದ ಮಾಡಿದ ಏಣಿಯನ್ನು ಬಳಸಿ ಬಂಡೆಯನ್ನು ಹತ್ತಿದರೆ ಕಾಡು ಪ್ರಾಣಿಗಳು ಹತ್ತಲು ಸಾಧ್ಯವಾಗದ ಬಂಡೆಯಿಂದಾಗಿ ಗವಿಯ ಒಳಗಿರುವವರು ನೆಮ್ಮದಿಯಿಂದ ಇರಬಹುದಿತ್ತು. ಈಗ ಕಬ್ಬಿಣದ ಸಲಾಕೆಗಳಿಂದ ಏಣಿಯನ್ನು ಮಾಡಿಸಲಾಗಿದೆ. ಇದರ ಜೊತೆಗೆ ಇನ್ನೆರಡು ಕಬ್ಬಿಣದ ಮೆಟ್ಟಲು ಮಾಡಿಸಿದರೆ ಅದು ಹೆಚ್ಚಿನ ಜನರು ಸುರಕ್ಷಿತವಾಗಿ ಬಂಡೆಯನ್ನು ಏರಿ ಗವಿಯನ್ನು ಸಂದರ್ಶಿಸಿ ಪುನಃ ಇಳಿಯಲು ಸಹಾಯಕವಾಗುವುದು.

ನಂತರ ಒಂದು ಚಿಕ್ಕ ಪೊಳ್ಳು ಸಿಗುವುದು ಇದರಲ್ಲಿ ತೆವಳಿಕೊಂಡೇ ಮುಂದೆ ಹೋಗಬೇಕು. ಮಳೆಗಾಲದಲ್ಲಿ ನೀರೂನಿಲ್ಲುವುದರಿಂದ ತೆವಳಿಕೊಂಡು ಹೋಗಿ ಬರುವಷ್ಟರಲ್ಲಿ ಬಟ್ಟೆಯೆಲ್ಲ ಕೆಸರುಮಯ. ಸ್ವಲ್ಪ ಮುಂದೆ ಹೋದಾಗ ಪುನಃ ನಿಲ್ಲಲು ಸಾಧ್ಯ, ಗವಿಯು ವಿಸ್ತಾರಗೊಳ್ಳುತ್ತದೆ. ಒಳಗೆ ಪ್ರವೇಶ ಮಾಡುತ್ತಲೇ ಹವಾ ನಿಯಂತ್ರಿತ ಕೋಣೆಯನ್ನು ಹೊಕ್ಕ ಅನುಭವ. ಕೈದೀವಿಗೆ, ಮೋಂಬತ್ತಿ ಹಚ್ಚಿ ಗವಿಯ ಮೇಲ್ಭಾಗ ವೀಕ್ಷಿಸಿದರೆ ಗಟ್ಟಿಗೊಂಡ ಶಿಲಾಪದರ ಆಕಳ ಕೆಚ್ಚಲಿನಂತೆ ಕಾಣುವುದೇ ಅಲ್ಲದೆ, ಗವಿಯ ಮೇಲ್ಭಾಗದಲ್ಲಿ ಬೀಳುವ ಮಳೆಯ ನೀರು ಕೆಳಗೆ ಇಳಿದು ಹನಿಹನಿಯಾಗಿ ತೊಟ್ಟಿಕ್ಕುವಾಗ ಕೆಚ್ಚಲಿನ ತೊಟ್ಟಿನಿಂದ ಬಿಳಿಯ ಹಾಲು ಸ್ರವಿಸುವಂತೆ ಕಾಣುತ್ತದೆ. ಈ ಕಾರಣದಿಂದಲೇ ಅದಕ್ಕೆ ಆಕಳಗವಿ ಎಂಬ ಅನ್ವರ್ಥನಾಮ ಬಂದಿರಬಹುದು. ಅಥವಾ ಒಟ್ಟಾಗಿ ಆ ಇಡೀ ಬಂಡೆಯೇ ಮಲಗಿದ ಆಕಳದಂತೆ ದೂರಕ್ಕೆ ಕಾಣುವುದರಿಂದಲೂ ಪ್ರಸ್ತುತ ಹೆಸರು ಬಂದಿರಬಹುದು. ಇದು ಚನ್ನಬಸವಣ್ಣನವರ ವಾಸಸ್ಥಾನವಾಗಿತ್ತು ಎಂಬುದು ನಮಗೆ ಅತೀವ ಮಹತ್ವಪೂರ್ಣ ಸಂಗತಿ. ಹೀಗಾಗಿ ಇದು ಐತಿಹಾಸಿಕ ಸ್ಮಾರಕ. ನಂತರ ಸಿಕ್ಕುವ ನಿಸರ್ಗದ ಇನ್ನೊಂದು ಕೈವಾಡ, ನಿಸರ್ಗದ ಮೂಲಕ ದೇವರು ಚಿತ್ರಿಸಿರುವ ಪವಾಡ ಸದೃಶ್ಯ ಕಲಾಕೃತಿಯೋ ಎಂಬಂತಿದೆ ರುದ್ರಾಕ್ಷಿ ಮಂಟಪ.

ಈ ಗವಿಯ ಮೇಲ್ಭಾವಣಿಯನ್ನು ಮೋಂಬತ್ತಿಯ ಬೆಳಕಿನಲ್ಲಿ ನೋಡಿದರೆ ಅದು ಹುಳುಕು ಹುಳುಕಾಗಿ ರುದ್ರಾಕ್ಷಿಯನ್ನು ಸರಗಟ್ಟಿ ಹರಡಿದಂತೆ ಕಾಣುತ್ತದೆ. ಸೂರ್ಯನಿಂದ ಸಿಡಿದ ಭೂಮಿ ಮೊದಲು ಉರಿಯುವ ಚೆಂಡಿನಂತಿದ್ದು ನಂತರ ತಂಪಾಗುವಾಗ ವಿವಿಧ ಬಗೆಯ ಶಿಲೆಗಳು ನಿರ್ಮಾಣವಾಗಿವೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅಮೆರಿಕಾದಲ್ಲಿ ಇಂಥ ಗವಿಗಳನ್ನು ಸಂದರ್ಶಿಸಲು ವಿಶೇಷ ವ್ಯವಸ್ಥೆ ಮಾಡಿರುವರು. ಉಳವಿಯಲ್ಲಿ ಇಂಥ ಪ್ರಕೃತಿ ನಿರ್ಮಿತ ಕಲಾಕೃತಿಗಳು ಅದ್ಭುತವಾಗಿದ್ದರೂ ಅವನ್ನು ನೋಡಿ ಸವಿಯುವವರ ಸಂಖ್ಯೆ ಕಡಿಮೆ. ವಚನ ಸಾಹಿತ್ಯದ ಹಿರಿಮೆ, ಲಿಂಗಾಯತ ಧರ್ಮದ ಇತಿಹಾಸ ಗೊತ್ತಿದ್ದವರಷ್ಟೇ ಈ ಗವಿಗಳನ್ನು ಸಂದರ್ಶಿಸುವ ಕುತೂಹಲ ಹೊಂದಿರುವರು. ಆಯಾ ಗವಿಗಳ ಮುಂದೆ ನಾಮಫಲಕ ಹಾಕುವುದಲ್ಲದೆ ಅವುಗಳ ಮಹತ್ವ ವಿವರಿಸಿದರೆ ಜನರಿಗೆ ಹೆಚ್ಚು ಅನುಕೂಲಕರ. ವಯಸ್ಸಾದವರು, ಅಶಕ್ತರು ಸಹ ಸಂದರ್ಶಿಸಲು ಅನುಕೂಲಕರವಾಗುವಂತೆ ಅಂಥವರನ್ನು ಹೊತ್ತೊಯ್ಯುವ ಕುರ್ಚಿಗಳು, ಜನರು, ಕುದುರೆಯಂಥ ಪ್ರಾಣಿ, ಜೊತೆಗೆ ವಿವರಣೆ ನೀಡುವ ಮಾರ್ಗದರ್ಶಿಗಳು ಇತ್ಯಾದಿ ವ್ಯವಸ್ಥೆಯನ್ನು ದೇವಾಲಯದ ವಿಶ್ವಸ್ಥ ಮಂಡಳಿ ಒದಗಿಸಿದರೆ ಸಂಸ್ಥೆಗೆ ಧನ ಲಾಭ ಖಂಡಿತ; ಪ್ರವಾಸಿಕರಿಗೆ ಹಿತಕರ.

ಮಹಾಮನೆಯ ಸಂದರ್ಶನ

ಈ ಪದ ವಚನಾಭ್ಯಾಸಿಗಳಿಗೆ ಕರ್ಣರಸಾಯನ; ಮನಸ್ಸಿಗೆ ಅಮೃತ ಸಮಾನ. ಸಿದ್ಧರಾಮೇಶ್ವರರು ಹೇಳುವಂತೆ, ''ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ''ಮಹಾಮನೆಯ ಕಟ್ಟಿದಡೆ ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು. ಈ ಮನೆಗೆ ತಲೆಬಾಗಿ ಹೊಕ್ಕವರೆಲ್ಲ ನಿಜಪದವನ್ನು ಪಡೆದರು''. ವರ್ಣಾಂತರ ವಿವಾಹ ಮಾಡಿಸಿದ್ದಕ್ಕಾಗಿ ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಸಾಹಿತ್ಯ ರಕ್ಷಣೆಗಾಗಿ ಚನ್ನಬಸವಣ್ಣ, ಅಕ್ಕನಾಗಮ್ಮರು ಶರಣರ ತಂಡದೊಡನೆ ಅರಣ್ಯಕ್ಕೆ ಬಂದರು. ಕಲ್ಯಾಣದ ಮಹಾಮನೆಯ ನೆನಪು ಅವರನ್ನು ಕಾಡುತ್ತಿತ್ತು.

ಹರಭಜನೆ ಗುರುಸೇವೆ ಉರುತರದಿ ಮಾಡುತಲಿ
ಶರಣಗಣ ಕೂಡಿ ಉಳಿವೆಯೊಳು। ಮರುದಿನವೆ
ಮೆರೆಸಿದರು ತತ್ತ್ವಮಂಟಪವ ॥

ಚನ್ನಬಸವೇಶ್ವರನು ಉನ್ನತಾನುಭವಿಗಳು
ಚಿನ್ನಮಯವಾತು ಆ ಉಳಿವೆ। ಲಿಂಗಿಗಳ
ಕನ್ನೆಭಕ್ತಿಯ ಗೂಡಾತು ॥

ಜನಪದ ಕವಿಗಳು ಉಳಿವೆಯಲ್ಲಿ ಹೇಗೆ ಪುನಃ ಮಹಾಮನೆ ಕಾರ್ಯಾರಂಭ ಮಾಡಿತು ಎಂಬುದನ್ನು ಹೀಗೆ ಚಿತ್ರಿಸಿದ್ದಾರೆ. ಸ್ವಲ್ಪ ಕಾಲ ಜ್ಞಾನದಾಸೋಹ ಮತ್ತು ಅನ್ನದಾಸೋಹ ಎರಡನ್ನೂ ಈ ಮಹಾಮನೆ ಮಾಡಿತು. ಅರಣ್ಯದ ಗರ್ಭದಲ್ಲಿ ಹುದುಗಿರುವ ಈ ಮಹಾಮನೆಗೆ ಉಳಿವೆಯಿಂದ ಒಳದಾರಿಗಳು ಇವೆಯಾದರೂ ನಗರವಾಸಿ ಜನರು ಕ್ರಮಿಸಲು ಅಸಾಧ್ಯವಾದವು. ಇದೇ ಈಗ ಮಳೆಗಾಲ ಮುಗಿಯುತ್ತಿರುವುದರಿಂದ ಆಕಸ್ಮಿಕವಾಗಿ ಮಳೆಯು ಇನ್ನೂ ಬೀಳುವ ಸಂಭವವಿರುವುದರಿಂದ ಮನುಷ್ಯರ ಎತ್ತರಕ್ಕೆ ಬೆಳೆಯುವ ಹುಲ್ಲನ್ನು ಇನ್ನೂ ಸವರಿ ದಾರಿ ಮಾಡಿರುವುದಿಲ್ಲವಂತೆ. ಗುಂದದಿಂದ ಶಿವಪುರ ಗ್ರಾಮದವರೆಗೆ ಅರಣ್ಯದಲ್ಲಿ ವಾಹನದಲ್ಲಿ ಸಾಗಿ ನಂತರ ಕಾಲುನಡಿಗೆಯಿಂದ ಮಹಾಮನೆಗೆ ಹೋಗುವುದು ಸುರಕ್ಷಿತ ಎಂದು ಶಿವಪುರ ಗ್ರಾಮದ ಮುಖಂಡರು, ಆ ಪ್ರದೇಶದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ಸಮಾಜ ಸೇವಕರು, ತಾಲ್ಲೋಕು ಪಂಚಾಯಿತಿ ಸದಸ್ಯರೂ ಆದ ಶ್ರೀ ಗೋಪಾಲಭಟ್ಟರು ಸೂಚಿಸಿದರು.

ಸದ್ಯ ಇನ್ನಾವ ದಾರಿಯಿಂದಲೂ ಹೋಗಲು ಸಾಧ್ಯವಿಲ್ಲ ಎಂದು ನಿರ್ಧರಿಸಿದ ಶ್ರೀ ಗೋಪಾಲಭಟ್ಟರು ಡಾಂಬರು ರಸ್ತೆ ದಾಟಿದ ಮೇಲೆ ಅವರ ಮನೆವರೆಗೆ ಸಿಗುವ ಮಣ್ಣಿನ ರಸ್ತೆಯನ್ನು ತಗ್ಗುಬಿದ್ದಲ್ಲಿ ಮಣ್ಣುಹಾಕಿಸಿ, ದಾರಿಯಲ್ಲಿ ಅಡ್ಡಲಾಗಿ ಬಿದ್ದ ಮರಗಳನ್ನು ಕಡಿಸಿ, ಸಾಕಷ್ಟು ಸರಿಪಡಿಸಿದ್ದರು. ಸುತ್ತಲೂ ಬೆಟ್ಟಗಳ ಅಭೇದ್ಯ ಕೋಟೆಯ ನಟ್ಟ ನಡುವೆ ಸಿಗುವ ಸಮತಟ್ಟಾದ ಬಯಲಿನಲ್ಲಿ ಸಾಕಷ್ಟು ಜನ ಅಲ್ಲಲ್ಲೇ ತೆಂಗು, ಅಡಿಕೆ, ಬಾಳೆಗಳನ್ನು, ಬತ್ತವನ್ನು ಬೆಳೆಯುತ್ತಾರೆ. ಭಟ್ಟರ ಹಿರಿಯರ ಕಾಲದಿಂದಲೂ ಈ ಜಾಗದಲ್ಲಿ ಅವರು ನೆಲೆಸಿದ್ದಾರೆ. ಅಂಥ ದುರ್ಗಮ ಅರಣ್ಯ, ಹತ್ತಿರದಲ್ಲಿ ಮನೆಗಳು ಇರುವುದಿಲ್ಲ, ಹುಲಿ ಚಿರತೆ

ಮುಂತಾದವುಗಳ ನಿರಾತಂಕ ಸಂಚಾರ - ಇಂಥ ಪರಿಸರದಲ್ಲಿ ಅವರುಗಳು ಇರುವುದು ಒಂದು ಎದೆಗಾರಿಕೆಯ ಕೆಲಸವೇ ಸರಿ. ವಿದ್ಯುತ್ ಲೈನ್‌ಗಳು ಆ ಪ್ರದೇಶದಲ್ಲಿ ಹಾಯ್ದೇ ಇಲ್ಲ. ಗೋಪಾಲಭಟ್ಟರು ಮಾತ್ರ ಜಲಶಕ್ತಿಯ ನೆರವಿನಿಂದ ಜನರೇಟರ್ ನಡೆಸಿ ತಮ್ಮ ಮನೆಗೆ ಅಗತ್ಯವಿರುವಷ್ಟು ವಿದ್ಯುತ್ ಉತ್ಪಾದಿಸಿಕೊಳ್ಳುತ್ತಾರೆ. ಕಾಡಿನ ಪ್ರಾಣಿಗಳ ದಾಳಿಯಿಂದ ಹೊಲವನ್ನು, ಬೆಳೆಯನ್ನು, ದನಕರುಗಳನ್ನು ರಕ್ಷಿಸಿಕೊಳ್ಳಲು ಬೇಲಿಗೆ ಸೌರಶಕ್ತಿಯ ವಿದ್ಯುತ್ ಹರಿಸುತ್ತಾರೆ.

ಎರಡು ನೂರು ಶಿಬಿರಾರ್ಥಿಗಳು ತಮ್ಮ ಸಾಮಾನನ್ನು ಭಟ್ಟರ ತೋಟದ ಮನೆಯಲ್ಲಿಟ್ಟು ಮಹಾಮನೆಯತ್ತ ಹೆಜ್ಜೆ ಹಾಕಿದರು. ದಟ್ಟ ಅರಣ್ಯ, ಇಳಿಜಾರು ಪ್ರದೇಶ, ಎತ್ತರವಾದ ಬೆಟ್ಟಗಳು ಮಧ್ಯೆ ಮಧ್ಯೆ ಸಿಗುವ ನೀರಿನ ಝರಿಗಳು, ತೊರೆಗಳು. ಕೆಲವೆಡೆ ನೀರು ಮಡುಗಟ್ಟಿ ನಿಂತಲ್ಲಿ ಆ ಬೆಟ್ಟಗಳು ಕನ್ನಡಿಯನ್ನು ನೋಡಿಕೊಳ್ಳುವಂತೆ ಮೂಡುವ ಪ್ರತಿಬಿಂಬ. ಒಂದೊಂದೂ ಅಪೂರ್ವ ದೃಶ್ಯಗಳು. "ನಿಮಗೆ ಈ ದಾರಿ ಅಸಾಧ್ಯ; ಬರಬೇಡಿ" ಎಂಬ ಮೊರೆ ಕೆಲವರದು. ಒಬ್ಬರಂತೂ, ಬರಬೇಡಿ ಎಂದು ಅಳಲು ಆರಂಭಿಸಿದರು. ಅವರನ್ನು ಸಮಾಧಾನಿಸಿ ಆಸರೆಗೊಂದು ಕೋಲು ತೆಗೆದುಕೊಂಡು ನಾನೂ ಇತರರೊಡನೆ ಸಾಗಿದೆ.

ಜೀವನದಲ್ಲಿ ಸಿಗಬಹುದಾದ ಅಪೂರ್ವ ಕ್ಷಣಗಳನ್ನು, ಅವು ನೀಡುವ ಅನುಭವದ ಮುತ್ತುರತ್ನಗಳನ್ನು ಕಳೆದುಕೊಳ್ಳುವುದು ಜಾಣತನವೆ ? ಹಲವು ಜಾಗಗಳಲ್ಲಿ ಹಳ್ಳಗಳನ್ನು ದಾಟಬೇಕಾಗುತ್ತದೆ. ಪಾಚಿ ಕಟ್ಟಿದ ಕಲ್ಲಿನ ಮೇಲೆ ಎಚ್ಚರಿಕೆಯಿಂದ ನಡೆಯಬೇಕು. ಇನ್ನೊಂದು ಬೆಚ್ಚಿಬೀಳಿಸುವ ಸಂಗತಿ ಎಂದರೆ ಜಿಗಳೆಗಳು. ಸದ್ದುಗದ್ದಲವಿಲ್ಲದೆ ಕಾಲನ್ನೇರಿ ರಕ್ತವನ್ನು ಹೀರುವ ಇವು ರಕ್ತ ಕುಡಿದು ಉಬ್ಬಿಬಿಡುತ್ತವೆ. ರಕ್ತ ಸುರಿಯುವಾಗ ಯಾರಾದರೂ ನೋಡಿದರೆ ಆಗಲೇ ತಿಳಿಯುವುದು ಅವುಗಳ ಅಟ್ಟಹಾಸ. ತೇವಾಂಶವಿರುವ ನೆಲದಲ್ಲಿ ಅವುಗಳು ಜಿಗಿಯುತ್ತಿರುತ್ತವೆ.

ಮಹಾಮನೆ ಇನ್ನೂ ಅರ್ಧಕಿಲೋಮೀಟರ್ ಮುಂದಿರುವಾಗ ಕರಿಹೊಳೆ ಒಂದೆಡೆ ಜಲಪಾತವಾಗಿ ಧುಮುಕುತ್ತದೆ. ಅದು ನಯನ ಮನೋಹರ ದೃಶ್ಯವನ್ನು ಸೃಷ್ಟಿಸಿದೆಯಾದರೂ ಅದನ್ನು ನಿಂತು ನೋಡಲು ಯಾವುದೇ ಅನುಕೂಲತೆ ಇಲ್ಲ. ನಂತರ ಶುರುವಾಗುತ್ತದೆ ಜನರ ಸರ್ಕಸ್. ವೇಗದಿಂದ ಹರಿಯುವ ಹಳ್ಳ, ವಿವಿಧ ಆಕಾರದ ಇಳಿಜಾರಿನ ಕಲ್ಲುಗಳು. ಮಹಾಮನೆ ಗವಿಯ ಹತ್ತಿರ ಹೆಜ್ಜೆ ಹಾಕುತ್ತಿದ್ದಂತೆಯೇ ದಾರಿಯ ಸಂಕಷ್ಟ ತೀವ್ರಗೊಳ್ಳುತ್ತದೆ. ಕಡಿದಾದ ಬೆಟ್ಟದ ಮೇಲೆ ಸಾಗುವಾಗ ಜಾರಿದರೆ ನೇರವಾಗಿ ಹಳ್ಳದೊಳಕ್ಕೇ ಬೀಳಬೇಕು. 'ಮಹಾಮನೆ' ಇಟ್ಟಿಗೆ, ಕಲು, ಗಾರೆಗಳ ಮಾನವ ನಿರ್ಮಿತ ಮನೆಯಲ್ಲ; ನಿಸರ್ಗವು ಕೊರೆದಿರುವ ವಿಸ್ತಾರವಾದ ಶಿಲಾ ಪದರ. ಕಮಾನಿನ ಆಕಾರದಲ್ಲಿ ಪ್ರವೇಶದ್ವಾರವಿದೆ. ಇಳಿಜಾರಿನ ಬಂಡೆಯ ಮೇಲೆ ತೆವಳುತ್ತ, ಕೈಸವರಿಕೊಂಡು, ಸಿಕ್ಕ ಹುಲ್ಲಿನ ಪೊದೆಯನ್ನೇ ಆಸರೆಯಾಗಿ ಹಿಡಿಯುತ್ತ ಮುಂದೆ ಸಾಗಬೇಕು. ಜಾರಿದರೆ ಬಾಯ್ದೆರೆದು ನಿಂತ ಕೊಳ್ಳವು ನಾನು ನುಂಗಲು ಸಿದ್ಧ ಎಂದು ಹೆದರಿಸುತ್ತದೆ.

ಈ ಹಳ್ಳ - ಇದಕ್ಕೆ ಈ ಜಾಗದಲ್ಲಿ ಶರಣರು ಕಿನ್ನರಯ್ಯನ ಹೊಳೆ ಎಂದು ಹೆಸರಿಟ್ಟಿದ್ದಾರೆ, ಕಿನ್ನರಿ ಬ್ರಹ್ಮಣ್ಣನವರ ಸ್ಮರಣಾರ್ಥ. ಇದು ಎರಡು ಟಿಸಿಲಾಗಿ ಒಡೆಯುತ್ತದೆ. ಒಂದು ಟಿಸಿಲು ಗವಿಯನ್ನು ಪ್ರವೇಶಿಸಿ ಹರಿದು ಹೊರಗೆ ಹೋಗುತ್ತ ಗವಿಯನ್ನು ಹೊರಗಿನಿಂದ ಬಳಸಿಕೊಂಡು

ಬರುವ ಟಿಸಿಲಿನ ಜೊತೆಗೆ ಪುನಃ ಸೇರುತ್ತದೆ. ಗವಿಯ ಒಳಗೆ ಗಾಢ ಕತ್ತಲೆಯಲ್ಲಿ ಹರಿಯುವ ಹಳ್ಳ ಕೊಳ್ಳದಲ್ಲಿ ಇಳಿಯುವುದರಿಂದ ಅದರ ಆಳವನ್ನರಿಯಲು ಆಗುವುದೇ ಇಲ್ಲ. ಎದೆಯಲ್ಲಿ ನಡುಕ ಹುಟ್ಟಿಸುವ ಅದರ ರೂಪ ನೋಡಿಯೇ ಜನರು ಮುಂದೆ ಅಡಿ ಇಡಲು ಅಂಜುತ್ತಾರೆ. ಮಳೆಗಾಲದಲ್ಲಿ ವಿಪರೀತ ಮಳೆ ಇರುತ್ತಿದ್ದುದರಿಂದ ಶರಣರು ಸಹಜವಾಗಿ ಗವಿಯ ಹೊರಗೆ ಹರಿಯುತ್ತಿದ್ದ ಹಳ್ಳವನ್ನು ಒಳಗೆ ತಿರುಗಿಸಿಕೊಂಡರು ಎಂದು ಅನೇಕರ ಊಹೆ. ಮಹಾಮನೆಯ ಗವಿಯ ಬಾಗಿಲನ್ನು ನೋಡುತ್ತಲೇ ನನ್ನಂಥವರು ಸಮಾಧಾನ ಚಿತ್ತರಾಗಿ ಹಳ್ಳದ ದಂಡೆಯ ಕಲ್ಲಿನ ಮೇಲೆ ಕುಳಿತೆವು. ಮತ್ತಷ್ಟು ಶರೀರ ಶಕ್ತಿ, ಧೈರ್ಯ ಇದ್ದವರು ಇಳಿಜಾರಿನ ಕಲ್ಲನ್ನು ಸವರುತ್ತ ಹುಲ್ಲಿನ ಆಸರೆಯ ಮೇಲೆ ಗವಿಯ ಪ್ರವೇಶದ್ವಾರದ ಪೊಳ್ಳಿನತ್ತ ನಡೆದರು. ಎಂಟೆದೆಯ ಭಂಟರಾದ ಕೆಲವೇ ಕೆಲವರು ಮತ್ತೂ ಮುಂದಕ್ಕೆ ನೂರೈವತ್ತು ಅಡಿಯಷ್ಟು ಸಾಗಿದರು. ಗಾಢವಾದ ಕತ್ತಲೆ, ನೆಲದ ಮೇಲೆ ಕಾಲಿಟ್ಟಾಗ ಮೆತ್ತುವ ತೊಗಲು ಬಾವಲಿಗಳ ವಿಸರ್ಜಿತ ಮಲ, ಮನುಷ್ಯ ಚಲನವಲನದಿಂದ ಹೆದರಿ ಕಂಗೆಟ್ಟ ಬಾವಲಿಗಳ ಗಡಿಬಿಡಿಯ ಹಾರಾಟ, ಎಲ್ಲೆಡೆ ಹರಡಿರುವ ದುರ್ವಾಸನೆ, ಇವುಗಳಿಂದ ಮುಂದೆ ಹೆಜ್ಜೆ ಇಡಲಾಗುವುದಿಲ್ಲ ಎನ್ನುವಾಗ ಮೊಟ್ಟ ಮೊದಲು ಹೋದ ಮೂವರ ಕಣ್ಣೆದುರಿಗೆ ದೊಡ್ಡದೊಂದು ಸರ್ಪ ಹೆಡೆ ಬಿಚ್ಚಿ ನಿಂತಿತಂತೆ. ಬಹುಶಃ ಮತ್ತಷ್ಟು ಒಳಭಾಗಕ್ಕೆ ಸರಿದಿರಬೇಕು. ನಂತರ ಹೋದವರ ಕಣ್ಣಿಗೆ ಅದು ಬಿದ್ದಿಲ್ಲ.

ಕಾಲಜ್ಞಾನ ವಚನ, ಹಿರಿಯ ತಲೆಗಳಿಂದ ಸಂಗ್ರಹಿಸಿದ ವಿವರದಂತೆ ಮಹಾಮನೆ ಗವಿ ಸಾವಿರಾರು ಜನರಿಗೆ ಆಶ್ರಯ ಕಲ್ಪಿಸಿದ್ದ ವಸತಿ ಗೃಹ ಮತ್ತು ದಾಸೋಹದ ಮನೆ. ಎಂಟು ನೂರಾ ಎಂಟು ವರ್ಷಗಳ ಅವಧಿಯಲ್ಲಿ ಮಣ್ಣು, ಕೊಳೆ ಎಲ್ಲ ಸಂಗ್ರಹವಾಗಿ ಪೂರ್ಣ ಮಲಿನಗೊಂಡಿವೆ. ಈ ಪರಿಸರದ ನೈಸರ್ಗಿಕ ಸಂಪತ್ತನ್ನು, ಚೆಲುವನ್ನು ನಾಶಪಡಿಸದೆ ಹೋಗಿ ಬರುವ ಕಾಲುದಾರಿಯನ್ನು ಸ್ವಲ್ಪ ಅಗಲಗೊಳಿಸಿ ಮಾರ್ಗತೋರುವ ಫಲಕಗಳನ್ನು ಹಾಕಿಸಿ, ನಡೆಯುವ ದಾರಿಯುದ್ದಕ್ಕೂ ಅಲ್ಲಲ್ಲೇ ಕುಳಿತು ವಿಶ್ರಮಿಸಲು ಕಟ್ಟೆಗಳನ್ನು ಮಾಡಿಸಿದರೆ ಬಹಳ ಉಪಕಾರವಾಗುವುದು. ದಾರಿಯಲ್ಲಿ ಸಿಗುವ ನಾಗಲಾಂಬಿಕಾ ಫಾಲ್ಸ್ - ಜಲಪಾತವನ್ನೂ ವೀಕ್ಷಿಸಲು ಅನುಕೂಲವಾಗುವಂತೆ ಮಾಡಿದರೆ ಮಹಾಮನೆ ಗವಿಯು ಪ್ರವಾಸಿಕರಿಗೆ ಮುದ ನೀಡುವ ಒಂದು ಸುಂದರ ಪ್ರವಾಸಿ ತಾಣವಾದರೆ, ಸದ್ಭಕ್ತರಿಗೆ ಪರಮಾನಂದ ಕರುಣಿಸುವ ಶಾಂತಿಧಾಮವಾಗುವುದು.

ಶ್ರಮದಾಯಕವಾದ ಈ ಸಂದರ್ಶನ ಪೂರೈಸಿದಾಗ ಭಾವನೆಗಳ ಮಹಾಪೂರವು ಎಲ್ಲರಲ್ಲಿ ಉಕ್ಕುತ್ತಿತ್ತು. "ವಚನ ಸಾಹಿತ್ಯವನ್ನು ಉಳಿಸಲು ನಮ್ಮ ಆದಿ ಶರಣರು ಇಂಥ ಕಾಡಿನಲ್ಲಿ ಪಟ್ಟಿರಬಹುದಾದ ಯಾತನೆ ನೆನಪಾದರೆ ಅತೀವ ದುಃಖವಾಗುತ್ತದೆ. ನಾವು ಯಾವ ತ್ಯಾಗ ಮಾಡಿದರೂ ಕಡಿಮೆಯೆ" ಎನ್ನಿಸುತ್ತದೆ ಎಂಬ ಉದ್ಗಾರ ಎಲ್ಲರ ಬಾಯಿಯಲ್ಲಿ ಅನುರಣಿಸುತ್ತಿತ್ತು. ಸಂದರ್ಶನ ಮುಗಿಸಿ ಶ್ರೀ ಗೋಪಾಲಭಟ್ಟರ ಮನೆಯ ಬಳಿ ಬಂದು ಕುಳಿತಾಗ ಎಲ್ಲಕ್ಕೈ ಕಾಲುಗಳು ಬಹುಬಗೆಯ ಭಾಷೆಯನ್ನು ಮಾತನಾಡುತ್ತಿದ್ದವು. ದೇಹದ ಆ ನೋವು ಮೂರು ನಾಲ್ಕು ದಿನ ಬಾಧಿಸಿದರೂ ಈ ಪ್ರವಾಸ ನೀಡಿದ ಆನಂದ ಮಾತ್ರ ಬದುಕಿನುದ್ದಕ್ಕೂ ನಿಲ್ಲುವಂತಹುದು, 12ನೆಯ ಶತಮಾನದ ಶರಣರ ತ್ಯಾಗ-ಬಲಿದಾನಗಳಿಗೆ ಕೈಗನ್ನಡಿ ಹಿಡಿಯುವಂತಹದು. ★★★

ವಚನ ಚಿಂತನೆ - 3

- ಮಾತಾಜಿ

(ಅರ್ಥ ಕೇಳಿದವರು ಮಾತೆ ಕಸ್ತೂರಿದೇವಿ)

ಹಸುವ ಕೊಂದಾತ ನಮ್ಮ ಮಾದಾರ ಚನ್ನಯ್ಯ
ಶಿಶುವೇಧೆಗಾರನು ನಮ್ಮ ಡೋಹರ ಕಕ್ಕಯ್ಯ
ಪಾಪ ಕರ್ಮಿ ನಮ್ಮ ಮಡಿವಾಳ ಮಾಚಯ್ಯ
ಕೊಟ್ಟುದ ಬೇಡನು ನಮ್ಮ ಲಿಂಗದೇವಯ್ಯ

- ಧರ್ಮಪಿತರು

ಬಸವ ಗಂಗೋತ್ರಿಯಿಂದ ಮಾತೆ ಕಸ್ತೂರಿದೇವಿಯವರು ಈ ವಚನವನ್ನು ಸಮಸ್ಯೆ-ಸಮಾಧಾನ ವಿಭಾಗಕ್ಕೆ ಕಳಿಸಿ, ಈ ವಚನ ಅರ್ಥವಾಗುತ್ತಿಲ್ಲ ಎಂದು ವಿವರಣೆ ಕೇಳಿದ್ದರು. ನಾನೂ ಬಹಳ ತಲೆಕೆಡಿಸಿಕೊಂಡೆ, ಬೆಂಗಳೂರಿನಿಂದ ಗುಲ್ಬರ್ಗಾಕ್ಕೆ ಟ್ರೇನಿನಲ್ಲಿ ಹೋಗುವಾಗ ಈ ಬಗ್ಗೆ ಚಿಂತನ ಮಾಡುವಾಗ ತಲೆಯಲ್ಲಿ ಮಿಂಚು ಹೊಳೆಯಿತು. '' ಹಸುವ'' ಬದಲು ''ಹಸಿವು'' ಇದ್ದರೆ ಹೇಗೆ ಎಂದು ತಟ್ಟನೆ ಹೊಳೆಯುತ್ತಲೇ ಹರ್ಷಾತಿರೇಕವು ಉಂಟಾಯಿತು.

ಚೋಳರಾಜನ ಲಾಯಕ್ಕೆ ಹುಲ್ಲುಹೊರುತ್ತಿದ್ದ ಮಾದಾರ ಚೆನ್ನಯ್ಯ ಒಂದು ದಿನ ಊಟಕ್ಕೆ ಕುಳಿತಿದ್ದ. ರಾಗಿ ಅಂಬಲಿಯನ್ನು ಕೈ ಎದ್ದಿ ನಾಲಿಗೆಗೆ ತಾಗಿಸಿದ. ಅಬ್ಬಬ್ಬಾ ! ಏನು ರುಚಿ !! ಇಂಥ ರುಚಿಕಟ್ಟಾದ ಅಂಬಲಿಯ ಸವಿ ನಾಲಿಗೆಯಲ್ಲಿ ನೀರೂರಿಸಿರಬಹುದು. ಆದರೆ ಅದನ್ನು ನಿಯಂತ್ರಿಸಿಕೊಂಡು ಇದು (ಶಿವನ ಪ್ರತಿನಿಧಿಯಾದ) ಗುರುವಿಗೆ ಸಮರ್ಪಿತವಾದರೆ ಚೆಂದ ಎಂದುಕೊಂಡ. ಆ ಮುಗ್ಧ ಭಕ್ತನಿಗೆ ಭಕ್ತಿಯ ಉತ್ಕಟತೆಯಲ್ಲಿ ಆ ಸವಿ ನೋಡಿದ ಅಂಬಲಿ 'ಎಂಜಲಾಯಿತು' ಎಂಬ ಸಂದೇಹ ಮೊಳೆಯಲಿಲ್ಲ. ಹಾಗೆಯೇ ಎತ್ತಿಟ್ಟು ಗುರುವನ್ನು ಆಹ್ವಾನಿಸಿದ. ಆ (ರಾಜ) ಗುರುವು ಅದೇ ಸಮಯದಲ್ಲಿ ಚೋಳರಾಜನ ಆಹ್ವಾನವಿದ್ದರೂ ಅದನ್ನು ಕಡೆಗಣಿಸಿ ಭಾವುಕ ಭಕ್ತ ಚನ್ನಯ್ಯನ ಗುಡಿಸಿಲಿಗೆ ಬಂದ. ಗುರುವಿಗೆ ಉಣ್ಣಿಸಿ ತಾನು ಉಣ್ಣಬೇಕೆಂದು ಕಾಯ್ದಿದ್ದ ಚೋಳರಾಜ ಗುರುವು ಬರದೆ ಇದ್ದಾಗ ಹುಡುಕಿಕೊಂಡು ಬಂದರೆ ಕಂಡದ್ದೇನು ? ಆ ಗುರುವು ರಾಜನ ಭಕ್ಷ್ಯ ಭೋಜ್ಯ ಕಡೆಗಣಿಸಿ ಚನ್ನಯ್ಯನ ಅಂಬಲಿಯನ್ನು ಸವಿಯುತ್ತಿದ್ದಾನೆ. ರಾಜನಿಗೆ ಗುರುವಿನ ಮೇಲಾಗಲೀ ಅವನನ್ನು 'ಬಂಧಿಸಿ' ಇಟ್ಟುಕೊಂಡಿದ್ದ ಚನ್ನಯ್ಯನ ಬಗ್ಗೆಯಾಗಲೀ ಕೋಪ ಬರಲಿಲ್ಲ; ಅಭಿಮಾನ ಉಕ್ಕಿತು. ಚನ್ನಯ್ಯನನ್ನು ಗೌರವಿಸಿದ.

ನಡೆ ಚನ್ನ ನುಡಿ ಚನ್ನ
ಪ್ರಮಥರೊಳಗೆ ಚೆನ್ನ ಪುರಾತನರೊಳಗೆ ಚೆನ್ನ
ಸವಿ ನೋಡಿ ಅಂಬಲಿಯ ರುಚಿಯಾಯಿತ್ತೆಂದು
ಕೂಡಲ ಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ !

ಚನ್ನಯ್ಯ ತಾನು ರುಚಿ ನೋಡಿದ ಅಂಬಲಿಯಲ್ಲಿ ಇಟ್ಟ ಕೈತೆಗೆದು, ಅದನ್ನು ಗುರುವಿಗೆ ಕೊಟ್ಟದ್ದೇಕೆ ?

1. ಬಹಳ ಬಡವನಿದ್ದು, ಸೀಮಿತ ಆದಾಯ ಹೊಂದಿದ್ದ. ಹೀಗಾಗಿ ಆ ಅಂಬಲಿ ಬಿಟ್ಟರೆ ಬೇರೆ ಮಾಡಲು ಅಂದಿಗೆ ದವಸಧಾನ್ಯವಿರಲಿಲ್ಲ.
2. ದವಸಧಾನ್ಯವಿದ್ದು ಬೇರೆ ಅಂಬಲಿ ಮಾಡಿದರೂ ಮೊದಲಿನಷ್ಟು ರುಚಿಯಾಗುತ್ತದೆಂದು ಹೇಗೆ ಹೇಳುವುದು ?

ಅದಕ್ಕಾಗಿ ರುಚಿಯಾಗಿದ್ದುದನ್ನೇ ಕೊಟ್ಟುಬಿಟ್ಟ. ಪರಿಣಾಮ ? ಅಂದು ಅವನಿಗೆ ಉಪವಾಸ ! ಹೀಗೆ ಮಾದಾರ ಚನ್ನಯ್ಯ ಹಸಿವನ್ನು ಕೊಂದುಬಿಟ್ಟ !! ಹಸಿವು ಎನ್ನುವ ಪದ ಪ್ರತಿ ಮಾಡುವವರ ಕೈಲಿ ಸಿಕ್ಕಿ ಹಸುವು ಎಂದಾಗಿದೆ. ಉತ್ತರ ಕರ್ನಾಟಕದಲ್ಲಿ ಕೆಲವು ಜನರು 'ಹರಳು' ಎನ್ನುವ ಬದಲು 'ಹಳ್ಳ' ಎನ್ನುವಂತೆ. ''ಮೊಸರನ್ನದಾಗೆ ಹಳ್ಳ ಬಂದಂತೆ'' ಎಂದು ಮೊದಲಿಗೆ ಕೇಳಿದಾಗ ಅನ್ನದೊಳಗೆ ಹಳ್ಳ ಅರ್ಥಾತ್ ಪ್ರವಾಹ ಹೇಗೆ ಬರುತ್ತದೆ ಎಂದು ನನಗೆ ಆಶ್ಚರ್ಯವಾಗಿತ್ತು.

ನಂತರ ತಿಳಿಯಿತು ಅದು ಹರಳು ಅಂದರೆ ಕಲ್ಲು ಎಂದು. ಹಾಗೆಯೇ ಬೆಳಗಾಂ, ಬಿಜಾಪುರ ಜಿಲ್ಲೆಯ ಅನೇಕರು 'ಣ', 'ನ'ಕಾರಗಳ ತಪ್ಪು ಮಾಡಿ, ''ಅಣ್ಣ ಮುಗಿದು ಹೋಗಿದೆ''. ''ಅನ್ನ ಬರುತ್ತಿದ್ದಾನೆ'' ಎಂದಾಗ ಗಾಬರಿಯಾಗುವುದುಂಟು. ಅದೇ ರೀತಿ ''ಹಸಿವು'' ಎಂಬುದನ್ನು ಹಸುವು ಎಂದು ಎಷ್ಟೋ ಜನ ಬಳಸುವುದುಂಟು. ಮಾದಾರ ಚನ್ನಯ್ಯ ತಾನು ಹಸಿವನ್ನು ನಿಗ್ರಹಿಸಿಕೊಂಡು ಅರ್ಥಾತ್ ಕೊಂದು ತನ್ನ ಪಾಲಿನ ಅಂಬಲಿಯನ್ನು ಗುರುವಿಗೆ ಕೊಟ್ಟನು. ಇದು ಸಾಮಾನ್ಯವಲ್ಲ !

''ಶಿಶುವೇಧೆಗಾರನು ಡೋಹರ ಕಕ್ಕಯ್ಯ'' ಮಾನವನ ಮನಸ್ಸೆಂಬ ಗರ್ಭದಲ್ಲಿ ಹಲವಾರು ಆಸೆ-ಆಕಾಂಕ್ಷೆಗಳೆಂಬ ಶಿಶುಗಳು ಮೈತಳೆಯುವುದುಂಟು. ಮಹಾಪ್ರಸಾದಿಯಾದ ಕಕ್ಕಯ್ಯ ಆ ಬಯಕೆಗಳೆಂಬ ಶಿಶುಗಳನ್ನು ಹತ ಮಾಡುತ್ತಲಿದ್ದ. ಹೀಗಾಗಿ ಆತ ಶಿಶುವೇಧೆಗಾರ !

ಪಾಪಕರ್ಮಿ ನಮ್ಮ ಮಡಿವಾಳ ಮಾಚಯ್ಯ : ಮಾಚಿದೇವರು ಕಠೋರ ಶಿಸ್ತಿನ ಸ್ವಭಾವದವರು. ಧಾರ್ಮಿಕವಾಗಿ, ವ್ರತಾಚಾರಗಳಲ್ಲಿ ತಪ್ಪು ಮಾಡಿದವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಬೇಕು ಎನ್ನುವವರು. ಬಸವಣ್ಣನವರ ಮಾತೃಹೃದಯ, ''ಪಾಪ ! ಹೋಗಲಿ ಬಿಡಿ. ಮಾನವರು ಸಹಜವಾಗಿ ತಪ್ಪು ಮಾಡುತ್ತಾರೆ'' ಎಂದು ಕ್ಷಮಿಸಹೋದರೆ ಮಾಚಿದೇವರು ''ನೀವು ಹೀಗೆಲ್ಲ ಸಡಿಲವಾದರೆ ಪ್ರಯೋಜನವಿಲ್ಲ'' ಎಂದು ಕ್ರಮ ಕೈಗೊಂಡು ವಂಚಕರಿಗೆ ಸಿಂಹಸ್ವಪ್ನವಾಗುತ್ತಿದ್ದರು. ಅಂಥ ಕೆಲವು ಪ್ರಸಂಗ ನೋಡಿ ಬಸವಣ್ಣನವರು ನಕ್ಕು ''ನೀವು ಬಹಳ ಪಾಪ ಕರ್ಮಿ'' ಎಂದಿರಬಹುದು. ಅದಕ್ಕೆ ಮಾಚಿದೇವರು ಜಗ್ಗುವವರಲ್ಲ ''ನೀವೇನಾದರೂ ಅನ್ನಿ, ನಾನಂತು ಹೀಗೆ ಮಾಡುವವನೆ'' ಎಂದು ಓಡಿ ಹೋಗಿ ಅಕ್ಕಮಹಾದೇವಿಗೆ ನಡೆಮಡಿ ಹಾಸಿದ ಮಹಿಮ. ಇಂತಹ ವಿಲಕ್ಷಣ ಶರಣರಿಗೆಲ್ಲ ಲಿಂಗದೇವಯ್ಯನು ಒಲಿದು ಬಿಟ್ಟ; ಅವರ ಸ್ವಭಾವದಲ್ಲಿನ ವಿಲಕ್ಷಣತೆ ದೇವನಿಗೆ ಪ್ರಿಯವೇ ಆಯಿತು ಎಂದಿದ್ದಾರೆ ಬಸವಣ್ಣನವರು. ಅವರೇ ನುಡಿದಿರುವಂತೆ,

''ಹಾವಿನ ಡೊಂಕು ಹುತ್ತಕ್ಕೆ ಸಸಿನ
ನದಿಯ ಡೊಂಕು ಸಮುದ್ರಕ್ಕೆ ಸಸಿನ
ಲಿಂಗದೇವನ ಶರಣರ ಡೊಂಕು ಲಿಂಗಕ್ಕೆ ಸಸಿನ !''

- ಧರ್ಮಪಿತ ಬಸವಣ್ಣನವರು

★★★

? ಸಮಸ್ಯೆ - ಸಮಾಧಾನ !

- ಮಾತಾಜಿ

- ಮಲ್ಲಿಕಾರ್ಜುನ ಡೊಣಗಾಪುರೆ ಲಿಂಗಾಯತ್, ಭಾಲ್ಕಿ

? ದೇವರು ಕಾಮನ ಕೊಂದನೆಂಬರು; ದೇವರಿಗಿಬ್ಬರು ಹೆಂಡಿರುಂಟು
ದೇವರು ಕಾಮನ ಕೊಂದುದಿಲ್ಲ ಕಾಣಿಭೊ !
ಕಾಮವೈರಿಗಳು ಕಾಮನ ಕೊಂದ ಮೂವರಿತ್ತಲೈದಾರೆ -
ಲಿಂಗದೇವನಲ್ಲಿ ಶುಕನು, ಸೊನ್ನಲಿಗೆ ಸಿದ್ಧರಾಮಯ್ಯನು, ಹನುಮಂತನು (ಬ.ವ.ದಿ - 1270)

ಈ ವಚನದ ಅರ್ಥವೇನು ?

★ ಇಲ್ಲಿ ಎರಡು ಬಗೆಯ ಅರ್ಥ ಮೊದಲನೆಯ ವಾಕ್ಯದಲ್ಲುಂಟು. ದೇವರು ಅರ್ಥಾತ್ ''ಶಿವನು ಕಾಮನನ್ನು ಕೊಂದಿದ್ದಾನೆ'' ಎಂದು ಜನರು ಹೇಳುತ್ತಾರೆ. ದೇವರು ಕಾಮ, ಕ್ರೋಧ ಮುಂತಾದ ದೌರ್ಬಲ್ಯಗಳಿಗೆ ಬಲಿಯಾಗುವುದುಂಟೆ ? ಎಂಬ ಅಂತರಾರ್ಥ ಒಂದು. ಇನ್ನೊಂದು ''ಶಿವನು ಕಾಮದಹನವನ್ನು ಮಾಡಿದ'' ಎನ್ನುವರಲ್ಲ, ನಿಜವಾಗಿಯೂ ಕಾಮದಹನ ಮಾಡಿದ್ದರೆ ಪಾರ್ವತಿಯನ್ನು ಏಕೆ ವಿವಾಹವಾಗುತ್ತಿದ್ದ ? ದಾಕ್ಷಾಯಿಣಿ ಮತ್ತು ಪಾರ್ವತಿ ಎಂಬ ಇಬ್ಬರು ಹೆಂಡತಿಯರು ಹೇಗೆ ಇರುತ್ತಿದ್ದರು ? ''ದೇವರು ಕಾಮನ ಕೊಂದುದಿಲ್ಲ'' ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ದೇವರು ಕಾಮಕ್ರೋಧಾದಿ ದೌರ್ಬಲ್ಯ ವಿರಹಿತ ಮಂಗಲ ಸ್ವರೂಪನಿರುವಾಗ ಇನ್ನು ಕೊಲ್ಲುವುದು, ಗೆಲ್ಲುವುದು ಎಂಬುದರಲ್ಲಿ ಅರ್ಥವಿದೆಯೆ ? ನಿಜವಾದ ವೈರಾಗ್ಯ ಮೂರ್ತಿಗಳೆಂದರೆ ಹನುಮಂತ, ಶುಕ ಮಹರ್ಷಿ ಮತ್ತು ಸೊನ್ನಲಿಗೆಯ ಸಿದ್ಧರಾಮಯ್ಯ ಎಂದು ಬಸವಣ್ಣನವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

- ಚಂದ್ರಶೇಖರ ಕನ್ನೂರು, ಗುಲಬರ್ಗಾ

? ಜೀವನದಲ್ಲಿ ಹಣ ಮುಖ್ಯವೋ, ತತ್ತ್ವನಿಷ್ಠೆ ಮುಖ್ಯವೊ ?

★ ಶರಣರ ದೃಷ್ಟಿಯಲ್ಲಿ ತತ್ತ್ವನಿಷ್ಠೆ ಮುಖ್ಯ, ಲೌಕಿಕರ ದೃಷ್ಟಿಯಲ್ಲಿ ಹಣ ಮುಖ್ಯ. ಹಣವಿದ್ದರೆ ಸಾಮಾಜಿಕ ಸ್ಥಾನ ಮಾನ ಇರುತ್ತದೆ ಎಂದು ಲೌಕಿಕ ಸ್ವಭಾವದ ಗೃಹಸ್ಥರು ಮಾತ್ರವಲ್ಲ ಸ್ವಾಮಿಗಳು ಸಹ ಚಿಂತಿಸುತ್ತಾರೆ. ಆದರೆ ಶರಣರು ಮಾತ್ರ ಆತ್ಮ ತೃಪ್ತಿಗಾಗಿ ಹಾತೊರೆಯುತ್ತಾರೆ. ಆದ್ದರಿಂದ ಮೊದಲು ಧ್ಯೇಯವನ್ನು ಗುರುತಿಸಿಕೊಳ್ಳಿ. ಆಗ ಏನನ್ನು ಗಳಿಸಬೇಕು ಎಂಬುದು ಮನವರಿಕೆಯಾಗುತ್ತದೆ.

- ಕುಮಾರ, ಕನಕಪುರ

? ಭಕ್ತಿ ಎಂದರೇನು ?

★ ಈ ಪದಕ್ಕೆ ವ್ಯಾಖ್ಯಾನ ನೀಡಲು ಉದ್ಗ್ರಂಥಗಳೇ ರಚನೆಯಾಗಿವೆ. ಭಕ್ತಿ ಎಂದರೆ ಧ್ಯೇಯವಸ್ತುವಿನಲ್ಲಿ ವ್ಯಕ್ತಿ ಹೊಂದುವ ಶರಣಾಗತಿ; ಉದಾತ್ತೀಕರಣಗೊಂಡ ಪ್ರೀತಿ. ಪ್ರೀತಿಸುವುದು ಒಂದು ಹುಟ್ಟುಗುಣ (Instinct). ಪ್ರೀತಿಯು ಮಕ್ಕಳ ಕಡೆಗೆ ಹರಿದಾಗ ವಾತ್ಸಲ್ಯ, ಪತಿ-ಪತ್ನಿಯರ ಕಡೆ ಹರಿದಾಗ ಪ್ರೇಮ, ರಾಷ್ಟ್ರದ ಕಡೆಗೆ ಹರಿದಾಗ ದೇಶಭಕ್ತಿ, ಪ್ರಾಣಿಗಳ ಕಡೆ ಹರಿದಾಗ ದಯೆ,

ದೀನರು ದುಃಖಿತರ ಕಡೆ ಹರಿದಾಗ ಮಾನವೀಯತೆ, ಇದೇ ಪ್ರೀತಿಯು ದೇವರ ಮುಖವಾಗಿ ಹರಿದಾಗ ಭಕ್ತಿ.

- ಸಿ. ಎಂ. ರಾಜಣ್ಣ, ಹಿರಿಯೂರು

? ಶ್ರೀಗುರು ಬಸವಣ್ಣನವರು ಕಟ್ಟಿದ ಅನುಭವ ಮಂಟಪದಲ್ಲಿ ಅನುಭಾವಿಗಳು ಮತ್ತು ದಾರ್ಶನಿಕರು ಇದ್ದರೆಂದು ತಿಳಿದು ಬರುತ್ತದೆ. ಇಬ್ಬರೊಳಗಣ ವ್ಯತ್ಯಾಸವೇನು ಮತ್ತು ಯಾರು ಶ್ರೇಷ್ಠರು ?

★ ಹಣ್ಣು ತಿಂದು ಹರ್ಷಗೊಂಡು ಮೌನ ತಾಳಿ ಕುಳಿತುಕೊಳ್ಳುವವನು ಒಬ್ಬ, ಹಣ್ಣು ತಿಂದು ಆ ಸವಿಯನ್ನು ಬಣ್ಣಿಸುವವನು ಇನ್ನೊಬ್ಬ, ಹಾಗೆ ದಿವ್ಯಾನುಭವದ ಫಲವನ್ನು ಉಂಡು, ಸಂತೋಷಿಸಿ, ಶಬ್ದಮುಗ್ಧನಾಗಿ ಉಳಿಯುವವನು ದಿವ್ಯಾನುಭಾವಿ. ಆ ಅನುಭವ ಪಡೆದ ಮೇಲೆ ಅದರ ಸವಿಯನ್ನು ಸಾಹಿತ್ಯದ ಮೂಲಕ, ವಾಣಿಯ ಮೂಲಕ ಬಗೆಬಗೆಯಾಗಿ ಬಣ್ಣಿಸುವವನು ದಾರ್ಶನಿಕ. ಎರಡನೆಯವನೇ ಹೆಚ್ಚಿನ ಸಾಧಕನಾಗುವನಲ್ಲವೆ ?

? ಯೋಗಾಸನ ಎಂದರೆ ಬರೀ ಯಾಂತ್ರಿಕ ವ್ಯಾಯಾಮವಲ್ಲ. ದೇಹ-ಮನಸ್ಸು-ಚಿತ್ತಗಳ ಮಿಲನ. ಎಲ್ಲಕ್ಕೂ ಶ್ರೇಷ್ಠವಾದುದು ಪದ್ಮಾಸನ. ಪ್ರಾಣಾಯಾಮದ ಪರಮೋನ್ನತ ಸಿದ್ಧಿಯೇ ಕಾಯದಿಂದ ಆತ್ಮವನ್ನು ಬೇರ್ಪಡಿಸುವುದು ಎಂದು ನನ್ನ ಅನಿಸಿಕೆ. ಇದು ಸರಿಯೆ ?

★ ಪೂರ್ಣವಾಗಿ ಸರಿ. ಇದಕ್ಕೆ ಪೂರಕವಾಗಿದೆ ಧರ್ಮಪಿತರ ವಚನ :

ಪಶ್ಚಿಮ ಪದ್ಮಾಸನದಲ್ಲಿ ಕುಳಿತು
ತುಟಿ ಮಿಡುಕದೆ ಅಟ್ಟಿಯಾಡಿತ್ತಲ್ಲಾ!
ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ,
ಲಿಂಗದೇವ ಹಿಡಿವಡೆದ. - ಬ.ವ.ದೀ-810

- ಎನ್. ಬೇಗಂ, ಇಸ್ಲಾಂಪುರ, ಗಂಗಾವತಿ

? ಹಸಿವೆ ನೀನು ನಿಲ್ಲು ನಿಲ್ಲು. ಈ ವಚನದ ಅರ್ಥವನ್ನು ಸಾಧಕರಿಗೆ ಬೇಕಾಗುವ ಪರಿಯಲ್ಲಿ ತಿಳಿಸಿರಿ.

★ ಇದು ವೀರವಿರಾಗಿಣಿ ಅಕ್ಕಮಹಾದೇವಿಯ ಒಂದು ಮಹತ್ವಪೂರ್ಣ ವಚನ. ಹಸಿವೆ, ತೃಷೆ, ನಿದ್ರೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವುಗಳಲ್ಲಿ ಮೊದಲನೆಯ ಮೂರು ಶರೀರ ಗುಣಗಳು, ಉಳಿದ ಆರು ಮನೋಗುಣಗಳು. ಪರಮಾತ್ಮನ ಕೃಪೆಯಂತಹ ಅತ್ಯುನ್ನತ ಧ್ಯೇಯ ಮಾತ್ರವಲ್ಲ ವಿದ್ಯಾಭ್ಯಾಸ, ಸಂಶೋಧನೆ, ಸಾಹಿತ್ಯ ರಚನೆ, ಧರ್ಮ ಪ್ರಚಾರ ಮುಂತಾದ ಯಾವುದೇ ಸಾಧನೆ ಮಾಡುವಾಗಲೂ ಶರೀರ ಮತ್ತು ಮನೋದೌರ್ಬಲ್ಯಗಳು ಕಾಡುತ್ತಿರುತ್ತವೆ. ಅವುಗಳಿಗೆ ಬಲಿಯಾದಾಗ ಸಾಧನೆಯು ನಿಂತು ಹೋಗುತ್ತದೆ. ''ಚನ್ನಮಲ್ಲಿಕಾರ್ಜುನ ಅಂದರೆ ಪರಮಾತ್ಮ ಎನ್ನುವ ಪರಮೋನ್ನತ ಧ್ಯೇಯದೆಡೆಗೆ ಅವಸರದಿಂದ ಸಾಗುತ್ತಿದ್ದೇನೆ. ನಿಮ್ಮೊಡನೆ ಮಾತನಾಡಲು ನನಗೆ ಸಮಯವಿಲ್ಲ'' ಎಂದು ಹೇಳಿ ''ಶರಣು ಶರಣಾರ್ಥಿ'' ಎಂದು ಅವುಗಳಿಗೆ ವಿದಾಯ ಹೇಳುತ್ತಿದ್ದಾಳೆ. ಏಕೆಂದರೆ ಇವುಗಳೊಡನೆ ಸಖ್ಯ ಬೆಳೆಸಿ ಮಾತಿಗೆ ನಿಂತರೆ ದೇವರು ಕೋಪಗೊಳ್ಳುವನು.

? ''ಹಸಿವು ತೊರೆದಾಗಲೇ ಇಷ್ಟಲಿಂಗಾರ್ಚನಾ ಸಿದ್ಧಿ, ತೃಷೆ ತೊರೆದಾಗಲೇ ಪ್ರಾಣಲಿಂಗಾರ್ಚನಾ ಸಿದ್ಧಿ'' ಎಂದರೇನು? ದೇವರನ್ನೊಲಿಸಲು ಊಟ-ನೀರು ಬಿಡಬೇಕೆ?

★ ಯಾವ ವ್ಯಕ್ತಿ ಯಾವ ಮೌಲ್ಯಕ್ಕಾಗಿ ಬಾಳುತ್ತಾನೆ ಎಂಬುದು ಬಹಳ ಮುಖ್ಯ. ಧರ್ಮಪಿತ ಬಸವಣ್ಣನವರ ಆದೇಶವೆಂದರೆ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಪೂರೈಸಿ ಮೊಟ್ಟಮೊದಲು ನಾಲಿಗೆಯ ಮೇಲೆ ಕರುಣೋದಕ (ತೀರ್ಥ), ಕರುಣಪ್ರಸಾದ ಸ್ವೀಕರಿಸಿ ನಂತರ ಆಹಾರ, ಪಾನೀಯ ಸ್ವೀಕರಿಸಬೇಕು. ಆ ನಿಷ್ಠೆ ಬೆಳೆಸಿಕೊಳ್ಳಬೇಕು. ಬಹಳ ಜನರು ಎದ್ದ ತಕ್ಷಣ ಕಾಫಿ, ಟೀ ಕುಡಿದು, ತಿಂಡಿ ಪೂರೈಸಿ ಯಾವಾಗಲೋ ಸ್ನಾನ-ಪೂಜೆ ಮಾಡುತ್ತಾರೆ. ಅಂದರೆ ಅವರಿಗೆ ದೇವರ ಪೂಜೆಗಿಂತಲೂ ದೇಹವನ್ನು ಜೋಪಾನ ಮಾಡಿಕೊಳ್ಳುವುದೇ ಮುಖ್ಯವಾಗಿರುತ್ತದೆ. ಮತ್ತೆ ಕೆಲವರು ಸ್ವಲ್ಪ ಜ್ವರ, ನೆಗಡಿ ಆದರೆ ಸ್ನಾನ-ಪೂಜೆಗಳನ್ನೇ ಬಿಡುತ್ತಾರೆ. (ನಿಜವಾಗಿ ಹೇಳಬೇಕೆಂದರೆ ನೆಗಡಿ - ಕೆಮ್ಮು - ಜ್ವರ ಇರುವಾಗ ಉಗುರು ಬೆಚ್ಚನೆ ನೀರಲ್ಲಿ ಸ್ನಾನ ಮಾಡಿದರೆ ಶರೀರದ ತಾಪ ಇಳಿಯುತ್ತದೆ, ಮೂಗು ಕಟ್ಟಿರುವುದು, ಕಫ ಸಡಲುತ್ತದೆ) ನಿಷ್ಠೆಯಿರುವ ಶರಣ ಯಾವುದೇ ಪ್ರಸಂಗದಲ್ಲೂ ಸ್ನಾನ-ಪೂಜೆ ಇಲ್ಲದೆ ಹಸಿವು-ತೃಷೆಯನ್ನು ತಣಿಸಲು ಹೋಗುವುದಿಲ್ಲ. ಅದಕ್ಕೇ ಧರ್ಮಪಿತರು ಹೇಳುತ್ತಾರೆ:

''ದೇಹಧರ್ಮ ಆದಂತೆ ಆಗಲಿ, ನಾ ನಿಮ್ಮ ಪೂಜಿಸಿದಲ್ಲದೆ ಇರಲಾರೆನಯ್ಯ'' ಎಂದು. ಆದ್ದರಿಂದ ಶರಣ ಧರ್ಮದ ಪ್ರಕಾರ ಅನ್ನ-ನೀರು ತೊರೆಯಬೇಕಿಲ್ಲ, ಇಷ್ಟಲಿಂಗಾರ್ಚನೆ ಮಾಡಿ ನಂತರ ದೈವೀಕರಣಗೊಂಡ ಪ್ರಸಾದ (ತಿಂಡಿ, ಊಟ, ಪಾನೀಯ) ಸ್ವೀಕರಿಸಬೇಕು.

- ಬಸಪ್ಪ ಮಠಪತಿ, ಪೂನಾ

? ನಾನೊಬ್ಬ ಲಿಂಗಾಯತ. ನಾನು ಹುಟ್ಟಿ ಬೆಳೆದುದೆಲ್ಲ ಮಹಾರಾಷ್ಟ್ರದಲ್ಲಿ. ಹೀಗಾಗಿ ಓದಿದ್ದು ಮರಾಠಿ ಮತ್ತು ಇಂಗ್ಲೀಷ್. ಮಹಾರಾಷ್ಟ್ರದಲ್ಲಿ ಬ್ರಾಹ್ಮಣರು ನಮ್ಮನ್ನು ಹಿಂದುಗಳೆಂದು ಒಪ್ಪಿಕೊಳ್ಳುವುದಿಲ್ಲ. ರಾಜಕೀಯ ಧುರೀಣರು ನಮ್ಮನ್ನು ಹಿಂದುಗಳು ಎನ್ನುತ್ತಾರೆ. ನನ್ನ ಸಂದೇಹ ಪರಿಹರಿಸಿರಿ.

★ ಆಕಸ್ಮಿಕವಾಗಿ ಲಿಂ॥ ಡಾ. ಡಿ.ಸಿ. ಪಾವಟೆಯವರ ಒಂದು ಲೇಖನ ಇದೇ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಓದಿ ನೋಡಿರಿ. ಲಿಂಗಾಯತರು ಸಾಂಸ್ಕೃತಿಕವಾಗಿ ಹಿಂದುಗಳೇ ವಿನಾ ಧಾರ್ಮಿಕವಾಗಿ, ಸೈದ್ಧಾಂತಿಕವಾಗಿ ಹಿಂದುಗಳಲ್ಲ. ಸುಪ್ರೀಂ ಕೋರ್ಟಿನಲ್ಲಿ ಕೆಲವು ತೀರ್ಪು ಸಹ ಹೀಗೇ ಆಗಿವೆ. ಹಿಂದು ಎಂದರೆ ತ್ರಿಮೂರ್ತಿಗಳನ್ನು, ಹಿಂದು ದೇವತೆಗಳನ್ನು ಪೂಜಿಸುವವನು, ವೇದ, ಆಗಮ, ಗೀತೆ ಮುಂತಾದ ಶಾಸ್ತ್ರಗಳನ್ನು ಅನುಸರಿಸುವವನು, ಚತುರ್ವರ್ಣಗಳಲ್ಲಿ ಅವು ದೇವ ನಿರ್ಮಿತವೆಂದು ನಂಬಿಗೆ ಇಟ್ಟವನು. ಗಂಗೆ, ಯಮುನಾ ಇತ್ಯಾದಿ ನದಿಗಳು ಪವಿತ್ರವೆಂದು ತಿಳಿದವನು. ಗೋಪೂಜೆ ಮಾಡುವವನು. ಬಸವಾದಿ ಪ್ರಮಥರು ಕೊಟ್ಟ ವಚನ ಸಾಹಿತ್ಯವನ್ನು ಧಾರ್ಮಿಕ ಸಂವಿಧಾನವೆಂದು ನಂಬುವ ಲಿಂಗಾಯತ ಮೇಲಿನ ಯಾವನ್ನು ಅನುಸರಿಸಬಾರದು. ವೈದಿಕ ಹಿಂದು ಧರ್ಮದ ಪ್ರಕಾರ ಜನಿವಾರವಿಲ್ಲದವನು ಶೂದ್ರ. ಆದರೆ ವಚನ ಸಂವಿಧಾನದ ಪ್ರಕಾರ ಲಿಂಗಾಯತರು ಅತಿ ವರ್ಣಾಶ್ರಮಿಗಳು. ಈ ಎಲ್ಲ ದೃಷ್ಟಿಯಿಂದ ಲಿಂಗಾಯತರು ಜೈನ, ಬೌದ್ಧ, ಸಿಖ್ಖರಂತೆ ಅಹಿಂದುಗಳು. ರಾಜಕಾರಣಿಗಳು ನಾನಾ ಕಾರಣಗಳಿಗಾಗಿ ಲಿಂಗಾಯತರನ್ನು ಹಿಂದುಗಳೆನ್ನುತ್ತಾರೆ. ಅದರಲ್ಲಿ ಅರ್ಥವಿಲ್ಲ. ಲಿಂಗಾಯತರು ಅವರು ಹಿಂದೂ ಸಮಾಜದ ವಿರೋಧಿಗಳಲ್ಲ.

★★★

ಶರಣ ವ್ರತ ಸ್ವೀಕಾರ

ಪ್ರತಿಯೊಂದು ಧರ್ಮದವರೂ ಕೆಲವೊಂದು ವ್ರತ, ನಿಯಮಗಳನ್ನು ಅತ್ಯಂತ ನಿಷ್ಠೆಯಿಂದ ಪಾಲಿಸುವರು. ಇವು ವ್ಯಕ್ತಿಯ ಧಾರ್ಮಿಕ ನಂಬಿಕೆಯನ್ನು ಗಟ್ಟಿಗೊಳಿಸುತ್ತವೆ. ಬಸವ ಸಂಸ್ಥಾಪಿತ ಲಿಂಗಾಯತ ಧರ್ಮವು ಪ್ರಗತಿಪರ ದೃಷ್ಟಿಕೋನದ ವೈಚಾರಿಕ ಧರ್ಮ. ಇದರ ಸಿದ್ಧಾಂತಕ್ಕೆ ತಕ್ಕಂತೆ ''ಶರಣ ವ್ರತ'' ಎಂಬ ಪವಿತ್ರ ಆಚರಣೆಯನ್ನು ಬಳಕೆಗೆ ತರಲಾಗಿದೆ. 40,30, 20, 10 ದಿವಸಗಳ ಈ ವ್ರತಗಳಿಗೆ ಕ್ರಮವಾಗಿ ಗುರು ಸಾರಾಯ ಸಂಪತ್ ವ್ರತ, ಲಿಂಗ ಸಾರಾಯ ಸಂಪತ್ ವ್ರತ, ಜಂಗಮ ಸಾರಾಯ ಸಂಪತ್ ವ್ರತ, ಪ್ರಸಾದ ಸಾರಾಯ ಸಂಪತ್ ವ್ರತ ಎಂದು ಕರೆಯಲಾಗುತ್ತಿದೆ. 40 ದಿವಸಗಳ ವ್ರತ ಸ್ವೀಕರಿಸುವವರು ದಿ. 2-12-2004 ರಂದು ಪ್ರಾರಂಭಿಸಬೇಕು; 30 ದಿವಸಗಳ ವ್ರತಧಾರಿಗಳು ದಿ. 12-12-2004 ರಂದು, 20 ದಿವಸಗಳ ವ್ರತಧಾರಿಗಳು ದಿ. 22-12-2004 ರಂದು, 10 ದಿವಸಗಳ ವ್ರತ ಧಾರಿಗಳು 1-1-2005 ರಂದು ವ್ರತ ಸ್ವೀಕರಿಸಬೇಕು.

ವ್ರತದ ಕ್ರಮ

ಸುಪ್ರಭಾತದಲ್ಲಿ ಎದ್ದು ಸ್ನಾನ ಪೂರೈಸಿ ಇಷ್ಟಲಿಂಗಾರ್ಚನೆ ಮಾಡಿ, ಬಸವಣ್ಣನವರ 108 ನಾಮಾವಳಿ ಓದಿ ಪುಷ್ಪಾರ್ಚನೆ ಮಾಡಬೇಕು. ಬಸವ ವಚನ ದೀಪ್ತಿ (ವಚನಗಳು) ಬಸವ ದರ್ಶನ (ವಚನಗಳು) ಗ್ರಂಥಗಳಿಂದ ಬೆಳಿಗ್ಗೆ 50 ವಚನ ಓದಬೇಕು. ಅದೇ ರೀತಿ ಸಂಜೆ ಸಹ ಮಾಡಿ, 50 ವಚನ ಓದಬೇಕು. ವಚನ ಲೇಖವನ್ನು ಬಿಡುವಿನ ವೇಳೆಯಲ್ಲಿ ಮಾಡಬೇಕು. ಜನವರಿ 10ಕ್ಕೆ ವ್ರತ ಪೂರೈಸಬೇಕು. ವ್ರತದ ಅವಧಿಯಲ್ಲಿ ಬಿಳಿಯ ವಸ್ತ್ರಗಳನ್ನು ಹಾಕಿಕೊಂಡು, ಮೇಲೆ ಕಾವಿಯ ಸ್ಕಾರ್ಫ್ ಹೊದೆದು ಪೂಜೆ, ಪುಷ್ಪಾರ್ಚನೆ, ವಚನ ಪಾರಾಯಣ ಮಾಡಬೇಕು.

ಕೂಡಲ ಸಂಗಮಕ್ಕೆ ಬಂದು ಗಣಲಿಂಗದರ್ಶನ ಮಾಡಿ, ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಬೇಕು. ಅಲ್ಲಿ ನಡೆಯುವ ಸಾಮೂಹಿಕ ಪೂಜೆಗಳಲ್ಲಿ ಭಾಗವಹಿಸಿ, ಅಕ್ಕಿಯ ಕಾಳನ್ನು ಮಂತ್ರ ಪಠಣದಲ್ಲಿ ಬಳಸಿ ಅವನ್ನು ಸಂಗ್ರಹಿಸಿಕೊಂಡು ಬಂದು ತಮ್ಮ ತಮ್ಮ ಊರು ತಲ್ಪಿದ ನಂತರ ಆ ಅಕ್ಕಿಯ ಕಾಳನ್ನು ಉಪಯೋಗಿಸಿ ಪ್ರಸಾದ ಸಿದ್ಧಪಡಿಸಿ ಶರಣ ಬಂಧುಗಳಿಗೆ ದಾಸೋಹ ಮಾಡಬೇಕು. ಅಲ್ಲಿಗೆ ವ್ರತಾಚರಣೆಯು ಪೂರ್ತಿಯಾಗುತ್ತದೆ. ಸ್ವಯಂ ಪ್ರೇರಿತರಾಗಿ ಸ್ವೀಕರಿಸಿ ಹೆಚ್ಚಿನ ಜನರು ಶರಣ ವ್ರತಧಾರಿಗಳಾಗಿ ಶರಣ ಮೇಳಕ್ಕೆ ಬರಬೇಕಾಗಿ ಆಹ್ವಾನಿಸುತ್ತೇವೆ.

ಶುಭಹಾರೈಕೆಗಳೊಡನೆ


- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

13-1-2004, ಚನ್ನಬಸವ ಜಯಂತಿ

ವಚನ ಕಿರಣ

ಸಾವು ಬಯಸುವವಗೆ ನೋವಿನ ಹಂಗೇಕಯ್ಯಾ ?
ಸಾಧನೆ ಬಯಸುವವಗೆ ಸ್ತುತಿ-ನಿಂದೆಗಳ ಹಂಗೇಕಯ್ಯಾ ?
ವೈರಾಗ್ಯ ಬಯಸುವವಗೆ ಪೂರ್ವಾಶ್ರಮದ ಹಂಗೇಕಯ್ಯಾ ?
ಚಿರಾತ್ಮ ಪ್ರಭುವೇ ನಿನ್ನ ಬಯಸುವವಗೆ ಮುಕ್ತಿಯ ಹಂಗೇಕಯ್ಯಾ ?


- ಶಂಕರ್, ಡ್ರೈವರ್




ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ದಿ. 3-10-2004 ರಿಂದ 15-10-2004 ತರಬೇತಿ ಕಮ್ಮಟದ ಉದ್ಘಾಟನಾ ಸಮಾರಂಭ ಧಾರವಾಡದ ಗ್ರಾಮೀಣ ಶಾಸಕರಾದ ವಿನಯ ಕುಲಕರ್ಣಿ ಇವರಿಂದ



ತರಬೇತಿ ಕಮ್ಮಟದ ಅವಧಿಯಲ್ಲಿ ದಿ. 10-10-2004 ರಂದು ಕಾನೂನು ಅರಿವು ಮತ್ತು ನೆರವು ಶಿಬಿರ ನಡೆಯಿತು. ನ್ಯಾಯಾಧೀಶರಾದ ಭಾರತಿ ದೇವಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.




ಅಕ್ಕಮಹಾದೇವಿ ಮಠದ ಆವರಣದಲ್ಲಿ ಬಸವ ಮಂಟಪದ ವೇದಿಕೆ



ಶಿಬಿರಾರ್ಥಿಗಳ ಸಮೂಹ. ಶರಣೆಯರ ಭಾಗ



5. ಅಕ್ಕಮಹಾದೇವಿ ಪೀಠ ಸ್ಥಾಪನೆಯ 35ನೆಯ ವಾರ್ಷಿಕೋತ್ಸವದಲ್ಲಿ ಪೀಠಾರೋಹಣ ಮಾಡಿದ ಪೂಜ್ಯ ಮಾತಾಜಿಯವರಿಗೆ ಅಭಿನಂದನೆ



6. ಪೀಠಾರೋಹಣ ಮಾಡಿದ ಪೂಜ್ಯ ಮಾತೆ ಗಂಗಾದೇವಿಯವರ ಮೇಲೆ ಪುಷ್ಪವೃಷ್ಟಿ



ಉಭಯ ಮಾತಾಜಿಗಳವರ ಮೇಲೆ ಪುಷ್ಪವೃಷ್ಟಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ



ಉಭಯ ಮಾತಾಜಿಗಳವರ ಮೇಲೆ ಪುಷ್ಪವೃಷ್ಟಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ



ಹುಬ್ಬಳ್ಳಿ ಧಾರವಾಡ ಮಹಾನಗರದ ಮೇಯರ್ ಶ್ರೀ ಮಂಗಳಗೌರಿ ಅಗ್ನಿಹೋತ್ರಿ ಇವರಿಂದ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ (ದಿ. 16-10-2004)



ಶ್ರೀಮತಿ ಮಂಗಳಗೌರಿ ಅವರಿಗೆ ಶಾಲು ಹೊದ್ದಿಸಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರಿಂದ ಸತ್ಕಾರ




ದಿ. 17-10-2004 ರಂದು ಗೋಷ್ಠಿಯ ಉದ್ಘಾಟನೆಯ ನಂತರ ವಿ.ಆರ್.ಎಲ್ ಮಾಲಿಕ ಆನಂದ ಸಂಕೇಶ್ವರ ಅವರಿಂದ ಭಾಷಣ



ಶ್ರೀ ಆನಂದ ಸಂಕೇಶ್ವರ್ ಅವರಿಂದ ನೆನಪಿನ ಕಾಣಿಕೆ ಕೊಡುಗೆ



ಗೋಷ್ಠಿಯ ವೇದಿಕೆಯಲ್ಲಿ ಆಂಧ್ರ ಪ್ರದೇಶ ರಾ.ಬ.ದಳ ಅಧ್ಯಕ್ಷ ಸುಭಾಷ್ ಪಾಟೀಲ್, ಗಂಗಣ್ಣ ಬತ್ತಿ, ಡಾ॥ ಚೇತನ್ ಕುಮಾರ್ ನಾಯಕ್, ಶಂಕರಣ್ಣ ಮುನವಳ್ಳಿ, ಆನಂದ ಸಂಕೇಶ್ವರ ಮತ್ತು ಪೂಜ್ಯ ಮಾತಾಜಿ (ಎಡದಿಂದ ಬಲಕ್ಕೆ)




ಪೂಜ್ಯ ಮಾತಾಜಿ, ಪೂಜ್ಯ ಮಾತೆ ಗಂಗಾದೇವಿ, ಬಸವರಾಜ ದೇವರು, ಚನ್ನಬಸವಾನಂದ ಸ್ವಾಮೀಜಿ, ದಾಕ್ಷಾಯಿಣಿ ದೊಡ್ಡೂರು, ಅಜ್ಜಪ್ಪ ಹೊರಕೇರಿ, ನಾಗಪ್ಪ ಗುರು ಬಸಪ್ಪ ಬಿದರಿ (ಎಡದಿಂದ ಬಲಕ್ಕೆ)



ಶಿಬಿರಾರ್ಥಿಗಳಿಂದ ಕಿತ್ತೂರು ಶಿವಲಿಂಗ ಸರ್ಜನ ಕುರಿತ ನಾಟಕ ಪ್ರದರ್ಶನ. ಬೆಂಗಳೂರಿನ ನಾಗರಾಜಪ್ಪ ಬೀದರಿನ ಮಹಾರುದ್ರ ಡಾಕುಳಗೆ, ಧಾರವಾಡದ ವಚನಾಂಬಿಕೆ




ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ನೃತ್ಯ ರೂಪಕ: ಧಾರವಾಡದ ಪ್ರತಿಭಾ ಗರಗ, ಮಮತಾ ಮುಮ್ಮಿಗಟ್ಟಿ ಬಾಲಕ ಬಸವಣ್ಣನಾಗಿ ಚಿತ್ರದುರ್ಗದ ಬಸವ ಜ್ಯೋತಿ



ಚನ್ನಬಸವೇಶ್ವರ ವಿದ್ಯಾಲಯದ ಮಹಾದ್ವಾರ




ಚನ್ನಬಸವೇಶ್ವರ ಶರಣಾಲಯದ ಆವರಣದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ



ದುರ್ಗಮ ಆರಣ್ಯಗರ್ಭದಲ್ಲಿರುವ ಮಹಾಮನೆ ಗವಿಯ ಮುಂಭಾಗ



ಮಹಾಮನೆ ಗವಿಯತ್ತ ಸಾಗಲು ಹಳ್ಳವನ್ನು ದಾಟುತ್ತಿರುವ ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ ಮತ್ತಿತರರು



CPMG / KA / BGW - 50 / 2003 - 2005 WPP (W) - 17 R.No. 19980/70

